ಅಧ್ಯಕ್ಷರು: ಈಗ ಎರಡು ಗಂಟೆವರೆಗೆ ನಡೆಸೋಣ. ಆದ್ದರಿಂದ ಈಗ ಒಂದೂವರೆ ಗಂಟೆವರೆಗೆ ಚರ್ಚೆ. ಒಂದೂವರೆ ಗಂಟೆ ಆದ ಮೇಲೆ ಮಾನ್ಯ ಮಂತ್ರಿಗಳಿಂದ ಉತ್ತರ. ಹೆಗ್ಡೆಯವರೇ ಮಾತನಾಡಿ.

3. ನಿಯಮ 69ರ ಅಡಿಯಲ್ಲಿನ ಮುಂದುವರೆದ ಚರ್ಚೆ :

ವಿಷಯ: ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಮೊನ್ನೆಯಿಂದ ರಾಜ್ಯದಲ್ಲಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ಬಹಳಷ್ಟು ಆಗಿದೆ. ಬಹಳ ಪ್ರಮುಖವಾಗಿ ಗಮನಿಸಬೇಕಾಗಿರುವುದು ರಾಜಸ್ತಾನ ಬಿಟ್ಟರೆ ಕರ್ನಾಟಕ ರಾಜ್ಯದಲ್ಲಿಯೇ ಹೆಚ್ಚು ಭಾಗ ಬರದ ಕಾರಣ desert ಆಗುತ್ತಿದೆಯೇನೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. 128 ತಾಲ್ಲೂಕುಗಳನ್ನು ಈಗಾಗಲೇ declare ಮಾಡಿದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಇನ್ನೆಷ್ಟು ತಾಲ್ಲೂಕುಗಳನ್ನು declare ಮಾಡುತ್ತಾರೆಂದು ಗೊತ್ತಾಗುವುದಿಲ್ಲ. ನಮ್ಮ ಭಾಗದಲ್ಲಿ ಅದನ್ನು ಸೇರಿಸಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ಕೃಷಿಕರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದಕ್ಕೆ ಮುಖ್ಯವಾಗಿ ನಾವು ವಿದ್ಯುತ್ ಬಗ್ಗೆ ಚರ್ಚೆಯನ್ನು ಆದರೊಟ್ಟಿಗೆ ಮಾಡಬೇಕಾಗಿದೆ. ನಾವು ಈಗಾಗಲೇ ಬೆಳಿಗ್ಗೆ ನಮ್ಮ ಭಾಗದಲ್ಲಿ ಬೆಳಿಗ್ಗೆ 7 ಗಂಟೆಯಿಂದ power shut down ಆಗುತ್ತಿದೆ. ಸಾಯಂಕಾಲ ಪುನ: ಎರಡು ಗಂಟೆ shut down ಆಗುತ್ತದೆ. ಅದರ ಮಧ್ಯದಲ್ಲಿ unscheduled power shut down ಎಷ್ಟು ಗಂಟೆಗಳಾಗುತ್ತಿದೆಯೋ ಗೊತ್ತಿಲ್ಲ. ಅದರ ಅರ್ಥ ಮುಂದಿನ ದಿನ ನಾವು ಹೆಚ್ಚು ವಿದ್ಯುತ್ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಇವತ್ತಿನವರೆಗೆ ನೀವು ವಿದ್ಯುತ್‌ನ್ನು ಖರೀದಿ ಮಾಡಲಿಕ್ಕೆ ಒಂದು ನಯಾಪೈಸೆ ಖರ್ಚು ಮಾಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಏನಾದರೂ ಮಾಡಿ ನೀವು power Minister ನ್ನು ಇಲ್ಲಿಗೆ ಕರೆಸಬೇಕಲ್ಲ ತಾವು ಕೃಪೆ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರು ಈ ಸದನದಕ್ಕೆ ಬಂದೇ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ದೊಡ್ಡ ಮನಸ್ಸು ಮಾಡಿ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರನ್ನು ಕರೆಸುವುದಕ್ಕಾಗುವುದಿಲ್ಲ. ಏಕೆಂದರೆ he is a most powerfull Minister ಹಾಗಾಗಿ ಆ ಪವರ್ ಇಲ್ಲಿ ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಧ್ಯಕ್ಷರೇ, He is most powerful, but the State does not Power. ಸ್ಟೇಟ್‌ಗೆ ಪವರ್ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಹೇಳಲಿ. ಅವರನ್ನು ಕರೆಸಲು ಆಗುತ್ತದೆಯೋ ಇಲ್ಲವೋ ಎಂದು ಹೇಳಲಿ.

ಅಧ್ಯಕ್ಷರು: ಹೇಳಿ ಕಳುಹಿಸುತ್ತೇನೆ. ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುವುದಕ್ಕೆ ಒಂದು ನಯಾಪೈಸೆಯನ್ನು ಖರ್ಚು ಮಾಡಿಲ್ಲ. ಒಂದು ಸಮಿತಿಯನ್ನು ಮಾಡಿದರು. ಉಪ ಮುಖ್ಯಮಂತ್ರಿಗಳನ್ನು ಅಧ್ಯಕ್ಷರು ಎಂದು ಮಾಡಿದ್ದರು. ಅವರು ಆಗುವುದಿಲ್ಲವೆಂದು ಹೇಳಿ ಬಿಟ್ಟುಬಿಟ್ಟರು. ತಪ್ಪಿಸಿಕೊಂಡು ಬಿಟ್ಟರು. ಈಗ ಮುಖ್ಯಮಂತ್ರಿಗಳು ಸ್ವತ: ಅಧ್ಯಕ್ಷರಾಗಿದ್ದಾರೆ. ಆದರೆ ಎಷ್ಟು ವಿದ್ಯುತ್ತನ್ನು ಖರೀದಿ ಮಾಡಲು ರಾಜ್ಯ ಸರ್ಕಾರ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದೆ ಎಂದು ಸ್ವಲ್ಪ ಸದನಕ್ಕೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲ ಭಾಗದ ಮಾಹಿತಿಯನ್ನು ನೀವು ಕೊಡಬೇಕು. ಎಲ್ಲೆಲ್ಲಿ ಎಷ್ಟು power shut down ಮಾಡುತ್ತಿದ್ದೀರಿ, ಈಗ ಎಷ್ಟು ವಿದ್ಯುತ್‌ಚ್ಛಕ್ತಿ ಉತ್ಪಾದನೆಯಾಗುತ್ತಿದೆ, irrigationಗೆ ಎಷ್ಟು, drinking waterಗೆ ಎಷ್ಟು? ಏಕೆಂದರೆ drinking water ಸಮಸ್ಯೆ power ಇಲ್ಲದಿದ್ದರೆ tankಗೆ ನೀರನ್ನು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. Tank ನಲ್ಲಿ ನೀರು ಇಲ್ಲದಿದ್ದರೆ ಊರಿಗೆ ನೀರನ್ನು ಕೊಡುವುದಕ್ಕಾಗುವುದಿಲ್ಲ. ಇದನ್ನು ಆಲೋಚನೆ ಮಾಡುತ್ತಿಲ್ಲವೆಂದು ಕಾಣುತ್ತದೆ. ಅದರ ಬಗ್ಗೆ ಎಷ್ಟು ಸಭೆಗಳಾಗಿದೆ? ಚರ್ಚೆಯಾಗಿದೆ ಎನ್ನುವ ಮಾಹಿತಿಯನ್ನು ಸರ್ಕಾರ ಕೊಡಬೇಕಾಗುತ್ತದೆ. ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ Water water everywhere, but not a drop to drink ಅಂತ ಗಾದೆ ಇದೆ. ಕರಾವಳಿಯಲ್ಲಿ ಬಹಳಷ್ಟು ನೀರಿದೆ ಎಂದು ಎಲ್ಲರ ಅಭಿಪ್ರಾಯ. ಬಂದ ನೀರೆಲ್ಲ ಸಮುದ್ರಕ್ಕೆ ಹೋಗುತ್ತದೆ. ಮತ್ತೆ porus nature of soil ನಿಂದ ಅಲ್ಲಿ ನೀರು ನಿಲ್ಲುತ್ತಿಲ್ಲ. ಅದಕ್ಕೆ tank ನ್ನು ಕಟ್ಟಬೇಕು. ಅದಕ್ಕೆ ಹೆಚ್ಚು ಹಣವನ್ನು ಒದಗಿಸುತ್ತಿಲ್ಲ. ನಾವು ಇವತ್ತು ಸಮಸ್ಯೆ ಏನಿದೆ, ಅದಕ್ಕೆ

ಎಷ್ಟು ಹಣವನ್ನು ಕೊಟ್ಟು ಪರಿಹಾರವನ್ನು ಮಾಡುತ್ತಿದ್ದೇವೆ ಎನ್ನುವ ಆಲೋಚನೆಯನ್ನು ಬಿಟ್ಟರೆ ಮುಂದಿನ ಯೋಜನೆಗಳನ್ನು ಹಾಕಿಕೊಳ್ಳುತ್ತಿಲ್ಲ. Soil conservation, greenery develop ಮಾಡುವುದಕ್ಕೆ ಅಣ್ಣಾ ಹಜಾರೆ ಅವರು ಮಾಡಿರುವುದನ್ನೆಲ್ಲ ಹೋಗಿ ನೋಡಿಕೊಂಡು ಬಂದಿದ್ದೀರಿ. ಆದರೆ ಅದೇ ರೀತಿ ಕಾರ್ಯಕ್ರಮವನ್ನು ಇಲ್ಲಿ ಏನು ಹಾಕಿಕೊಳ್ಳುತ್ತಿದ್ದೀರಿ? 12th finance ನಲ್ಲಿ ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಬೇರೆ ಬೇರೆ ಇಲಾಖೆಯಲ್ಲಿ forest department ನಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆ, ಎಷ್ಟು ಗಿಡಗಳನ್ನು ನೆಟ್ಟಿದ್ದಾರೆ? ಅದರ ಒಂದು auditing ನ್ನು ನಡೆಸುತ್ತೀರಾ? ರಸ್ತೆಗಳ ಬಗ್ಗೆ damage ಬಗ್ಗೆ ಮಾತನಾಡುತ್ತೇವೆ, ನಿನ್ನೆಯೆಲ್ಲ ಸಿದ್ದರಾಮಯ್ಯನವರು ಮಾತನಾಡುವಾಗ, ಮಾಧುಸ್ವಾಮಿಯವರು ಮಾತನಾಡುವಾಗ ಚರ್ಚೆಯನ್ನು ಮಾಡಿದೆವು. ಮಾನ್ಯ ಎಂ.ಪಿ.ಪ್ರಕಾಶ್ ಅವರು Revenue Minister ಆಗಿದ್ದಾಗ ಹಣ ಬಹಳಷ್ಟು ಕೊಟ್ಟರು. ನಮಗೆ 10 ಕೋಟಿ 85 ಲಕ್ಷ ರೂಪಾಯಿಗಳನ್ನೇನೊ ಕೊಟ್ಟರು. ಈ ವರ್ಷ ಬರೀ 4 ಕೋಟಿ ಕೊಟ್ಟಿದ್ದಾರೆ. ಹೆಚ್ಚು ಮಳೆ ಬಂದಿದೆ ಅಂತ ಅಭಿಪ್ರಾಯ ಕೊಡುತ್ತೀರಿ. ಆದರೆ 2004ರಲ್ಲಿ ಮಳೆಯ ಪ್ರಮಾಣ 3992.92ಮಿ.ಮೀ. 2005ರಲ್ಲಿ 3494 ಮಿ.ಮೀ. 2006ರಲ್ಲಿ 3255.05 ಮಿ.ಮೀ. ವರ್ಷ ವರ್ಷ ಕಡಿಮೆಯಾಗುತ್ತಿದೆ ಎಂಬುದು ಗಮನಾರ್ಹ. ಯಾವ ಕಾರಣಕ್ಕೆ ಕಡಿಮೆಯಾಗುತ್ತಿದೆ ಎಂದು ಅಧ್ಯಯನ ನಡೆಸಿ ಶಾಶ್ವತ ಪರಿಹಾರ ಕಂಡುಹಿಡಿಯಬೇಕು. ನಿನ್ನೆ ಚರ್ಚೆಯಾದಂತೆ ಕೇಂದ್ರ ಸರ್ಕಾರದಿಂದ ಎರಡು ವರ್ಷಗಳ ಹಿಂದೆ 785 ಕೋಟಿ ಬಂದಿದೆ. 2005-06ರಲ್ಲಿ ರೂ.444 ಕೋಟಿ ಬಂದಿದೆ. 252 ಸಹಸ್ರ ಮೆಟ್ರಿಕ್ ಟನ್ ಆಹಾರ ಬಂದಿದೆ. ಆಹಾರ ಪದಾರ್ಥ ವಿತರಣೆಯಾಗಿದೆ, ಆದರೆ ಖರ್ಚು ಯಾವ ರೀತಿಯಾಗಿದೆ ಎಂದು ಆಲೋಚನೆ ಮಾಡಬೇಕು. ಧರ್ಮಸಿಂಗರು ಮುಖ್ಯಮಂತ್ರಿಯಾಗಿದ್ದಾಗ ಪ್ರಕಾಶರು ಸರ್ವ ಪಕ್ಷ ಸಭೆಯನ್ನು ಮೂರನೇ ಮಹಡಿಯಲ್ಲಿ ಕರೆದಿದ್ದರು. ಅಲ್ಲಿ ನಾನು ಹೇಳಿದೆ; ಎಲ್ಲ ಭಾಗದ ಬಗ್ಗೆ ಚರ್ಚಿಸಲು ಜನರಿದ್ದಾರೆ, ಆದರೆ ಅವತ್ತು ಕರಾವಳಿಗೆ ಸಚಿವರೇ ಇರಲಿಲ್ಲ, ಕೇಳಿದಾಗ ತಕ್ಷಣ ನಾನು ಮೂರು ಕೋಟಿ ಬಿಡುಗಡೆ ಮಾಡುತ್ತೇನೆ ಎಂದು ಬಿಡುಗಡೆ ಮಾಡಿದರು. ಈ ಸಲ ವರ್ಷಕ್ಕೆ ನೀವು ಕೊಟ್ಟಿದ್ದು 4 ಕೋಟಿ. ಸಾಕಾಗುತ್ತದೆಯೇ? ವಿಪರೀತ ಮಳೆ ಬರುವಂತಹ ಸ್ಥಳ. ನಾನು ಚರ್ಚೆ ಮಾಡಿದ್ದೇನೆ, ರಸ್ತೆಗೆ ನೀವು ಹಣ ಕೊಡುವಾಗ length of the

road ಮತ್ತು climatic conditions ನೋಡಬೇಕು. ಅದನ್ನು ನೋಡದೆ ನೀವು ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಿಗೆ ಇಷ್ಟು ಹಣ ಸಾಕು ಅಂತ ಹೇಳಲು ಆಗದು. ಇನ್ನೂ ಹೆಚ್ಚು ಹಣ ಬಿಡುಗಡೆ ಮಾಡಬೇಕು. ಮತ್ತೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ನಾವು task force ಬಗ್ಗೆ ಬಹಳ ಚರ್ಚೆ ಮಾಡಿದ್ದೇವೆ. Task force ಕೆಲಸ ಒಂದೂವರೆ ವರ್ಷ ಹಿಂದೆ ಆಗಿದೆ, ಹಣ ಬಿಡುಗಡೆ ಮಾಡಲಿಲ್ಲ. ನೀವು ನೇರವಾಗಿ task forceಗೆ ಹಣ ಯಾಕೆ ಬಿಡುಗಡೆ ಮಾಡುವುದಿಲ್ಲ? ನೀವು ಜಿಲ್ಲಾ ಪಂಚಾಯ್ತಿ ಮೂಲಕವೇ ಬಿಡುಗಡೆ ಮಾಡುವುದಾದರೆ ಸಂಪೂರ್ಣ ಕುಡಿಯುವ ನೀರಿನ ಕೆಲಸ ಅವರಿಂದಲೇ ಮಾಡಿಸಿ, task force ಮೂಲಕ ಬೇಡ. ಇದರಲ್ಲಿ ಮೂರು ರೀತಿ ಸಮಸ್ಯೆ ಇದೆ. ಒಂದು, ಗ್ರಾಮ ಪಂಚಾಯ್ತಿ ಕ್ರಿಯಾಯೋಜನೆ ತಯಾರಿಸುವುದು, ಅದನ್ನು ಜಿಲ್ಲಾ ಪಂಚಾಯ್ತಿ ಬದಲಾಯಿಸುವುದು ಅದರಿಂದ ಅವರಿಬ್ಬರ ಮಧ್ಯದ ಸಂಘರ್ಷ. ಇನ್ನೊಂದು task force, ಇದರಡಿ ನಾವೇನು ಕಾಮಗಾರಿ ತೆಗೆದುಕೊಳ್ಳುತ್ತೇವೆ, ನಾವು ನೇರ ಹಳ್ಳಿಗಳಿಗೆ ಹೋಗಿ ಕಾಮಗಾರಿಗಳನ್ನು ನೋಡುವುದಿಲ್ಲ. ನಾವೂ ಗ್ರಾಮ ಪಂಚಾಯ್ತಿಯವರ ಹತ್ತಿರ ಮಾಹಿತಿ ಪಡೆದೇ ಕೆಲಸ ಮಾಡುತ್ತಿರುವುದು. ಗ್ರಾಮ ಪಂಚಾಯ್ತಿ ಎಲ್ಲಿ ಕುಡಿಯುವ ನೀರಿಗೆ ಹೊಸ ಬೋರ್‌ವೆಲ್ ಹೊಸ ಬಾವಿ ಆಗಬೇಕು ಎಂದು ಹೇಳುತ್ತಾರೆ ಅದಕ್ಕೆ ದುಡ್ಡು ಕೊಡಲು ಹಿಂದು ಮುಂದೆ ನೋಡುತ್ತೇವೆ. ಈ ಬಾರಿ ನೋಡಿ, task force ಬಿಟ್ಟು ಯಾವುದರಲ್ಲೂ ಕೆಲಸ ಮಾಡಲು ಗುತ್ತಿಗೆದಾರರು ಬರುವುದಿಲ್ಲ. ಇದನ್ನು ನೀವು ಆಲೋಚಿಸಬೇಕು. ಮುಂದಿನ ದಿನಗಳಲ್ಲಿ ನಾವು ಕ್ಷೇತ್ರದೊಳಗೆ ಓಡಾಡಲು ಸಾಧ್ಯವಾಗುವುದಿಲ್ಲ. Task force ಮೂಲಕ ಮಾಡಿದರೆ ಲಾಭವಾಗುವುದು ಮತ್ತೊಂದು ಏನೆಂದರೆ energizationಗೆ ಸರ್ಕಾರ ದುಡ್ಡು ಕೊಡುತ್ತದೆ.

ಶ್ರೀ ಸಿದ್ದರಾಮಯ್ಯ: ಬರಗಾಲದ ಬಗ್ಗೆ ಚರ್ಚೆ ನಡೆದಿದೆ. ಇದಕ್ಕೆ ಸಂಬಂಧಪಟ್ಟ ಒಬ್ಬ ಅಧಿಕಾರಿ ಇಲ್ಲವಲ್ಲ, ಜಗದೀಶ ಶೆಟ್ಟರೇ ಇದು ಯಾವ ತರಹ? ಕೌನ್ಸಿಲ್‌ನಲ್ಲಿ ಕೂಡ ಕೆಲಸ ಇಲ್ಲ.

ಅಧ್ಯಕ್ಷರು: ನಾನು ಖುದ್ದು ಮುಖ್ಯ ಕಾರ್ಯದರ್ಶಿ ಕೆಲವು ಕಾರ್ಯದರ್ಶಿಗಳನ್ನು ಕರೆದು ಹೇಳಿದೆ, ಹಿಂದೆಯೆಲ್ಲ ಈ ಬಗ್ಗೆ ದೂರಿದೆ, ಅನೇಕ ಸಾರಿ ಸದಸ್ಯರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರಮುಖ ವಿಚಾರಗಳು ಚರ್ಚೆಯಾದಾಗ ನೀವೆಲ್ಲ ಇರುವುದಿಲ್ಲ. ಈ ಬಗ್ಗೆ ಎಚ್ಚರ ವಹಿಸಬೇಕು ಅಂತ

ಹೇಳಿದ್ದೆ. ಯಾಕೆ ಇಷ್ಟೊಂದು ಬೇಜವಾಬ್ದಾರಿತನ ಅಂತ ನನಗೆ ಗೊತ್ತಿಲ್ಲ. ಅಧಿಕಾರಿಗಳೆ ಇರಲಿ treasury benches ನವರೇ ಇರಲಿ ಬೇಜವಾಬ್ದಾರಿ ತನವನ್ನು ಸಹಿಸುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಅವರ ಛೇಂಬರಿಗೆ ಫೋನ್ ಮಾಡಿದರೆ ವಿಧಾನಸೌಧಕ್ಕೆ ಹೋಗಿದ್ದಾರೆ ಅಂತಾರೆ. ಇಲ್ಲಿ ನೋಡಿದರೆ ಒಬ್ಬರೂ ಇರುವುದಿಲ್ಲ. You have to pull up the Govt. Ministersಗೆ ಹೇಳಬೇಕು, ನಿಮ್ಮ ಅಧಿಕಾರಿಗಳನ್ನು ಇಲ್ಲಿ ಬಂದು ಕೂರುವ ಹಾಗೆ ಮಾಡಿ ಎಂದು ಮಂತ್ರಿಗಳಿಗೆ ಹೇಳಬೇಕು.

ಅಧ್ಯಕ್ಷರು: ಸಂಸದೀಯ ಸಚಿವರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಜನ ನೋಡ್ತಿದ್ದಾರೆ, ನಮಗೂ ನಿಮಗೂ ಗೌರವ ಇಲ್ಲ. ಈ ಸದನದ ಗೌರವ ಕಾಪಾಡಬೇಕಾದ್ದು ನಮ್ಮ ಕರ್ತವ್ಯ. ಏತಕ್ಕೆ ಈ ತರಹ ಅವರು ಮಾಡುತ್ತಿದ್ದಾರೆ?

ಶ್ರೀ M. P. ಪ್ರಕಾಶ್: ಇದು ನಮಗೆ ನಿಜವಾಗೂ ಭೂಷಣ ತರುವಂತಹದ್ದಲ್ಲ. ನಾನು ತಮ್ಮ ಮತ್ತು ಸದನದ ಸದಸ್ಯರ ಕ್ಷಮೆ ಕೇಳುತ್ತಿದ್ದೇನೆ. ಈಗ ಅಧಿಕಾರಿಗಳಿಗೆ ಹೇಳಿ ಕಳಿಸಿದ್ದೇವೆ, ಇವತ್ತೇ ಮುಖ್ಯ ಕಾರ್ಯದರ್ಶಿಗಳಿಗೆ ಎಲ್ಲರೂ ಸದನದಲ್ಲಿ ಹಾಜರಾಗಬೇಕು ಅಂತ ತಿಳಿಸುತ್ತೇನೆ. ಅವರು ಲಘುವಾಗಿ ಸದನವನ್ನು ತೆಗೆದುಕೊಳ್ಳಬಾರದು.

ಶ್ರೀ ಸಿದ್ದರಾಮಯ್ಯ: ನೀವು ಕ್ಷಮೆ ತಗೊಳುವ ಅಗತ್ಯ ಇಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಬಾರದು. ಅಸೆಂಬ್ಲಿ ನಡೆಯುವಾಗ ಅಧಿಕಾರಿಗಳು ಊರುಬಿಟ್ಟು ಹೋಗಬಾರದು ಎಂದು ಸುತ್ತೋಲೆ ಹೊರಡಿಸಿದ್ದೇವೆ, ಯಾವ ಉದ್ದೇಶಕ್ಕಾಗಿ? ಅವರು ಇಲ್ಲಿ ಇರಬೇಕು ಎಂದು. ಅನೇಕ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತದೆ. ಅದಕ್ಕೆಲ್ಲ follow up action ಇರ ಬೇಕಾಗುತ್ತದೆ, implement ಮಾಡುವವರು ಯಾರು? ಸಚಿವರಿಗೆ ಮಾಹಿತಿ ಕೊಡಲು ರೆಡಿಯಾಗಿರಬೇಕು. ಆದರೆ ಅವರು ಇಲ್ಲಿ ಇರುವುದಿಲ್ಲ ಅಂದರೆ, ಅಧಿಕಾರಿಗಳು ನಿಮ್ಮ ಮಾತು ಕೇಳುವುದಿಲ್ಲ ಎಂದು ಹೇಳಿಬಿಟ್ಟರೆ ಜನಗಳನ್ನಾದರೂ ಎತ್ತಿಕಟ್ಟೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ಮಾತನಾಡುವಾಗ ನಿನ್ನೆ ಒಬ್ಬರೂ ಇರಲಿಲ್ಲ. ಇವತ್ತೂ ಒಬ್ಬರೂ ಇಲ್ಲ. ಏಕೆ ಕುರ್ಚಿ ಹಾಕಿಸಿದ್ದೀರಿ? ಸಂಬಂಧಪಟ್ಟ ಅಧಿಕಾರಿಗಳಿಗೆ ಅವರಿಗೆ ನೋಟೀಸ್ ಕೊಡಿ, ಏನೂ ಮಾಡದಿದ್ದರೆ ಯಾರು ಕೇಳುತ್ತಾರೆ?

ಶ್ರೀ ಎಂ.ಪಿ. ಪ್ರಕಾಶ್: ಕ್ರಮ ಕೈಗೊಳ್ಳುತ್ತೇನೆ.

ಶ್ರೀ S. S. ಪಾಟೀಲ್: ಈ ದಿವಸ ಯಾರ್‍ಯಾರಿರಬೇಕಾಗಿತ್ತು ಯಾರು ಇಲ್ಲ ಎಂಬ ವಿವರ ಕೊಡಿ. ದಾಖಲೆಗೆ ಹೋಗಲಿ, ಜಗದೀಶ ಶೆಟ್ಟರು ಇಲ್ಲಿ ಕೂತಾಗ ಏನೇನು ಹೇಳಿದರು ಎಂಬುದು ದೇವರಿಗೇ ಗೊತ್ತು. ಆದರೆರಿವತ್ತು ರಕ್ಷಣೆ ಮಾಡಲು ಹೊರಟಿದ್ದೀರಿ. ಅಧ್ಯಕ್ಷರೇ ನಿಮಗೆ ಅಧಿಕಾರಿಗಳ ಬಗ್ಗೆ ಇನ್ನೊಂದು ವಿಚಾರ ಹೇಳಿಬಿಡುತ್ತೇನೆ: ಫೋನ್ ಮಾಡಿದರೆ ಯಾರು ಮಾತನಾಡುತ್ತಾರೆ ಅಂತ ಕೇಳಿ meetingನಲ್ಲಿದ್ದೀನಿ ಅಂತ ಹೇಳಿಸುತ್ತಾರೆ, ಒಬ್ಬರೂ ಫೋನ್ ಎತ್ತುವುದಿಲ್ಲ. ಇದನ್ನು ಬಿಗಿ ಮಾಡದಿದ್ದರೆ ಖಂಡಿತ ಯಾವ ಶಾಸಕರಿಗೂ ಗೌರವ ಇರುವುದಿಲ್ಲ.

ಅಧ್ಯಕ್ಷರು: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆ ತರಹ ಬೆಳವಣಿಗೆ ಆಗುತ್ತಿದೆ. ನಮ್ಮ ನಿಮ್ಮ ನಡವಳಿಕೆಗಳಿಂದ ಅಧಿಕಾರಶಾಹಿ ದಿನದಿನಕ್ಕೆ ಕೊಬ್ಬುತ್ತಾ ಇದೆ. ಎಲ್ಲರೂ ಅದಕ್ಕೆ ಜವಾಬ್ದಾರರು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರು ಅಷ್ಟು ಅಸಹಾಯಕರಾಗಬಾರದು. It is their duty to be present here. They are paid for that. We are not paid servants.

ಶ್ರೀ ಎಂ.ಪಿ. ಪ್ರಕಾಶ್: ತಪ್ಪಾಗಿದೆ. ಖಂಡಿತವಾಗಿಯೂ ಸದನಕ್ಕೆ ಅವರು ಗೌರವ ಕೊಡಬೇಕು. ಅದು ಅವರ ಕರ್ತವ್ಯ ಕೂಡ ಇದೆ. ಅವರ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಈಗ ತಾವು ಮಾತನಾಡಲು ಪ್ರಾರಂಭ ಮಾಡಿದ ಕೂಡಲೇ ಮುಖ್ಯ ಕಾರ್ಯದರ್ಶಿಯವರೊಂದಿಗೆ ನಾನೇ ದೂರವಾಣಿ ಮೂಲಕ ಮಾತನಾಡಿ ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತೇನೆ.

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಇದೊಂದೇ ಪ್ರಶ್ನೆಯಲ್ಲ.

ಅಧ್ಯಕ್ಷರು: ಮೂರ್ನಾಲ್ಕು ಜನ ಮಂತ್ರಿಗಳು ಇದ್ದಾರಲ್ಲ, ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ಸಂಬಂಧಪಟ್ಟ ಕೃಷಿ ಸಚಿವರು ಇರಬೇಕು. ಕೃಷಿ ಸಚಿವರೇ ಇಲ್ಲ.

ಅಧ್ಯಕ್ಷರು: ಈಗ ನೀವು ಗಮನಕ್ಕೆ ತಂದಿದ್ದೀರಿ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮುಂದೆ ಈ ರೀತಿ ಆಗಲಾರದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಈಗ ತಾವು ಮಾತನಾಡಿ.

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಇಲಾಖೆಯ ಕಾರ್ಯದರ್ಶಿಗಳಿಗೆ ಫೋನ್ ಮಾಡಿದರೆ, ಅವರು ಫೋನ್ ಎತ್ತುವುದಿಲ್ಲ. ಮತ್ತು ವಾಪಸ್ಸು ಫೋನ್ ಮಾಡತಕ್ಕಂಥ ಸೌಜನ್ಯವನ್ನೂ ತೋರಿಸುವುದಿಲ್ಲ.

ಅಧ್ಯಕ್ಷರು: ಸಿದ್ಧರಾಮಯ್ಯನವರೆ, ತಾವು ಮಾತನಾಡಿ.

ಶ್ರೀ ನೆ.ಲ. ನರೇಂದ್ರಬಾಬು: ನಾವು ಇಲ್ಲಿ ಗೋಡೆಗಳಿಗೆ ಮಾತನಾಡಬೇಕೆ?

ಅಧ್ಯಕ್ಷರು: ನೀವೆಲ್ಲರೂ ಇಲ್ಲಿ ಹೇಳಿದ್ದೀರಿ, ನಿಮ್ಮ ನಾಯಕರುಗಳೆಲ್ಲರೂ ಇಲ್ಲಿ ಹೇಳಿದ್ದಾರೆ. ಅವರ ಗಮನಕ್ಕೂ ತಂದಿದ್ದೇವೆ. ಅವರೂ ಸಹ ಸೂಕ್ತವಾಗಿ ಪ್ರತಿಕ್ರಿಯಿಸಿದ್ದಾರೆ. ಮತ್ತೆ ಮತ್ತೆ ಅದನ್ನೇ ಏಕೆ ಮಾತನಾಡುತ್ತೀರಿ? ಅವರು ಮಾತನಾಡಲಿ, ಚರ್ಚೆ ಮತ್ತು ಉತ್ತರ ಎಲ್ಲವೂ 2 ಗಂಟೆಗೆ ಮುಗಿಯಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇಲ್ಲ, ಇಲ್ಲ. ಅಧ್ಯಕ್ಷರೆ, ನಾನು ಏಕೆ ಪ್ರಾರಂಭ ಮಾಡಿದೆನೆಂದರೆ, ಒಂದು, ಪತ್ರಿಕೆಯವರು ಇದ್ದಾರೆ. ಇನ್ನೊಂದು, ಮಂತ್ರಿಗಳೇ ಬರೆದುಕೊಂಡು ಆ ಅಧಿಕಾರಿಗಳಿಗೆ brief ಮಾಡುತ್ತಾರೆಂಬ ಧೈರ್ಯದಿಂದ ಮಾತನಾಡುತ್ತಿದ್ದೇನಷ್ಟೆ. ಇವರೇ ಅವರಿಗೆ brief ಮಾಡುವ ಪರಿಸ್ಥಿತಿ ಬಂದಿದೆ. ಅವರು ಇವರಿಗೆ brief ಮಾಡುವುದಲ್ಲ.

ಶ್ರೀ ಸಿದ್ಧರಾಮಯ್ಯ: Mr.Prakash has been briefed from all the departments.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇಲಾಖಾಧಿಕಾರಿಗಳು ಬರೆದುಕೊಂಡು ಅವರಿಗೆ ಮಾಹಿತಿ ಕೊಡುವುದು ಬಿಟ್ಟು, ಮಂತ್ರಿಗಳೇ ಬರೆದುಕೊಂಡು ಇಲಾಖಾಧಿಕಾರಿಗಳಿಗೆ ಇದನ್ನೆಲ್ಲಾ ಹೇಳಿ ನನಗೆ ಮಾಹಿತಿ ಕೊಡಪ್ಪಾ ಎಂದು ಕೇಳುವ ಪರಿಸ್ಥಿತಿ ಬಂದಂಥಾದ್ದು ದುರದೃಷ್ಟ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ಬಾಲ ನಾಯಿಯನ್ನು ಅಲ್ಲಾಡಿಸುವುದು. ನಾಯಿ ಬಾಲವನ್ನು ಅಲ್ಲಾಡಿಸುವುದಲ್ಲ!

ಶ್ರೀ ಸಿದ್ದರಾಮಯ್ಯ: You are senior leader. Don't defend them. Please don't defend them.

ಶ್ರೀ ಜಗದೀಶ್ ಶೆಟ್ಟರ್: Defend ಮಾಡುತ್ತಿಲ್ಲ. ಈಗ ನಿನ್ನೆ ಮತ್ತು ಮೊನ್ನೆ ತಾವು discussion ಮಾಡುವಾಗ concerned Secretaryಯವರು ಇದ್ದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಕಳೆದ ಬಾರಿ ಯಾವ ರೀತಿ ಹಣ ಬಿಡುಗಡೆಯಾಯಿತು, ಕಮಿಟಿ ಮಾಡಿ All Party Meeting ಕರೆದು ಎಲ್ಲೆಲ್ಲಿ ಏನೇನು damage ಆಗಿದೆ ಎಂದು ಮಾಡಿದಂತೆ ಮಾಡಬೇಕು. ಮತ್ತೆ ನಿಮ್ಮ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಬೇಕಾಗುತ್ತದೆ. ಏನೇನಾಗಿದೆ ಎಂಬುದನ್ನು review ಮಾಡುವುದಕ್ಕೆ ಒಂದು ಸಮಿತಿ ಆಗಬೇಕು.

ಶ್ರೀ ಸಿದ್ದರಾಮಯ್ಯ: ಬಿಡುಗಡೆ ಮಾಡುವುದಕ್ಕೆ ಎಷ್ಟು ಹಣ ಬೇಕು, ಅದು, that is a different thing. There is an Empowered Committee. ಇನ್ನೊಂದು Rural Development Minister, Agriculture Minister, Horticulture Minister, Power Minister ಎಲ್ಲರೂ ಇರುವಂತಹ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇರಬೇಕು. ಆ ಸಮಿತಿಯಲ್ಲಿರುವ ಎಲ್ಲರೂ ಒಂದು tour ಮಾಡಿಕೊಂಡು ಬನ್ನಿ. ಒಂದು round ಎಲ್ಲಾ ಜಿಲ್ಲೆಗಳಿಗೂ ಹೋಗಿ ಬನ್ನಿ. ಕೇವಲ meeting ಮಾಡುವುದಲ್ಲ, ಜಿಲ್ಲೆಗಳಿಗೆ ಹೋಗಬೇಕು.

ಶ್ರೀ ಜಗದೀಶ್ ಶೆಟ್ಟರ್: ಪ್ರತಿ 15 ದಿವಸಗಳಿಗೊಮ್ಮೆ ಮೀಟಿಂಗ್ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಅಲ್ಲಿಗೇ ಹೋಗಬೇಕು. ನಾವು ಹಿಂದೆ ಮಾಡಿದ್ದೆವಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದರ ಜೊತೆಗೆ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿ ಇದೆ. ಅದರ ಸಭೆ ಕರೆಯುತ್ತಿಲ್ಲ, ಚರ್ಚೆಯೂ ಆಗುತ್ತಿಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯುತ್ತಿತ್ತು, ಅದು ಆಗುತ್ತಿಲ್ಲ. ಹಿಂದಿನ ಒಂದು ಉದಾಹರಣೆ ಕೊಡುತ್ತೇನೆ. ಕಳೆದ ಬಾರಿ ಆದ ಕಾಮಗಾರಿಗಳಿಗೆ ಇವೊತ್ತು inspection ಆಗುತ್ತಿದೆ. ಕಾಮಗಾರಿ ಸರಿಯಾಗಿ ಆಗಿಲ್ಲವೆಂದು payment ಆಗುತ್ತಿಲ್ಲ. ಕಾಮಗಾರಿ ಆದ ತಕ್ಷಣ inspection

ಮಾಡಿ payment ಮಾಡುವುದೇ? ಒಂದೂವರೆ, ಎರಡು ವರ್ಷಗಳ ನಂತರ inspection ಮಾಡಿ payment ಮಾಡುವುದೇ? ಅದರ ಬಗ್ಗೆ ನಾವು ಮತ್ತು ಶಿವರಾಮುರವರು ಬೇರೆ ಸಮಿತಿಯಲ್ಲಿ ಬಹಳಷ್ಟು ಚರ್ಚೆ ಮಾಡಿದ್ದೇವೆ. ಹಿಂದೆ ಆದಂಥ ಕೆಲಸಗಳಿಗೆ ಇವೊತ್ತು... inspector ಮಾಡುವುದಾದರೆ ಇಷ್ಟು ದಿವಸ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ಒಂದು package ಮಾಡಿ ಗುತ್ತಿಗೆಯನ್ನು ದೊಡ್ಡ ದೊಡ್ಡ contractorsಗೆ ಕೊಟ್ಟಿದ್ದಾರೆ.

ಶ್ರೀ ಬಿ. ಶಿವರಾಮು: ನೀವು ಯಾರಿಗೆ ಮಾತನಾಡುತ್ತಿದ್ದೀರೆಂದು ಗೊತ್ತಾಗಲಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನಾನು ಜಗದೀಶ್ ಶೆಟ್ಟರ್ ಅವರಿಗೆ ನೇರವಾಗಿ ಮಾತನಾಡುತ್ತಿದ್ದೇನೆ.

ಶ್ರೀ ಬಿ.ಶಿವರಾಮು: ನಾನು ಏಕೆ ಹೇಳುತ್ತಿದ್ದೇನೆಂದರೆ, ಈ ಸದನದಲ್ಲಿ ಮೂರು ಸಲ ಮಾತನಾಡಿದ್ದೇವೆ, ಅದಕ್ಕೇ ಉತ್ತರ ಬಂದಿಲ್ಲ, ಪರಿಹಾರ ದೊರೆತಿಲ್ಲ, Estimate Committeeಯಲ್ಲಿ ಚರ್ಚೆಯಾಯಿತು. ಇಲ್ಲಿಯವರೆಗೆ ಅಧಿಕಾರಿಗಳು ಕೂಡ ಅದಕ್ಕೆ ಪ್ರತಿಕ್ರಿಯೆ ತೋರಿಸಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಉತ್ತರ ಕೊಡುತ್ತೇವೆ. ಸರ್ಕಾರದಿಂದ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಒಂದು time limit ಹಾಕಿದರೆ ಉತ್ತರ ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ನಿಜವಾಗಿ ಉತ್ತರ ಕೊಡುತ್ತಿದ್ದೀರಿ. ಆದರೆ, ಅಲ್ಲಿಯವರೆಗೆ Assemblyಯೇ ನಡೆಯುವುದಿಲ್ಲ. ನೀವೇನು ಮಾಡುತ್ತೀರಿ ಪಾಪ!

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರು time ನಿಗದಿ ಮಾಡಿದ್ದಾರೆ. ಒಂದೂವರೆ ಗಂಟೆಗೆ ನಾನು ಉತ್ತರ ಕೊಡುತ್ತೇನೆ. ನೀವು ಏನು ಹೇಳಿದ್ದೀರಿ, ಎಲ್ಲದಕ್ಕೂ ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಕುಮಾರ್ ಬಂಗಾರಪ್ಪ: ಆರಗ ಜ್ಞಾನೇಂದ್ರರವರೆ, ಅಧ್ಯಕ್ಷರ ಅಪ್ಪಣೆ ಮೇರೆಗೆ ಒಂದು ವಿಷಯ ಮಾತನಾಡಬೇಕೆಂದು ಹೇಳಿದ್ದೀರಲ್ಲ.

ಶ್ರೀ ಆರಗ ಜ್ಞಾನೇಂದ್ರ: ಈಗ ಜಯಪ್ರಕಾಶ್ ಹೆಗ್ಡೆಯವರಂತಹ ಹಿರಿಯರು ಮಾತನಾಡುವಾಗ ನಾವೆಲ್ಲರೂ ಕುಳಿತುಕೊಂಡು ಕೇಳುತ್ತೇವೆ. ತಾವು ಮಾತನಾಡಿ ಸರ್, ಮಂತ್ರಿಗಳಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರೂ ಅದೇ ಸಮಸ್ಯೆ ಎದುರಿಸುತ್ತಿದ್ದಾರೆ. ಆದ್ದರಿಂದ, ಅವರೂ ಕೇಳಿಕೊಂಡು ಕುಳಿತಿದ್ದಾರೆ. ಅದಕ್ಕೆ ಕಳೆದ ಬಾರಿ ಆದ ಕಾಮಗಾರಿಯ ಹಣವನ್ನು ತಕ್ಷಣ ಬಿಡುಗಡೆ ಮಾಡಿ payment ಆಗುವಂತೆ ಮಾಡಬೇಕು. Flood damage ಆದ ರಸ್ತೆಗಳ asset creation. ಕುಡಿಯುವ ನೀರಿನದ್ದು. ಏನೇನು ಕೆಲಸ-ಕಾರ್ಯಗಳಾಗಿವೆಯೋ, ಅದಕ್ಕೆ ಹಣ ಬಿಡುಗಡೆ ಮಾಡಬೇಕು. ನಾನು ನಿನ್ನೆ ರವೀಂದ್ರನಾಥ್ ಹತ್ತಿರ ಮಾತನಾಡಿದ್ದೇನೆ. ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ನೇರವಾಗಿ payment ಮಾಡಬೇಕೆಂದು ಸರ್ಕಾರದಿಂದ ಆದೇಶ ಕಳುಹಿಸಿದ್ದಾರೆ. ಅದೇ ರೀತಿ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡುವುದಕ್ಕೆ ಎಲ್ಲಾ ಜಿಲ್ಲೆಗಳಿಗೂ ನೀವು ಕಳುಹಿಸಿ. ಎಲ್ಲಾ ಜಿಲ್ಲೆಗಳಿಗೂ ನೀವು ಆದೇಶವನ್ನು ಏಕೆ ಕಳುಹಿಸಲಿಲ್ಲ? ನಮ್ಮ ಜಿಲ್ಲೆಯೂ ಸೇರಿದಂತೆ ಅದನ್ನು ಪ್ರತಿಯೊಂದು ಜಿಲ್ಲೆಗೂ ಕೊಡಬೇಕು. ಇಲ್ಲದಿದ್ದರೆ, ಪ್ಯಾಕೇಜ್ ಮಾಡಿ ದೊಡ್ಡ ದೊಡ್ಡ ಗುತ್ತಿಗೆದಾರರಿಗೆ contract ಕೊಡುವುದು ಅಯಿತು. ಸಣ್ಣ ಗುತ್ತಿಗೆದಾರರು, ಯಾರು ನಮ್ಮ ಮುಲಾಜಿಗೆ ಬಂದು ಕೆಲಸ ಮಾಡುತ್ತಿದ್ದಾರೆ, ಅವರಿಗೆ ಹಣ ಕೊಡದೇ ಇರುವುದರಿಂದ ಗುತ್ತಿಗೆ ಬಿಟ್ಟು ಓಡಿಹೋಗುವಂತಹ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ. ದಯವಿಟ್ಟು ಈ ಸರ್ಕಾರ ಇದನ್ನು ಮಾಡದೆ ತಕ್ಷಣ ಹಣ ಬಿಡುಗಡೆ ಮಾಡಬೇಕು ಮತ್ತು task force ಮುಖಾಂತರ ಕುಡಿಯುವ ನೀರಿನ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುವುದಕ್ಕೆ ನೇರವಾಗಿ task forceಗೆ ಹಣವನ್ನು ಕಳುಹಿಸಿ. ನಾನು ಆಗಲೇ ಹೇಳಿದಂತೆ energisation programmeದಾದರೂ ಹಣ ಉಳಿಯುತ್ತದೆ. ಸರ್ಕಾರವೇ ನೇರವಾಗಿ ಕೊಡುವುದರಿಂದ ಅವರೂ ಕಾಯುವುದಿಲ್ಲ. ಪಂಚಾಯತ್‌ನವರು ಹಣ ಡಿಪಾಸಿಟ್ ಮಾಡಲಿ ಎಂದು ಕಾಯುತ್ತಿಲ್ಲ. ನೇರವಾಗಿ connection ಕೊಡುತ್ತಿದ್ದಾರೆ. ಅದಕ್ಕೋಸ್ಕರ, task force ಮುಖಾಂತರ ಆದಷ್ಟು ತುರ್ತು ಕಾಮಗಾರಿಯನ್ನು ಮಾಡುವಂತೆ ಆಗಬೇಕು. ನಮ್ಮ ಮಧ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳ ಭಿನ್ನಾಭಿಪ್ರಾಯಗಳನ್ನು ತೆಗೆಯುವುದಕ್ಕೆ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತೀರೆಂದು ನೋಡೋಣ. ಘೋರ್ಪಡೆಯವರು ಇಲ್ಲಿ Rural Development Minister ಆಗಿದ್ದಾಗ ವಿಕೇಂದ್ರೀಕರಣದ ವ್ಯವಸ್ಥೆಗೆ ಮತ ಹಾಕಿದವರು. ಆದರೆ, ಬಂದಂಥ ಭಿನ್ನಾಭಿಪ್ರಾಯ, ನೀವು ಒಂದು ಮಾಡಿದ್ದು

ಏನೆಂದರೆ, ಜಿಲ್ಲಾ ಪಂಚಾಯತ್‌ನವರು ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದು. ಗ್ರಾಮ ಪಂಚಾಯಿತಿ ಕ್ರಿಯಾ ಯೋಜನೆ ಮಾಡಿ ಕಳುಹಿಸುವುದು. ಇವರ ಜುಟ್ಟು ತೆಗೆದು ಅವರ ಕೈಯಲ್ಲಿ ಕೊಟ್ಟುಬಿಟ್ಟಿದ್ದರು. ಪುನ: ಹಣ ಕೊಡುವುದು ಗ್ರಾಮ ಪಂಚಾಯತ್‌ನವರು. ಅವರು ಎಲ್ಲದಕ್ಕೂ approve ಮಾಡಲಿಲ್ಲವೆಂದು ಇವರು payment ಮಾಡುತ್ತಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದೆಲ್ಲವೂ ಸುಸೂತ್ರವಾಗಿ ಆಗಿದ್ದರೆ, task force ಬೇಕಾಗಿರಲಿಲ್ಲ. ಕಾಮಗಾರಿ ಸುಸೂತ್ರವಾಗಿ ಆಗುತ್ತಿತ್ತು. ನೀವು ವ್ಯವಸ್ಥೆಯನ್ನು ಬದಲು ಮಾಡಿ ಯಾರ್ಯಾರಿಗೆ ಯಾವ್ಯಾವ ಅಧಿಕಾರ ಕೊಡಬೇಕು ಎಂದು ಒಂದು ಹಂತದಲ್ಲಿ ಸಂಪೂರ್ಣವಾಗಿ ಅವರಿಗೇ ಕೊಡಬೇಕಾಗುತ್ತದೆ. ಒಬ್ಬರ ಜುಟ್ಟು ಇನ್ನೊಬ್ಬರಿಗೆ ಕೊಟ್ಟದ್ದನ್ನು ತೆಗೆದು ಬಿಡಿ. ಮತ್ತೆ ಈ ನೀರನ್ನು save ಮಾಡುವುದು ಹೇಗೆ? ಈಗ ಕಾವೇರಿ ಬಗ್ಗೆ ಚರ್ಚೆಯಾಗುತ್ತಿದೆ. ಈಗ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟುವಂಥಾದ್ದು. ಹಿಂದೆ ಮಾನ್ಯ ಕುಮಾರ್ ಬಂಗಾರಪ್ಪನವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾಗ ಒಳ್ಳೆಯ ಕೆಲಸಗಳನ್ನು ಮಾಡಿದ್ದರು. ಮಂಗಳೂರಿಗೆ ಬಂದು programme ಮಾಡಿದ್ದರು. 200, 300 ಕೋಟಿ ರೂಪಾಯಿಗಳಲ್ಲಿ ಇಡೀ ಕಾಸರಗೋಡು borderನಿಂದ ಹಿಡಿದು ಕಾರವಾರದ borderವರೆಗೆ ಉಪ್ಪು ನೀರಿನ ಅಣೆಕಟ್ಟುಗಳನ್ನು ಕಟ್ಟಿದರೆ, ನಮ್ಮ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತದೆ. ನಮ್ಮಲ್ಲಿ major irrigationಗೆ ಹೆಚ್ಚು ಅವಕಾಶವಿಲ್ಲ. ವಾರಾಹಿ ಯೋಜನೆ ಇದೆ. Sugar factory, ವಾರಾಹಿ ಒಂದೇ ದಿವಸ foundation ಹಾಕಿದ್ದು. Sugar factory ಬಂದ್ ಅಯಿತು. ವಾರಾಹಿ ಇನ್ನೂ crawl ಆಗುತ್ತಿದೆ. ಒಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ, ಕೆಲಸ ನಿಧಾನವಾಗಿ ಆಗುತ್ತಿದೆ. ಆದರೆ, ಹಣ ಸ್ವಲ್ಪ ಬಿಡುಗಡೆಯಾಗುತ್ತಿದೆ. ಸಂತೋಷ. Dam ಕೆಲಸ ಪ್ರಾರಂಭವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: Vented dam ಜೊತೆಗೆ dyke ಹಾಕುವ concept ಅನ್ನು ನೀವು ಎಲ್ಲಾದರೂ implement ಮಾಡಬೇಕು. ಹಳ್ಳಿಗಳಲ್ಲಿ ಭೂಮಿಯೊಳಗೆ 20 ಅಡಿಗಳಷ್ಟು ತೋಡಿ ಜೇಡಿ ಮಣ್ಣಿನಿಂದ pack ಮಾಡಿದರೆ, ಈ ಕಡೆ ಆ ಕಡೆ ಸೀಪೇಜ್ ಹೋಗಿ hard water ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. Dyke concept ಅನ್ನು Central

underground water Board ನವರು ಮಾಡುತ್ತಿದ್ದಾರೆ. ಈ ಸರ್ಕಾರ ಎಲ್ಲಿಯಾದರೂ ಸ್ವಲ್ಪ ಯೋಚನೆ ಮಾಡಬೇಕಲ್ಲ? ಮೇಲೆ ಹಣ ಹಾಕುವುದೊಂದು. ಆದರೆ, ಭೂಮಿಯೊಳಗೆ ಜೇಡಿ ಮಣ್ಣಿನಲ್ಲಿ valve ಹಾಕುವುದು. 20–25 ಅಡಿಗಳಷ್ಟು ಹಳ್ಳ ತೋಡಿದರೆ, ಆಗ ಅಲ್ಲಿಂದ sideಗೆ ಹೋಗುವ ನೀರು sweet water ಆಗಿ ಕುಡಿಯುವುದಕ್ಕೆ ಸಿಗುತ್ತದೆ.

ಶ್ರೀ ಜಯಪ್ರಕಾಶ್ ಹೆಗ್ಡೆ: ನಮ್ಮ ಮಣ್ಣಿಗೆ water retention capacity ಇಲ್ಲ. ಆದ್ದರಿಂದ ಅದನ್ನು retain ಮಾಡುವುದಕ್ಕೆ ಬೇರೆ ಕಡೆಯಿಂದ ಜೇಡಿ ಮಣ್ಣನ್ನು ತಂದು ಒಂದು layer ಹಾಕಿದರೆ ಅದನ್ನು retain ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಸ್ವಲ್ಪ study ಮಾಡಬೇಕಾಗುತ್ತದೆ. Study ಮಾಡುವುದಕ್ಕೆ ಸ್ವಲ್ಪ ಹಣವನ್ನು ಖರ್ಚು ಮಾಡಿ ತೊಂದರೆ ಇಲ್ಲ. ನಾವು Permanent solution ನ್ನು ಹುಡುಕೋಣ ನಾವು. ಪ್ರತಿ ವರ್ಷ ಜನವರಿಯಲ್ಲಿ ಈ ಸಧನ ಪ್ರಾರಂಭವಾದಾಗ ನಾವು ಬರದ ಬಗ್ಗೆ ಚರ್ಚೆಯನ್ನು ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಏನು ಸಮಸ್ಯೆ ಉದ್ಭವವಾಗುತ್ತದೆ ಎಂಬ ಬಗ್ಗೆ ಆಲೋಚನೆಯನ್ನು ಮಾಡದಿದ್ದರೆ ಪರಿಸ್ಥಿತಿ ಬಹಳ ತೀಕ್ಷಣವಾಗುತ್ತದೆ. ನಾನು ಮೇವಿನ ಬಗ್ಗೆ ಮಾತನಾಡುತ್ತಿದ್ದೆ. ನಂಜುಂಡಪ್ಪನವರ ವರದಿಯ ಪ್ರಕಾರ ಉತ್ತರ ಕರ್ನಾಟಕ ಜಿಲ್ಲೆಯ ಅಭಿವೃದ್ಧಿಯಾಗಲಿಲ್ಲ. ಅದಕ್ಕೆ ಹಣ ಕೊಡಿ ತೊಂದರೆ ಇಲ್ಲ. ಅದರಲ್ಲಿ ಇನ್ನೊಂದು ಅಂಶವನ್ನು ಬರೆದಿದ್ದಾರೆ. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯಲ್ಲಿ ಮೇವಿನ ಕೊರತೆ ಇದೆ. ಅದನ್ನು ನೀಗಿಸಲು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? 128 ತಾಲ್ಲೂಕುಗಳಲ್ಲಿ ಈ ಹಿಂದೆ ಪಂಜಾಬ್ ರಾಜ್ಯದಿಂದ ಮೇವನ್ನು ತರಿಸಿದ್ದರು ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ನಮ್ಮ ಭಾಗಕ್ಕೂ ಆ ರೀತಿಯಲ್ಲಿ ಮೇವನ್ನು ಕಳುಹಿಸುವ ವ್ಯವಸ್ಥೆಯನ್ನು ಮಾಡಿ. ಮೇವಿನ ಬ್ಯಾಂಕುಗಳನ್ನು ತೆಗೆಯಬೇಕಾಗುತ್ತದೆ. ನಮ್ಮಲ್ಲಿ ಹಸಿರು ಹುಲ್ಲು ಸಿಗುವುದಿಲ್ಲ. ಒಣ ಹುಲ್ಲು ಇದೆ. ಆದರೆ, ಸಾಕಷ್ಟು ಇಲ್ಲ. ತಾವು ಪಟ್ಟಿಯನ್ನು ತರಿಸಿ ನೋಡಿ, ರೈತರು ವರ್ಷ ವರ್ಷ ಕೃಷಿಯನ್ನು ಕಡಿಮೆ ಮಾಡುತ್ತಾ ಹೋಗುತ್ತಿದ್ದಾರೆ. ಕಾರಣ ನಮ್ಮಲ್ಲಿ ಕೂಲಿ ಬಹಳ ಜಾಸ್ತಿ ಇದೆ. ಈ ಕೂಲಿಯನ್ನು ಕೊಟ್ಟು ಕೃಷಿಯನ್ನು ಮಾಡಲು ಆಗುವುದಿಲ್ಲವೆಂದು ಕೃಷಿಯನ್ನು ಬಿಟ್ಟು ಹೋಗುತ್ತಿದ್ದಾರೆ. ಒಂದು ಕಡೆ ಗುಲ್ಬರ್ಗಾ, ಬೀದರ್ ಭಾಗದಿಂದ ಕೂಲಿ ಸಿಗುತ್ತದೆ ಎಂದು ನಮ್ಮಲ್ಲಿಗೆ ಗುಳೆ

ಬರುತ್ತಾರೆ. ಆದರೆ, ನಮ್ಮಲ್ಲಿ ಕೂಲಿ ಜಾಸ್ತಿಯೆಂದು ಕೃಷಿ ಮಾಡುವುದನ್ನು ನಿಲ್ಲಿಸಿಕೊಂಡು ಬರುತ್ತಿದ್ದಾರೆ ಮತ್ತು ಪಟ್ಟಣ ಪ್ರದೇಶಗಳಿಗೆ ಹೋಗುವುದು ಪ್ರಾರಂಭವಾಗಿದೆ. ಕಾರಣ ಇದು ಪೂರೈಸುವುದಿಲ್ಲ. It is not worth cultivating. ಕೃಷಿ ಮಾಡುವುದು ಲಾಭದಾಯಕವಲ್ಲ ಎನ್ನುವುದಾದರೆ ಲಾಭದಾಯಕವೆಂದು ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಆಲೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೀರಿ? ಹಿಂದೆ ಎಷ್ಟು ಎಕರೆ ಕೃಷಿಯಾಗುತ್ತಿತ್ತು? ಅಕ್ಕಿ ಭತ್ತಗಳ ದರವೇನು? ಹಿಂದೆ ಇದ್ದ ಬೆಲೆಗಿಂತ ಹತ್ತು ಪರ್ಸೆಂಟ್ ಜಾಸ್ತಿಯಾಗಿರಬಹುದು. ಆದರೆ, ಕೂಲಿ 20 ರೂಪಾಯಿಗಳಿಂದ 150 ರೂಪಾಯಿಗೆ ಹೋಗಿದೆ. ಕೂಲಿ ಎಷ್ಟುಪಟ್ಟು ಜಾಸ್ತಿಯಾಗಿದೆ, ರೈತರು ಬೆಳೆದ ಬೆಳೆಗೆ ಎಷ್ಟು ಪಟ್ಟು ಬೆಲೆ ಜಾಸ್ತಿಯಾಗಿದೆ ಎಂಬುದನ್ನು ಲೆಕ್ಕ ಹಾಕುವುದನ್ನು ಮಾಡಬೇಕು. ಒಂದು ಕಡೆ ಮೀನುಗಾರಿಕೆಗೆ ತೊಂದರೆ, ಒಂದು ಕಡೆ ಕೃಷಿಗೆ ತೊಂದರೆ, ತೋಟಗಾರಿಕೆ ಬೆಳೆಯಲ್ಲಿ ಅಡಿಕೆ ಬೆಳೆಗಾರರ ಸಮಸ್ಯೆ ಇದ್ದೇ ಇದೆ. ಅದಕ್ಕೆ ಪರಿಹಾರ, ತಾತ್ಕಾಲಿಕವಾಗಿ ಖರೀದಿ ಮಾಡುವುದಕ್ಕೆ ಸರ್ಕಾರದ intervention ಬಿಟ್ಟರೆ ಬೇರೆ ಏನೂ ಆಗುತ್ತಿಲ್ಲ. ಅದನ್ನು ತಾವು ಬಹಳ ಎಚ್ಚರದಿಂದ ನೋಡಬೇಕು. ಉಪ್ಪು ನೀರಿನ ಅಣೆಕಟ್ಟನ್ನು ಆದಷ್ಟು ಜಾಸ್ತಿ ಮಾಡಬೇಕು. ನಮ್ಮಲ್ಲಿ major irrigation ಗೆ ಹೆಚ್ಚು ಹಣವನ್ನು ಕೇಳುವುದಿಲ್ಲ. ಸಮುದ್ರ ತಡೆಗೋಡೆಯ ಬಗ್ಗೆ ನಾನು ತಮಗೆ ಮಾಹಿತಿಯನ್ನು ಕೊಡುತ್ತೇನೆ. ಕಳೆದಬಾರಿ ಧರ್ಮ್‌ಸಿಂಗ್ ರವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಪ್ರಕಾಶ್ ರವರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ನೀವು ಕೆಲಸವನ್ನು ಮಾಡಿಸಿ ನಾವು ಸುನಾಮಿ ಫಂಡ್ ನಿಂದ ಒಂದು ಕೋಟಿ ಹಣವನ್ನು ಬಿಡುಗಡೆ ಮಾಡಿಸುತ್ತೇವೆಂದು ಹೇಳಿದ್ದರು. ಯಾವ ರೀತಿಯಾಗಿ ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರೋ ಅದೇ ರೀತಿಯಲ್ಲಿ ಸುನಾಮಿ ಫಂಡ್‌ನ್ನು ಬಿಡುಗಡೆ ಮಾಡುತ್ತೇವೆಂದು ಸುಮಾರು ಎರಡೂವರೆ ಕೋಟಿ ರೂಪಾಯಿಯ ಕೆಲಸವನ್ನು ಮಾಡಿಸಲಾಗಿತ್ತು. ಏಕೆಂದರೆ ಸಮುದ್ರದ ಕೊರತೆ ವಿಪರೀತ ಇತ್ತು. ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದರು. ಅನಂತರ ಕಂದಾಯ ಇಲಾಖೆಯವರು ನಮ್ಮಿಂದ ಬಿಡುಗಡೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ನೀವು ಸರ್ಕಾರ, ಕಂದಾಯ

ಇಲಾಖೆಯವರು ಇಲ್ಲವೇ P.W.D. ಇಲಾಖೆಯವರು ಯಾರಾದರು ಸರಿ ತೀರ್ಮಾನ ತೆಗೆದುಕೊಂಡು ಹಣವನ್ನು ಬಿಡುಗಡೆ ಮಾಡಬೇಕಿತ್ತು. ನಾವು ಅದಕ್ಕೆ ಓಡಾಡಬಾರದು. ಎಲ್ಲಿಂದ ಹಣವನ್ನು ಬಿಡುಗಡೆ ಮಾಡಬೇಕೆಂದು ನಿಮ್ಮಲ್ಲಿ meeting ಆಗಿ ತೀರ್ಮಾನವಾಗಬೇಕಾಗುತ್ತದೆ. ಶಾಸಕರು ಅಥವಾ ಗುತ್ತಿಗೆದಾರರು ಆ fileನ್ನು ಹಿಡಿದುಕೊಂಡು ಬರಬಾರದು. ಗುತ್ತಿಗೆದಾರರು fileನ್ನು ಹಿಡಿದುಕೊಂಡು ಬಂದರೆ ಅದಕ್ಕೆ ಅರ್ಥವೇ ಬೇರೆಯಾಗುತ್ತದೆ. ಅವರು ಬಂದಾಗ ಮಾತ್ರ ಹಣ ಬಿಡುಗಡೆಯಾಗುತ್ತದೆ, ಸರ್ಕಾರ ನೇರವಾಗಿ ಮಾಡುವುದಿಲ್ಲ, ಶಾಸಕರು ಬಂದಾಗ ಸಹ ಹಣ ಬಿಡುಗಡೆಯಾಗುವುದಿಲ್ಲ ಎಂಬ ಅಭಿಪ್ರಾಯ ಕೊಟ್ಟಾಗ ಅದಕ್ಕೆ ಅರ್ಥವೇ ಬೇರೆಯಾಗುತ್ತದೆ. ಅವರು ಬಂದಾಗ ಮಾತ್ರ ಹಣ ಬಿಡುಗಡೆಯಾಗುತ್ತದೆ ಎಂಬುದಾದರೆ ಜನರು ಯಾವ ರೀತಿಯಾಗಿ ಆಡಿಕೊಳ್ಳುತ್ತಾರೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಇನ್ನೊಂದು, ವಿದ್ಯುಚ್ಛಕ್ತಿ ಬಿಲ್ಲನ್ನು ಮನ್ನಾ ಮಾಡಿರುವಂಥದ್ದು ಮತ್ತು ಸಾಲದ ಮೇಲೆ ಬಡ್ಡಿಯನ್ನು ಮನ್ನಾ ಮಾಡಿರುವಂಥದ್ದು. ಇದು ಬಹಳ ದೊಡ್ಡ ದುರಂತ. ನಮ್ಮ ಜಿಲ್ಲೆಯ ಜನರಿಗೆ ಪ್ರಾಮಾಣಿಕತೆಯಿಂದ ಹಣವನ್ನು ಕಟ್ಟಿದ್ದಕ್ಕೆ ನನಗೆ ಎರಡು ಉತ್ತರವನ್ನು ಕೊಟ್ಟಿದ್ದಾರೆ. ಒಂದು ವಿದ್ಯುಚ್ಛಕ್ತಿ ಬಿಲ್ಲನ್ನು ಕಟ್ಟಿದ್ದು ಮುಂದಿನ ದಿನಗಳಲ್ಲಿ ಹೊಂದಾಣಿಕೆ ಮಾಡುವಂಥದ್ದು ಸರ್ಕಾರದ ಆಲೋಚನೆಯಲ್ಲಿ ಇದೆ ಎಂದು ಕೊಟ್ಟಿದ್ದಾರೆ. ಆದರೆ, ಬಡ್ಡಿ ಮನ್ನಾದ ಬಗ್ಗೆ ಇದರಲ್ಲಿ ಕೊಟ್ಟಿಲ್ಲ. ಮೊನ್ನೆ ಉಪಮುಖ್ಯಮಂತ್ರಿಯವರು ನಮ್ಮ ಕ್ಷೇತ್ರಕ್ಕೆ ಬಂದಾಗ ನಾನು ಕೇಳಿದೆ. ರಾಜ್ಯದ ಬೇರೆ ಎಲ್ಲಾ ಭಾಗದಲ್ಲಿ ಮನ್ನಾ ಮಾಡಿದಾಗ ನಮ್ಮವರು ಹಣವನ್ನು ಕಟ್ಟಿದ್ದರಿಂದ ಮುಂದೆ ಮರು ಸಾಲವನ್ನು ಪಡೆದಾಗ ಹೊಂದಾಣಿಕೆಯನ್ನು ಮಾಡಬೇಕು. ಅಥವಾ ಈಗಾಗಲೇ ಮುಂದೆ ಸಾಲವನ್ನು ಮನ್ನಾ ಮಾಡಿದರೆ ನಮ್ಮ ಜಿಲ್ಲೆಯವರಗೂ ಅದರ ಲಾಭವನ್ನು ಹಣ ಕಟ್ಟಿದವರಿಗೆ ಕೊಡಬೇಕು. ಏಕೆಂದರೆ, ಪ್ರಾಮಾಣಿಕತೆಗೆ ಈ ಸರ್ಕಾರದಲ್ಲಿ ಬೆಲೆ ಇಲ್ಲ ಎಂಬ ಅಭಿಪ್ರಾಯವನ್ನು ತಾವು ಕೊಡಬಾರದು. ಏಕೆ ಇದನ್ನು ಮಾಡುತ್ತೀರಿ? ನಾವು ಇದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆಗೆ ತರಬೇಕೆಂದು ಇದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಉಪ ಮುಖ್ಯಮಂತ್ರಿಯವರು ನಮ್ಮಲ್ಲಿ ಬಂದು ಸಾಲವನ್ನು ಮನ್ನಾ ಮಾಡುವುದಿಲ್ಲವೆಂದು ಹೇಳಿಕೆಯನ್ನು

ಕೊಟ್ಟಿದ್ದಾರೆ. ಅದೂ ಬಜೆಟ್ ಮಂಡಿಸುವ ಮುನ್ನವೇ ಈ ಕಾರ್ಯಕ್ರಮವನ್ನು ಹೇಳಿದ್ದಾರೆ. ಸಿದ್ದರಾಮಯ್ಯವವರು ಈ ರೀತಿ ಯಾವಾಗಲಾದರು ಮಾಡಿದ್ದರೇ? ಬಜೆಟ್ ಮಂಡಿಸುವ ಮುನ್ನವೇ ಬಜೆಟ್ ಕಾರ್ಯಕ್ರಮಗಳನ್ನೇನಾದರು ವಿಶೇಷವಾಗಿ ಹೇಳುತ್ತಿದೀರಾ? ಆದರೆ, ಇತ್ತೀಚಿನ ದಿನಗಳಲ್ಲಿ ನಾವು ಅದನ್ನು ಕಾಣುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಸಮ್ಮಿಶ್ರ ಸರ್ಕಾರಗಳು ಇರುವುದರಿಂದ ಯಾರ್‍ಯಾರು ಏನೇನು advantage ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಾರಾಯಿ ರದ್ದು ಮಾಡುವುದೂ ಕೂಡ ಬಜೆಟ್ನಲ್ಲಿ ಹೇಳುವುದಿಲ್ಲ, ಆಮೇಲೆ ಹೇಳುತ್ತಾರೆಂದು ಜನಗಳು ಈಗ ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಸಾರಾಯಿ ರದ್ಧು ಮಾಡುತ್ತೇವೆಂದು ಹೇಳಿದರೂ ಕೂಡ ಅದು ಜಾರಿಗೆ ಬರುವುದು that will come into effect on 1st Julyಇವರು ಅದನ್ನು ಈಗಲೇ ಶುರು ಮಾಡಿಬಿಟ್ಟಿದ್ದಾರೆ. ನಾವೆಲ್ಲಾ ಬಜೆಟ್‌ನಲ್ಲಿ ಏನು ಹೇಳಬೇಕೋ ಅದನ್ನೆಲ್ಲ ಈಗಲೇ ಹೇಳಿಬಿಟ್ಟಿದ್ದಾರೆ. ಅದರ sanctityನೇ ಈಗ ಹೋಗಿಬಿಟ್ಟಿತು.

ಶ್ರೀ ಜೆ.ಸಿ. ಮಾಧುಸ್ವಾಮಿ: Collective responsibility ಎನ್ನತಕ್ಕ ಪದವೇ ಈಗ ಇಲ್ಲ. ಈಗ Minister ಅವರಿಗೆ ಇಷ್ಟ ಬಂದಿದ್ದನ್ನು ಹೇಳಬಹುದು. ಕ್ಯಾಬಿನೆಟ್ನಲ್ಲಿಡಬೇಕು, ಅದು ಪಾಲಿಸಿಯಾಗಬೇಕು, ಅನಂತರ ಮಾತನಾಡಬೇಕು ಎಂಬುದು ಇಲ್ಲವೇ ಇಲ್ಲ. ಯಾವ Ministerಗೆ ಏನು ತೋಚುತ್ತದೋ ಆ ರೀತಿ ಹೇಳಿಕೆಯನ್ನು ಕೊಡುತ್ತಾರೆ. ಆಡಳಿತ ಮಾಡುವುದು ಕ್ಯಾಬಿನೇಟ್, Minister ಅಲ್ಲ. It is a collective responsibility.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದಕ್ಕೇ ಒಬ್ಬೊಬ್ಬರೇ ಮಂತ್ರಿಗಳು collective responsibility ಎಂದು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಮಂತ್ರಿಗಳು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇದು collective responsibility ಅಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ: Collection responsibility ಅಲ್ಲ collective responsibility.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: Collection responsibility ಅಲ್ಲ collective responsibility ಅಂತನೇ ನಾನು ಹೇಳುತ್ತಿದ್ದೇನೆ. ನಾನೇನಾದರು slip of tongue ಆಗಿ ಹಾಗೆ ಹೇಳಿದೆನೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: Joint ಆಗಿ collection ಹೇಗಾಗುತ್ತದೆ? Collection individual, ತೀರ್ಮಾನ joint, ಆ ರೀತಿ.

ಶ್ರೀ ಕೆ. ಜಯಪ್ರಕಾಶ್ ಹಗ್ಡೆ: ಈ ಎರಡರ ಬಗ್ಗೆ ಚರ್ಚೆ. ಒಂದು ಸಾರಾಯಿ ನಿಷೇಧ ಮಾಡುವುದು. ಅದು ಸಾಧ್ಯವಿಲ್ಲ..

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಬೀಳಬೇಕಾಗಿರುವುದು ಈಗ ಜಿ.ಟಿ.ದೇವೇಗೌಡರ ಮೇಲೆ. ಪಾಪ ಅವರನ್ನೇಕೆ ತೆಗೆದುಕೊಳ್ಳುತ್ತೀರಿ. ಪಾಪ ಅವರು ಸಾಲ ಮನ್ನಾ ಆಗಿದೆಯೆಂದು ಬೆಳಿಗ್ಗೆ ಬೈಸಿಕೊಂಡಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರು ಒಂದು ಹೇಳಿಕೆಯನ್ನು ಕೊಟ್ಟರು, ಮಾರನೇ ದಿವಸ ನಾನು ಹೇಳಿಯೇ ಇಲ್ಲವೆಂದರು.

ಶ್ರೀ ಬಿ. ಶಿವರಾಂ: ಅದಕ್ಕೇ ಅವರು ಈಗ ಮಾತನಾಡುತ್ತಲೇ ಇಲ್ಲ. ಈಗ ಏನು ಕೇಳಿದರೂ ಮಾತನಾಡುತ್ತಲೇ ಇಲ್ಲ.

(**ಗೊಂದಲ**)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದಕ್ಕೇ ನಾವು ಪ್ರಿವಿಲೇಜ್ ಮೋಷನ್ನು ಮೂವ್ ಮಾಡಬೇಕೆಂದು ಇದ್ದೇವೆ.

ಶ್ರೀ ಕೆ. ಶ್ರೀನಿವಾಸಗೌ: ಸಾಲಾ ಮನ್ನಾದ ವಿಚಾರದಲ್ಲಿ ದೇವೇಗೌಡರಿಗೆ ಆಗಿರುವ ಆಘಾತ ಇಲ್ಲಿ ಮತ್ಯಾರಿಗೂ ಆಗಿಲ್ಲ. ಆದರೆ. ಅದನ್ನು ಹೇಳಲಾರರು, ಸುಮ್ಮನೆ ಇರಲಾರರು.

ಶ್ರೀ ಜಿ.ಟಿ.ದೇವೇಗೌಡ: ನಮ್ಮ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ಅದು ಖಂಡಿತಾ ಕಾರ್ಯಗತವಾಗುತ್ತದೆ. ಮುಖ್ಯಮಂತ್ರಿಯವರು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಖಂಡಿತ ಮಾಡುತ್ತೇವೆ. ಸಾಲ ಮನ್ನಾ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮೈಸೂರಿನಲ್ಲಿ ನೀವು ಪತ್ರಿಕಾ ಮಾಧ್ಯಮದವರ ಜೊತೆ ಮಾತನಾಡುವಾಗ ಏನೇನು ಹೇಳಿದಿರಿ? ನೀವು ಮಂತ್ರಿಯಾದ ಕೂಡಲೇ ಮೈಸೂರಿನಲ್ಲಿ press conference ಮಾಡಿದಿರಿ.

ಶ್ರೀ ಬಿ.ಆರ್. ಪಾಟೀಲ್: ಈಗಲೂ ಮಂತ್ರಿಯವರು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇವರು ಮೈಸೂರಿನಲ್ಲಿ ಹೇಳಿದ್ದು ಏನೆಂದರೆ, ಸಾಲ ಮನ್ನಾ ಪೂರ್ತಿ ಸಾಧ್ಯವಿಲ್ಲ, 50 ಸಾವಿರದೊಳಗಡೆ ಕೋ–ಆಪರೇಟೀವ್ ಸಾಲವನ್ನು ಮನ್ನಾ ಮಾಡಲು ನಾವು ಚಿಂತನೆ ಮಾಡುತ್ತಿದ್ದೇವೆಂದು ಹೇಳಿದರು. ಆದರೆ, ನಿಮ್ಮ ಮುಖ್ಯಮಂತ್ರಿಯವರು declare ಮಾಡಿಬಿಟ್ಟರು. ಉಪಮುಖ್ಯಮಂತ್ರಿಯವರು declare ಮಾಡಿ ಅನಂತರ ಆಗುವುದಿಲ್ಲವೆಂದು ಹೇಳಿದರು. ಮತ್ತೆ ಅವರೂ ಒಪ್ಪಿಬಿಟ್ಟರು. ನೀವು dateನ್ನೇ ಹೇಳಿಬಿಟ್ಟಿರಿ.

ಶ್ರೀ ಜಿ.ಟಿ. ದೇವೇಗೌಡ: ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಯವರು ಸಾಲ ಮನ್ನಾ ಮಾಡುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ, ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲದಲ್ಲಿ ಯಾವ ರೀತಿಯಾಗಿ ಮಾಡಬೇಕು ಎಂಬ ಬಗ್ಗೆ ನಿರ್ಣಯ ಮಾಡುತ್ತೇವೆ, ಎಂದು ಮಾತ್ರ ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಚಿಂತನೆ ಮಾಡುವುದನ್ನು ಹೇಳುವುದಕ್ಕೆ ಸರ್ಕಾರ ಎನ್ನುವುದಿಲ್ಲ. ತೀರ್ಮಾನ ಹೇಳುವುದು ಸರ್ಕಾರ.

ಅಧ್ಯಕ್ಷರು: ಮಾಧುಸ್ವಾಮಿಯವರೆ, ಅವರಿಗೆ ಮಾತನಾಡಲು ಅವಕಾಶ ಕೊಡಿ. ಬೇಗ ಮುಗಿಸೋಣ.

ಶ್ರೀ ಜಿ.ಟಿ.ದೇವೇಗೌಡ: ಖಂಡಿತ ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ. ಸಾಲ ಮನ್ನಾ ಮಾಡುತ್ತೇವೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಒಂದು ರೂಪಾಯಿ ದುಡ್ಡು ಕಟ್ಟುವುದಿಲ್ಲ.

[ಗೊಂದಲ]

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಚಿವರು ನಾವು ಸಾಲ ಮನ್ನಾ ಮಾಡುತ್ತೇವೆ ಎಂದು ಈಗ ಹೇಳಿದ್ದು ದಾಖಲೆಗೆ ಹೋಗಿದೆ.

[ಗೊಂದಲ]

ಶ್ರೀ ಎಂ.ಪಿ.ಪ್ರಕಾಶ್ : ಸರ್ಕಾರದ ಪರವಾಗಿ ನಾವು ಸ್ವಲ್ಪ ಹೇಳುತ್ತೇವೆ, ಕೇಳಿ. 'ಚಿಂತನೆ ಮಾಡುತ್ತೇವೆ' ಎನ್ನುವುದನ್ನು ಸರ್ಕಾರ ಹೇಳಬಹುದು.

'ಗಂಭೀರವಾಗಿ ಆಲೋಚನೆ ಮಾಡುತ್ತಿದ್ದೇವೆ', 'It is under active consideration' ಈ ತರಹದ ಮಾತುಗಳನ್ನು ಹೇಳುತ್ತಾರೆ. ಹಾಗೆಯೇ ಅವರೂ ಕೂಡ ಅದೇ ಮಾತನ್ನು ಮೈಸೂರಿನಲ್ಲಿ ಹೇಳಿದ್ದಾರೆ. ನಾವು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಇದರ ಹಿನ್ನೆಲೆಯಲ್ಲಿ ಸರ್ಕಾರ ಗಂಭೀರವಾಗಿ ಚಿಂತನೆ ಮಾಡುತ್ತಿದೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತೇವೆ ಎಂಬುದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : Finance implications ಬರುವಾಗ ಜವಾಬ್ದಾರಿ ಇರುವ ಯಾವುದೇ ಸರ್ಕಾರ 3–4 ತಿಂಗಳ ಮುಂಚಿನದನ್ನು ಈಗಲೇ declare ಮಾಡುವುದಿಲ್ಲ. Even Petrol price ಜಾಸ್ತಿ ಮಾಡುವಾಗಲೂ, ಸಾಯಂಕಾಲ announce ಮಾಡಿ, ಅದನ್ನು ರಾತ್ರಿ 12 ಗಂಟೆಗೆ ಜಾರಿ ಮಾಡುತ್ತಾರೆ. ಬಜೆಟ್‌ನಲ್ಲೂ ಕೂಡ ಇಂತಹ ದಿವಸದಿಂದಲೇ ಜಾಸ್ತಿ ಮಾಡುತ್ತೇವೆ ಎಂದು ಹೇಳಲಾಗುತ್ತದೆ. ಒಂದು ಸೊಸೈಟಿಗೂ ಕೂಡ ದುಡ್ಡು ಬರುತ್ತಿಲ್ಲ. ಮಾನ್ಯ ಪ್ರಕಾಶ್‌ರವರೆ, ನೀವು ಹೀಗೆ ಹೇಳಿರುವುದರಿಂದ ಒಂದು ಸೊಸೈಟಿಯಲ್ಲಾದರೂ ಸಾಲ recovery ಆಗುತ್ತಿದೆಯೇ? ಅಥವಾ ಒಂದು ಬ್ಯಾಂಕ್‌ನಲ್ಲಿಯಾದರೂ recovery ಆಗುತ್ತಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಯಾವಾಗಲೂ ಕೂಡ ಅದನ್ನು ಹೇಳಬಹುದು. 'ಪೆಟ್ರೋಲ್ ಬೆಲೆಯನ್ನು ಸರ್ಕಾರ ಏರಿಸುತ್ತದೆ ಅಥವಾ ತಗ್ಗಿಸುತ್ತದೆ', 'ಸರ್ಕಾರ ಆ ಬಗ್ಗೆ ಚಿಂತನೆ ಮಾಡುತ್ತಿದೆ' ಎಂಬುದು 3–4 ದಿವಸಗಳ ಮುಂಚಿನಿಂದಲೂ deliberate looking ಆಗಿ ಕೂಡ ಇರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಆ ರೀತಿ ನಮ್ಮಲ್ಲಿ quote ಮಾಡುತ್ತಿರುತ್ತಾರೆ. ತಮಗೆ ಬೇಕಾದರೆ ಉದಾಹರಣೆಯನ್ನು ಇವತ್ತೇ ನಾನು Research Wing ನಿಂದ ತರಿಸಿ ಹೇಳುತ್ತೇನೆ. ಬಜೆಟ್ ಮಂಡಿಸುವುದಕ್ಕಿಂತ ಪೂರ್ವದಲ್ಲಿ ಇಂಥಿಂಥದ್ದರಲ್ಲಿ tax ಕಡಿಮೆಯಾಗಬಹುದು ಎಂದು ಬರೆಯುತ್ತಾರೆ, ಇಂಥಾದ್ದರಲ್ಲಿ tax ಹೆಚ್ಚಾಗುತ್ತದೆ ಎಂದು ಬರೆಯುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪೆಟ್ರೋಲ್ ಅಥವಾ ಡೀಸೆಲ್ ಬೆಲೆ ಏರಿಸುವ ಬಗ್ಗೆ ಮೊದಲೇ ಹೇಳುವುದರಿಂದ ಸರ್ಕಾರಕ್ಕೇನೂ ಮೋಸವಾಗುವುದಿಲ್ಲ. But Co–operative ಸಾಲದ ಬಗ್ಗೆ ಹೇಳಿದರೆ, Societyಗಳಿಗೆ ಒಂದು ರೂಪಾಯಿ ಸಾಲ ಸಹ ಮರುಪಾವತಿ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಸರ್ಕಾರದ ರಾಜ್ಯಪಾಲರ ಭಾಷಣ ಎನ್ನತಕ್ಕದ್ದು ಮುಂದೆ ಈ ಸರ್ಕಾರ ಯಾವ ವಿಚಾರಗಳಿಗೆ ತನ್ನ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎನ್ನುವುದನ್ನು ಮುನ್ಸೂಚನೆಯಾಗಿ ಹೇಳತಕ್ಕದ್ದಾಗಿದೆ. ಅದರಲ್ಲಿ ನಾವು ಸಾಲ ಮನ್ನಾಕ್ಕೆ ಚಿಂತನೆ ಮಾಡುತ್ತಿದ್ದೇವೆ ಎಂದು ಘೋಷಿಸಿದ ತಕ್ಷಣವೇ ಬೇರೆ ಬೇರೆ ರೀತಿ ನಡೆಯುತ್ತಿರಬಹುದು. ತಾವು ಹೇಳಿದಂತೆ ದುಡ್ಡು ಬರುತ್ತಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇಂತಹವು ಅನೇಕ ಉದಾಹರಣೆಗಳಿವೆ. ಈ ಸರ್ಕಾರ ನಿಜವಾಗಿಯೂ ರೈತರ ಪರವಾಗಿ ಇದೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರ ಮಗನೇ DCC Bank ಅಧ್ಯಕ್ಷರಾಗಿದ್ದಾರೆ, ಮಾನ್ಯ ಶಾಸಕರಾದ ರಾಜಣ್ಣನವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿದ್ದಾರೆ. ಅವರಿಬ್ಬರಿಗೂ ಸಾಲ ಮನ್ನಾದ ಪರಿಣಾಮಗಳ ಬಗ್ಗೆ ಗೊತ್ತಿದೆ. ಅವರು ಅವರ ಆತ್ಮದ ಮೇಲೆ ಕೈಯಿಟ್ಟುಕೊಂಡು ಹೇಳಲಿ. ಈ ಸಾಲ ಮನ್ನಾ ಪ್ರಕ್ರಿಯೆ ಪೂರ್ತಿಯಾದರೆ ನಾವೂ ಕೂಡ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನೀವು ಎಲ್ಲೋ ಸ್ವಲ್ಪ ಮನ್ನಾ ಮಾಡಲಿಕ್ಕೆ ಇಡೀ credit system ಅನ್ನು ಈ ರಾಜ್ಯದಲ್ಲಿ ಹಾಳು ಮಾಡುತ್ತಿದ್ದೀರಿ. ಈ ಬಗ್ಗೆ ಒಬ್ಬರೂ ಕೂಡ ಎಚ್ಚರಿಕೆ ವಹಿಸಿಲ್ಲ ಎನ್ನುವಂತಹ ಮಾತನ್ನು ನಾನು ಈಗ ಹೇಳಬೇಕಾಗುತ್ತದೆ. ಮಾನ್ಯ ಪ್ರಕಾಶ್‌ರವರೆ, ಸಾಲ ಮನ್ನಾ ಮಾಡುವುದರಿಂದ DCC Bank ಉಳಿಯುತ್ತದೆಯೇ ಎಂದು ಇವತ್ತು ನೀವು ನಿಮ್ಮ ಮಗನನ್ನು ಬಳ್ಳಾರಿಗೆ ಹೋಗಿ ಕೇಳಿ. ಅವರು ಆಗುತ್ತದೆ ಎಂದು ಹೇಳಿದರೆ ನಾನಂತೂ ಆ ಬಗ್ಗೆ ಒಪ್ಪುತ್ತೇನೆ. ಅದನ್ನು ಬಿಟ್ಟು....

[ಗೊಂದಲ]

ಶ್ರೀ ಕೆ. ಶ್ರೀನಿವಾಸಗೌಡ : .... ಇದುವರೆಗೆ ಸುಮಾರು 117–120 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಸಾವಿರಾರು ಜನರು ಸಾಯುತ್ತಾರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಈ ಮಾತನ್ನು ನಾನು ಬಹಳ ನೊಂದು ಹೇಳಬೇಕಾಗುತ್ತದೆ.

[ಗೊಂದಲ]

ಅಧ್ಯಕ್ಷರು : ಮಾನ್ಯ ಹೆಗ್ಡೆಯವರೆ, ತಾವು ಮಾತನಾಡುತ್ತೀರೋ ಇಲ್ಲವೋ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾತನಾಡುತ್ತೇನೆ.

ಅಧ್ಯಕ್ಷರು : ತಾವು ತಮ್ಮ ಭಾಷಣದ ಮಧ್ಯದಲ್ಲಿ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೀರಿ. ನಿಮಗೆಲ್ಲಿ ಮತ್ತೆ ಮಾತನಾಡಲು ಅವಕಾಶ ಕೊಡಲಿಕ್ಕಾಗುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :ಸಾರ್, ಇವತ್ತು ನನಗೆ ಸ್ವಲ್ಪ ಗಂಟಲು ಸರಿಯಿಲ್ಲ...

[ಗೊಂದಲ]

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸಹಕಾರಿ ಸಾಲ ಮನ್ನಾ ವಿಚಾರ ರಾಜಕೀಯ ಮೇಲಾಟ. ಅದನ್ನು ಎಲ್ಲರೂ ನೋಡಿದ್ದಾರೆ. ಅದರ ಬಗ್ಗೆ ಜನಕ್ಕೆ ಅರ್ಥವಾಗಿದೆ. ಸುಮ್ಮನೆ un–necessary ಆಗಿ ಇವರು ಅವರ ಮೇಲೆ ಹೇಳುವುದು, ಅವರು ಇವರ ಮೇಲೆ ಹೇಳುವುದೇಕೆ? ನಿಮಗೆ ಅನುಕೂಲವಾದಾಗ ನೀವೊಂದು ತರಹ statement ಮಾಡುತ್ತೀರಿ, ಅವರಿಗೆ ಅನುಕೂಲವಾದಾಗ ಅವರೊಂದು ತರಹ statement ಮಾಡುತ್ತಾರೆ. ರಾಜಕೀಯ ಇಲ್ಲಿ ಬಂದು ಸಮಯ ಹಾಳಾಗುತ್ತಿದೆ. ಗಂಭೀರವಾಗಿ ಮಾತನಾಡುವುದನ್ನು ಬಿಟ್ಟು ಏನೇನೋ ಹೇಳುವುದಕ್ಕೆ ಹೋಗಿ ಸದನದ ಸಮಯ ಏಕೆ ಹಾಳು ಮಾಡುತ್ತೀರಿ? ಹೆಗ್ಡೆಯವರೆ, ತಾವು ಮಾತನಾಡುವುದನ್ನು ಮುಂದುವರೆಸಿ.

[ಗೊಂದಲ]

ಅಧ್ಯಕ್ಷರು : ಅದಕ್ಕೋಸ್ಕರವೇ ನಾನು ಹೇಳುವುದೇನೆಂದರೆ, ಈ credit system ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು ಸಮಗ್ರವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬನ್ನಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಮೊನ್ನೆ ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮ ಬ್ರಹ್ಮಾವರಕ್ಕೆ ಬ್ಯಾಂಕಿನ ಕಟ್ಟಡವೊಂದರ ಉದ್ಘಾಟನೆಗೆ ಬಂದಾಗ ಇದರ ಬಗ್ಗೆ ಅಲ್ಲಿ ಸಮಗ್ರವಾಗಿ ಚರ್ಚೆಯಾಯಿತು. ಮಾನ್ಯ ಉಪ ಮುಖ್ಯಮಂತ್ರಿಗಳು ಸಾಲ ಮನ್ನಾ ಎಂದು ತಮ್ಮ ಭಾಷಣ ಪ್ರಾರಂಭ ಮಾಡಿದರು. ಕೆಲವರು ಅದಕ್ಕೆ ಚಪ್ಪಾಳೆ ಹೊಡೆದರು. ಅದಕ್ಕೆ ಅವರು, ಈಗ ಚಪ್ಪಾಳೆ ಹೊಡೆಯಬೇಡಿ, ನನ್ನ ಭಾಷಣ ಪೂರ್ತಿಯಾಗಿ ಕೇಳಿ ಚಪ್ಪಾಳೆ ಹೊಡೆಯಿರಿ ಎಂದು ಹೇಳಿದರು. ಅವರು ಆವತ್ತು ನೇರವಾಗಿ ಸಾಲ ಮನ್ನಾ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ಆಗ ನಾನು ಅಲ್ಲಿದ್ದೆ. ಆದರೆ ನನ್ನ

ಪ್ರಶ್ನೆ ಏನೆಂದರೆ, ನಮ್ಮ ಜಿಲ್ಲೆಯವರು ಪ್ರಾಮಾಣಿಕರಾಗಿ ಈಗಾಗಲೇ ಸಾಲವನ್ನೆಲ್ಲಾ ಕಟ್ಟಿದ್ದಾರೆ. ಸಾಲ ಮನ್ನಾ ಮಾಡಿದರೆ ಅವರಿಗೆ ಈಗಾಗಲೇ ಸಾಲ ಕಟ್ಟಿದವರಿಗೆ ಏನು ಅನುಕೂಲವಾಗುತ್ತದೆ? ಅವರಿಗೆ ನೀವೇನು ಮಾಡುತ್ತೀರಿ? ಸಾಲ ಮನ್ನಾ ಮಾಡಿದಾಗ ಯಾರು ಪ್ರಾಮಾಣಿಕತೆಯಿಂದ ಕಟ್ಟಿದ್ದಾರೋ, ಅವರಿಗೆ ವಾಪಸ್ ಮರುಪಾವತಿಯನ್ನು ಮಾಡುತ್ತೀರಾ ಎಂಬುದು ನಮಗೆ ಬೇಕು. ಪ್ರತಿ ಸಲ ಈ ಪರಿಸ್ಥಿತಿ ನಿರ್ಮಾಣವಾದರೆ, ಮುಂದೆ ನಮ್ಮ ಜಿಲ್ಲೆಯವರು 'ನಾವೂ ಕಟ್ಟುವುದು ಬೇಡ, ಏಕೆಂದರೆ ಸಾಲ ಮನ್ನಾ ಆದಾಗ ನಮಗೇನೂ ಲಾಭ ಸಿಗುವುದಿಲ್ಲ' ಎಂದು ಹೇಳುವಂತಹ ದಿವಸ ಬರುತ್ತದೆ. ಪ್ರಾಮಾಣಿಕತೆಗೆ ಏನಾದರೂ ಬೆಲೆ ಬೇಕಾದರೆ, ಸಮಯಕ್ಕೆ ಸರಿಯಾಗಿ ಸಾಲ ಕಟ್ಟಿದವರಿಗೆ ಮರುಪಾವತಿಯನ್ನಾದರೂ ಮಾಡಿ. ಏಕೆಂದರೆ ಅಷ್ಟು ದಿವಸದ ಬಡ್ಡಿಯಾದರೂ ಸರ್ಕಾರಕ್ಕೆ ಉಳಿಯುತ್ತದೆ. ಇವರು ಈಗಾಗಲೇ ಕಟ್ಟಿದ್ದಾರೆ. ಅದಕ್ಕೋಸ್ಕರ ನಾನು ನೇರವಾಗಿ ಈ ಬಗ್ಗೆ ಸರ್ಕಾರವನ್ನು ಕೇಳುತ್ತೇನೆ. ಮಾನ್ಯ ಸಹಕಾರ ಸಚಿವರು ಇಲ್ಲೇ ಇದ್ದಾರೆ. ಅವರು ಒಂದು ಸಲ ಹೇಳಿಕೆಯನ್ನು ಕೊಟ್ಟು, ಇನ್ನೊಂದು ಸಲ ಇಲ್ಲವೆಂದು ಹೇಳಿದರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡುವಾಗಲೂ ಸಹ, ಇಂತಿಷ್ಟು limit ಎಂದೇನೂ ಹೇಳಲಿಲ್ಲ. 10 ಸಾವಿರ ರೂಪಾಯಿ ಅಥವಾ 20 ಸಾವಿರ ರೂಪಾಯಿಗಳ ಸಾಲ ಮನ್ನಾ ಎಂದು ಅವರು ಹೇಳಿಲ್ಲ. ಅವರು ಕೇವಲ ರೈತರ ಸಾಲ ಮನ್ನಾ ಎಂದಷ್ಟೇ ಹೇಳಿದ್ದಾರೆ. ಅವರು ಕೃಷಿ ಸಾಲ ಎಂದಾಗಲಿ ಅಥವಾ ಬೆಳೆ ಸಾಲ ಎಂದಾಗಲಿ ಹೇಳಿಲ್ಲ. ಅವರು ಎಲ್ಲವನ್ನೂ ಸೇರಿಸಿ ಹೇಳಿದ್ದಾರೆ. ಆದ್ದರಿಂದ ಇವತ್ತು ನೀವು ಸಾಲ ಮನ್ನಾ ಮಾಡದಿದ್ದರೆ ನಿಮ್ಮ ಸಂಸ್ಥೆಗಳೆಲ್ಲಾ ನಾಶವಾಗಿ ಹೋಗುತ್ತವೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕಾಗುತ್ತದೆ. ದಯವಿಟ್ಟು ಯಾವುದನ್ನು ಮನ್ನಾ ಮಾಡುತ್ತೇವೆ, ಯಾವುದನ್ನು ಮಾಡುವುದಿಲ್ಲ ಎಂಬ ತೀರ್ಮಾನವನ್ನು ತೆಗೆದುಕೊಂಡು ನಂತರ ಹೇಳಿಕೆಯನ್ನು ಕೊಡಿ. ಏಕೆಂದರೆ, ಸದನದ ಹೊರಗಡೆ ಈಗಾಗಲೇ ನೀವು ಹೇಳಿಕೆಯನ್ನು ಕೊಟ್ಟಾಗಿದೆ. ಆಮೇಲೆ ತೀರ್ಮಾನಕ್ಕೆ ಹೋಗುವ ಅವಶ್ಯಕತೆ ಇಲ್ಲ. ನೀವು ಮೊದಲೇ ಸದನದಲ್ಲಿ ತೀರ್ಮಾನವನ್ನು ಮಾಡಿ ಹೇಳಿದ್ದರೆ, ಅದಕ್ಕೊಂದು ಅರ್ಥ ಬರುತ್ತಿತ್ತು. ದಯವಿಟ್ಟು ಇದರ ಬಗ್ಗೆ ಸ್ವಲ್ಪ ಹೆಚ್ಚು ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಇನ್ನು BPL ಬಗ್ಗೆ ಹೇಳುವುದಾದರೆ, ...

ಅಧ್ಯಕ್ಷರು : ತಾವು ಮಾತನಾಡಲು ಆರಂಭಿಸಿ ಬಹಳ ಕಾಲವಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದಕ್ಕೂ ಅದಕ್ಕೂ ಸಂಬಂಧ ಇರುವುದರಿಂದ ಅದರ ಬಗ್ಗೆ ಹೇಳುತ್ತಿದ್ದೇನೆ. ರೈತರು ಬೆಳೆ ನಾಶವಾಗಿ ಕಷ್ಟ ಪಡುತ್ತಿದ್ದಾರೆ. APL ಮತ್ತು BPL ಮಧ್ಯದ ವ್ಯತ್ಯಾಸವನ್ನು ನೋಡಿದರೆ, ಕೆಲವು ಸೌಲಭ್ಯಗಳು ಅವರಿಗೂ ಸಿಗುತ್ತವೆ. ಎಲ್ಲರೂ BPL cards ಬೇಕು ಎಂದು ಹೇಳುವುದು ಏಕೆಂದರೆ, ಎಲ್ಲಾ ರೀತಿಯ ಸೌಲಭ್ಯಗಳು APLಗಿಂತ BPLಗೆ ಜಾಸ್ತಿ ಸಿಗುತ್ತವೆ. ನಾನು ಸರ್ಕಾರ ಪ್ರತಿಯೊಬ್ಬರಿಗೂ ಗ್ಯಾಸ್ ಅನ್ನು ಏಕೆ supply ಮಾಡಬೇಕೆಂದು ಹೇಳುತ್ತೇನೆಂದರೆ, ಇದರಿಂದ ಮರಗಳನ್ನು ಕಡಿಯುವುದು ನಿಂತು ಹೋಗುತ್ತದೆ. ಆದಷ್ಟು ಹೆಚ್ಚು ಗ್ಯಾಸ್ ಸಿಲಿಂಡರ್‌ಗಳನ್ನು ಗ್ರಾಮೀಣ ಪ್ರದೇಶಗಳ ಮನೆ ಮನೆಗೆ ಕೊಟ್ಟರೆ, ಸ್ವಲ್ಪ ಮರಗಳನ್ನು ಕಡಿಯುವುದು ಕಡಿಮೆಯಾಗುತ್ತದೆ ಎಂಬುದು ನನ್ನ ಭಾವನೆಯಾಗಿದೆ. ಏಕೆಂದರೆ, ಪ್ರತಿಯೊಂದು ಕಡೆಗೂ ನೋಡಿದಾಗ ಅರಣ್ಯ ನಾಶವಾಗಿರುವುದು ಕಂಡು ಬರುತ್ತದೆ. ಅರಣ್ಯ ಇಲಾಖೆಯವರು ಮರಗಳನ್ನು ಹಾಕಿದ್ದೇ ಕಡಿಮೆ, ಅದನ್ನೂ ಪೂರ್ತಿಯಾಗಿ ಕಡಿದುಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೋಸ್ಕರ ಮರಗಳನ್ನು ಕಡಿಯುವುದನ್ನು ನಿಲ್ಲಿಸಬೇಕೆಂದರೆ ಈ ಒಂದು ಕಾರ್ಯಕ್ರಮವನ್ನು ಜಾರಿಗೊಳಿಸಬೇಕು ಎಂದು ಹೇಳುತ್ತೇನೆ.

ಇನ್ನು ಆಶ್ರಯ ಮನೆಗಳ ಬಗ್ಗೆ ಹೇಳುವುದಾದರೆ, ಅದೂ ಸಹಿತ ಇದಕ್ಕೆ ಸಂಬಂಧವಿದೆ. ಕೂಲಿ ಕಾರ್ಮಿಕರಿಗೆ ಮತ್ತು ರೈತರಿಗೆ ದುಡ್ಡು ಕಟ್ಟಲಿಕ್ಕಾಗುತ್ತಿಲ್ಲ. ಯಾವ ರೀತಿಯಲ್ಲಿ ರೈತರಿಗೆ ಬಡ್ಡಿ ಮನ್ನಾ ಮಾಡಿದ್ದೀರಿ, ಆ ರೀತಿಯಲ್ಲಿ ಬಡ ಕೂಲಿ ಕಾರ್ಮಿಕರಿಗೆ ಬಡ್ಡಿಯನ್ನು ಮನ್ನಾ ಮಾಡಿ One Time Settlement ಗೆ ಅವಕಾಶವನ್ನು ಕೊಡಿ. ಇಲ್ಲದಿದ್ದರೆ, 10 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ನೀವು ಕೊಟ್ಟರೂ ಸಹ, ಇನ್ನುಳಿದ 10 ಸಾವಿರ ರೂಪಾಯಿಗಳಿಗೆ ಬಡ್ಡಿಯನ್ನು ಹಾಕಿದಾಗ, ಒಬ್ಬೊಬ್ಬರು 22 ಸಾವಿರ ರೂಪಾಯಿಗಳವರೆಗೆ ಕಟ್ಟಬೇಕಾಗುತ್ತದೆ. ಬಡ್ಡಿಯನ್ನು ಮನ್ನಾ ಮಾಡಿ ಅಸಲನ್ನು ಕಟ್ಟಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಅದಕ್ಕಿಂತ ಒಳ್ಳೆಯ ಕಾರ್ಯಕ್ರಮ ಬೇರೊಂದಿಲ್ಲ. ಬೇರೆಲ್ಲಾ populist programmes ಅನ್ನು ನಿಲ್ಲಿಸಿ, ಜನತೆಗೆ assets create ಮಾಡಿ. ಮನೆ ಕಟ್ಟುವುದು, ನೀರಿನ ವ್ಯವಸ್ಥೆ ಮಾಡುವುದು, ಡ್ಯಾಮ್ಸ್ ಕಟ್ಟುವುದು ಮುಂತಾದವುಗಳನ್ನು ಮಾತ್ರ ಮಾಡಬೇಕೇ ವಿನ:

ಮುಂದಿನ ಚುನಾವಣೆಯ ಆಲೋಚನೆಯನ್ನು ಇಟ್ಟುಕೊಂಡು, ಏನು ಹೊಸ ಹೊಸ ಕಾರ್ಯಕ್ರಮಗಳನ್ನು ಸರ್ಕಾರ announce ಮಾಡುತ್ತದೋ, ಅದನ್ನು ಖಂಡಿತ ನಿಲ್ಲಿಸಬೇಕಾಗುತ್ತದೆ. ಮಾನ್ಯ ಪ್ರಕಾಶ್‌ರವರೇ, ಇದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ನೀವು Statesman ಆಗಿ ಆಲೋಚನೆ ಮಾಡಬೇಕೇ ಹೊರತು ಕೇವಲ Politician ಆಗಿಯೇ ಉಳಿಯಬಾರದು ಎಂಬುದು ನನ್ನ ಭಾವನೆಯಾಗಿದೆ. ಏಕೆಂದರೆ, It is only a Politician who thinks of the next election, whereas a Statesman thinks of the next generation ಎಂಬುದು ತಮಗೆ ಗೊತ್ತಿದೆಯಲ್ಲವೇ? ಅದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಿ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಎಸ್.ಎಸ್.ಪಾಟೀಲರು ಈಗ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುತ್ತೇನೆ. ಏಕೆಂದರೆ, ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಯುತ್ತದೆಯಲ್ಲವೇ? ಆ ವೇಳೆಯಲ್ಲಿ ನಾನು ಅದರ ಮೇಲೆ ಮಾತನಾಡುತ್ತೇನೆ. ಈಗ ಎಲ್ಲಾ ಚರ್ಚೆ ಮುಗಿದಿದೆ, ತಾವು ದಯವಿಟ್ಟು ಉತ್ತರ ಕೊಡಿಸಿಬಿಡಿ ಅಥವಾ ಮತ್ತೆ ಯಾರಾದರೂ ಮಾತನಾಡುವುದಿದ್ದರೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಮತ್ತೆ ಯಾರಾದರೂ ಮಾತನಾಡುತ್ತೀರಾ?

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಅಯಿತು, ಮಾನ್ಯ ಪಾಟೀಲ್‌ರೇ, ತಾವೇ ಮಾತನಾಡಿ.

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ [ಸೇಡಂ] : ಮಾನ್ಯ ಅಧ್ಯಕ್ಷರೆ, ಇವತ್ತು ಈಗಾಗಲೇ ಈ ಸದನದಲ್ಲಿ ಇರತಕ್ಕ ಎಲ್ಲಾ ಹಿರಿಯ ಸದಸ್ಯರು ನಮ್ಮ ರಾಜ್ಯದಲ್ಲಿ ಇರತಕ್ಕಂಥ ಬರ ಪರಿಸ್ಥಿತಿಯ ಬಗ್ಗೆ ಬಹಳ ವಿಸ್ತಾರವಾಗಿ ಮಾತನಾಡಿದ್ದಾರೆ. ಇವತ್ತು ಸರ್ಕಾರ ಕೈಗೊಂಡಿರತಕ್ಕಂಥ ಕ್ರಮಗಳು, ಜನರಿಗೆ ಆದಂತಹ ಅನ್ಯಾಯ, ಜನರು ಎಷ್ಟು ಕಷ್ಟದಲ್ಲಿದ್ದಾರೆ ಎಂಬುದನ್ನೂ ಕೂಡ ಈಗಾಗಲೇ ಬಹಳಷ್ಟು ಹಿರಿಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ.

ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ರೈತರು ಮತ್ತು ಸಾಮಾನ್ಯ ಜನರು ಎದುರಿಸತಕ್ಕಂಥ ಸಮಸ್ಯೆಗಳ ಬಗ್ಗೆ ನಾನು ಇಲ್ಲಿ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ಸರ್ಕಾರ ಬರ ಪೀಡಿತ ಪ್ರದೇಶಗಳಲ್ಲಿ ಏನು ರೈತರ ಸಹಾಯಕ್ಕೆ ಬರಬೇಕಾಗಿತ್ತೋ ಅದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಏಕೆಂದರೆ ಇವತ್ತು ವಿದ್ಯುತ್ ಕೊಡುವುದು ಎಷ್ಟಿದೆ ಎಂದರೆ ಸರ್ಕಾರ ಈಗಾಗಲೇ ಒಂದು power schedule announce ಮಾಡಿದ್ದಾರೆ. ಏಕೆಂದರೆ, ಇವತ್ತು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬರದ ಪರಿಸ್ಥಿತಿ ಇದೆ. ಆದರೆ, ದಿಢೀರನೆ ಒಂದು ತಿಂಗಳಿನಿಂದ ಅನ್-ಶೆಡ್ಯೂಲ್ ಪವರ್ ಕಟ್ ಮಾಡುತ್ತಿದ್ದಾರೆ. ಇವತ್ತು ಸರ್ಕಾರ ಕೇವಲ 9 ಗಂಟೆ 3 ಫೆಸ್ ಕರೆಂಟ್ ಅನ್ನು ಕೊಡುತ್ತಿದ್ದಾರೆ. ಮಳೆ ಬಂದಿಲ್ಲ. ಜೂನ್ ತಿಂಗಳಿನಲ್ಲಿ ಮಳೆ ಸಂಪೂರ್ಣವಾಗಿ ವಿಫಲವಾದ್ದರಿಂದ, ಇವತ್ತು ಉದ್ದು ಮತ್ತು ಹೆಸರು ಬೆಳೆ ಗುಲ್ಬರ್ಗಾ ಜಿಲ್ಲೆಯಲ್ಲಿ ಸಂಪೂರ್ಣವಾಗಿ 100% ಲಾಸ್ ಆಗಿದೆ. ಬೆಳೆ ವಿಮೆ ಬಗ್ಗೆ ಆಗ ಸರ್ಕಾರ, ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡಿತ್ತು. ಆದರೆ ಇದುವರೆವಿಗೂ ಕೂಡ ಸರ್ಕಾರ ರೈತರಿಗೆ ಯಾವುದೇ ಪರಿಹಾರವನ್ನು ಕೊಟ್ಟಿಲ್ಲ. ನಾವು ಸೀಡ್ಸ್‌ಗೆ 75% ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಳಿದರು. ಆದರೂ ಕೂಡ ಸಮಯಕ್ಕೆ ಸರಿಯಾಗಿ ರೈತರಿಗೆ ಬೀಜ ಸಿಗಲಿಲ್ಲ. ಇವತ್ತು ಗುಲ್ಬರ್ಗಾ ಜಿಲ್ಲೆಯ 10 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆಯಾಗಿದೆ. ತೊಗರಿ ಬೆಳೆಯತಕ್ಕಂತಹ ಗುಲ್ಬರ್ಗಾ ಜಿಲ್ಲೆಯಲ್ಲಿ, 50–60% ಇಳುವರಿ ಕಡಿಮೆಯಾಗಿದೆ, ರೈತ ಬಹಳ ಸಂಕಷ್ಟದಲ್ಲಿದ್ದಾನೆ. ಸರ್ಕಾರ ಯಾವುದೇ ರೀತಿಯಲ್ಲಿ ರೈತನ ಸಹಾಯಕ್ಕೆ ಬರಲಿಲ್ಲ. ಅದರಲ್ಲೂ ಕೆಲವು ಪ್ರದೇಶಗಳಲ್ಲಿ ಎಲ್ಲಿ ಸಣ್ಣ ಸಣ್ಣ ಟ್ಯಾಂಕ್‌ಗಳಿವೆ, ನೀರಾವರಿ ಇದೆ, ಬೋರ್‌ವೆಲ್‌ಗಳಲ್ಲಿ ಯಾರು ರೈತರು ನೀರಾವರಿ ಮಾಡಿಕೊಂಡಿದ್ದಾರೆ, ಅವರು ಕೂಡ ಇವತ್ತು ಕಷ್ಟದಲ್ಲಿದ್ದಾರೆ. ಏಕೆಂದರೆ, 9 ಗಂಟೆ 3 ಫೆಸ್ ಕರೆಂಟ್ ಕೊಡುತ್ತೇವೆಂದು ಸರ್ಕಾರದ ಬದ್ಧತೆ ಏನಿತ್ತು, ಅದು ವಿಫಲವಾಗಿದೆ. ಇವತ್ತು ಅನ್-ಶೆಡ್ಯೂಲ್ ಆಗಿ 3 ಗಂಟೆ ವಿದ್ಯುತ್ ಕಡಿತ ಮಾಡುತ್ತಿದ್ದಾರೆ. ಇವತ್ತು ಸರ್ಕಾರ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಹಾಗಾದರೆ ಸರ್ಕಾರದ ಅನುಮತಿ ಇಲ್ಲದೆಯೇ ಇಲಾಖೆ ತಾನಾಗಿಯೇ ವಿದ್ಯುತ್ ಕಡಿತ ಮಾಡುತ್ತಿದೆ. ಇಂಧನ ಸಚಿವರಾದ ಮಾನ್ಯ ರೇವಣ್ಣನವರು ಇಲ್ಲಿ ಬಂದಿಲ್ಲ, ಸರ್ಕಾರ ಈ ಬಗ್ಗೆ ಉತ್ತರವನ್ನು ಕೊಡಬೇಕು. ಇವತ್ತು ವಿದ್ಯುತ್

ಇಲಾಖೆಯ ಜೆಸ್ಕಾಂಗಳು, ಎಸ್ಕಾಂಗಳು ಸರ್ಕಾರದ ಅದೇಶವಿಲ್ಲದ ಅನ್-ಶೆಡ್ಯೂಲ್ ಪವರ್ ಕಟ್ ಮಾಡಿರುವುದಕ್ಕೆ ಯಾರು ಹೊಣೆಗಾರರು? ಇದರಿಂದ ರೈತರಿಗೆಷ್ಟು ಮಾರಕವಾಗುತ್ತಿದೆ? ಇವತ್ತು ಮಳೆ ಬಂದಿಲ್ಲವೆಂದು ರೈತನಿಗೆ 50% ಇಳುವರಿ ಕಡಿಮೆಯಾಗಿದೆ. ಸಣ್ಣಪುಟ್ಟ ರೈತರು ಬೋರ್ ವೆಲ್‌ಗಳನ್ನು ಹಾಕಿಕೊಂಡು ಯಾರು ವ್ಯವಸಾಯ ಮಾಡುವುದಕ್ಕೆ ಹೊರಟಿದ್ದಾರೆ ಅವರ ಬೆಳೆ ಕೂಡ ಸಂಪೂರ್ಣವಾಗಿ ನಾಶವಾಗಿದೆ, ಇದಕ್ಕೆ ಯಾರು ಹೊಣೆಗಾರರು? ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ. 9 ಗಂಟೆ 3 ಫೇಸ್ ಕರೆಂಟ್ ಕೊಡುತ್ತೇವೆಂದು ರೈತರಿಗೆ ಭರವಸೆಯನ್ನು ನೀಡಿರುವ ಸರ್ಕಾರ, ಇವತ್ತು ಸಂಪೂರ್ಣವಾಗಿ ವಿಫಲವಾಗಿದೆ. ಕ್ಯಾಬಿನೆಟ್ ಸಬ್ ಕಮಿಟಿಯಾಯಿತು. ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದರೆ, ಅವರು ಅದನ್ನು ನಿರಾಕರಿಸಿದರು. ಕ್ಯಾಬಿನೆಟ್ ಎಂದರೆ ಸಂಪೂರ್ಣ ಕಲೆಕ್ಟಿವ್ ರೆಸ್ಪಾನ್ಸಿಬಿಲಿಟಿ ಇರುತ್ತದೆ. ಇವತ್ತು ಈ ರಾಜ್ಯದ ಒಬ್ಬ ಉಪ ಮುಖ್ಯಮಂತ್ರಿ ಆ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಹಿಂದೆ ಸರಿದರೆ ರಾಜ್ಯದ ಜನತೆ ಈ ಸರ್ಕಾರದ ಬಗ್ಗೆ ಯಾವ ರೀತಿಯ ಧೋರಣೆಯನ್ನು ತಳೆಯುತ್ತಾರೆನ್ನುವುದನ್ನು ಅಧ್ಯಕ್ಷರೇ, ನೀವು ಸರ್ಕಾರದ ಗಮನಕ್ಕೆ ತರಬೇಕು. ಏಕೆ, ಉಪ ಮುಖ್ಯ ಮಂತ್ರಿಗಳು ಆ ಒಂದು ಉಪ-ಸಮಿತಿಯ ಅಧ್ಯಕ್ಷತೆಯನ್ನು ತಿರಸ್ಕರಿಸಿದರು? ಮತ್ತೊಂದು ಕಮಿಟಿಯನ್ನು ಮಾಡಬೇಕಾಯಿತು, ಆ ಸಮಿತಿಯಿಂದಲೂ ಕೂಡ ಇವತ್ತಿನವರೆಗೆ ಯಾವುದೇ ರೀತಿಯ ನಿರ್ದಿಷ್ಟವಾಗಿರುವಂತಹ ಹೇಳಿಕೆ ಬಂದಿಲ್ಲ. ಇವತ್ತು ಸರ್ಕಾರ ಅನ್- ಶೆಡ್ಯೂಲ್ ಪವರ್ ಕಟ್ ಮಾಡಿ ರೈತರನ್ನು ಮತ್ತಷ್ಟು ಸಂಕಷ್ಟದಲ್ಲಿ ಸಿಲುಕಿಸುತ್ತಿದೆ. ಇವತ್ತು ಕುಡಿಯುವ ನೀರಿನ ಪರಿಸ್ಥಿತಿಯಂತೂ ಗಂಭೀರವಾಗಿವೆ, ನಾವು ಹಳ್ಳಿಗಳಿಗೆ ಹೋಗುವಂತೆಯೆ ಇಲ್ಲ. ಹಳ್ಳಿಗಳಿಗೆ ಹೋದರೆ, ಅಲ್ಲಿ ಜಲಮೂಲ ಕೆಳಗೆ ಹೋಗಿದೆ. ಇವತ್ತು ವಿದ್ಯುತ್ ಅಭಾವದಿಂದಾಗಿ ಜನರಿಗೆ ಕುಡಿಯುವ ನೀರನ್ನು ಕೊಡುವುದಕ್ಕಾಗುತ್ತಿಲ್ಲ, ಬಾವಿಗಳೆಲ್ಲಾ ಬತ್ತಿ ಹೋಗಿವೆ. ಸರ್ಕಾರದ ಮುಂದೆ ಏನು ಅಲ್ಟರ್ನೆಟಿವ್ ಇದೆ? ಸರ್ಕಾರ ಇದರ ಬಗ್ಗೆ ವಿಚಾರ ಮಾಡಿದೆಯಾ? ನಾವು ಸಮರ್ಪಕವಾಗಿ 3 ಫೇಸ್ ಕರೆಂಟ್ ಕೊಡುವುದಕ್ಕಾಗದೇ ಇವತ್ತು ಕೇವಲ ರೈತ ಅಷ್ಟೆ ಸಂಕಷ್ಟದಲ್ಲಿಲ್ಲ, ಕುಡಿಯುವ ನೀರಿಗೂ ಕೂಡ ಬಹಳ ಅಭಾವವಾಗಿದೆ. ಇದಕ್ಕೆ ಸರ್ಕಾರ ಏನಾದರೂ ಅಲ್ಟರ್ನೆಟಿವ್ ವಿಚಾರ ಮಾಡಬೇಕು. ಒಂದು ಕುಡಿಯುವ ನೀರನ್ನು

ನಿರ್ವಹಣೆ ಮಾಡುವುದಕ್ಕೆ ಗ್ರಾಮಪಂಚಾಯತ್‌ಗಳಿಗೆ ನೀವು ಜನರೇಟರ್‌ಗಳನ್ನು ಏನಾದರೂ ಕೊಡುತ್ತೀರಾ? ಕುಡಿಯುವ ನೀರನ್ನು ನಿರ್ವಹಣೆ ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತಿದೆಯಾ? ಪ್ರತಿಯೊಂದು ಗ್ರಾಮಪಂಚಾಯತ್‌ಗಳಿಗೆ ನೀವು ಜನರೇಟರ್‌ಗಳನ್ನಾದರು ಕೊಡಬೇಕು. ಏಕೆಂದರೆ ಕುಡಿಯುವ ನೀರಿನ ಸಮಸ್ಯೆಯನ್ನು ಈ ಒಂದು ಬೇಸಿಗೆ ಕಾಲದಲ್ಲಾದರು ನಿಭಾಯಿಸಲು ಸರ್ಕಾರ ಜನರೇಟರ್ ಕೊಡುವುದಕ್ಕೆ ಸಿದ್ಧವಿದೆಯಾ? ಹಿಂದೆ ನಾನು ಜಿಲ್ಲಾ ಪಂಚಾಯಿತಿಯ ಸದಸ್ಯನಾಗಿದ್ದಾಗ ಒಂದು ಯೋಜನೆ ಇತ್ತು. ಯಾವ ಗ್ರಾಮ ಪಂಚಾಯಿತಿ ಕುಡಿಯುವ ನೀರಿಗಾಗಿ ಜನರೇಟರ್ ಅಳವಡಿಸಿಕೊಳ್ಳುವುದಕ್ಕೆ ಮುಂದೆ ಬರುತ್ತದೆ, ಅದಕ್ಕೆ 75% ಹಣವನ್ನು ಸರ್ಕಾರ ಕೊಡುತ್ತದೆ, 25% ಹಣವನ್ನು ಗ್ರಾಮಪಂಚಾಯತ್ ಕೊಡಬೇಕಾಗಿತ್ತು. ಇವತ್ತು ಅದನ್ನಾದರು ಕೂಡ ಸರ್ಕಾರ ಮಾಡಬೇಕು. ಇಲ್ಲವೆಂದರೆ ಮೇ, ಏಪ್ರಿಲ್ ತಿಂಗಳಿನಲ್ಲಿ ಯಾವುದೇ ಜನಪ್ರತಿನಿಧಿಗಳು ಇವತ್ತು ಹಳ್ಳಿಗಳಿಗೆ ಹೋಗುವಂತಹ ಪರಿಸ್ಥಿತಿ ಇರುವುದಿಲ್ಲ.

ಇನ್ನು ಕಾಮಗಾರಿಗಳ ಬಗ್ಗೆ ಹೇಳುವುದಾದರೆ, ಇವತ್ತು ಸರ್ಕಾರ ಜನಪರವಾಗಿ ಕೆಲಸ ಮಾಡುತ್ತಿದ್ದೇವೆಂದು ಕೇವಲ ಪ್ರಚಾರ ಪಡೆಯುತ್ತಿದೆ. ಆದರೆ ನೀವು ಜನಪರವಾದ ಕೆಲಸವನ್ನು ಯಾವುದನ್ನು ಮಾಡಿದ್ದೀರಿ? ಜನ ಸಂಕಷ್ಟದಲ್ಲಿದ್ದಾಗ ನೀವು ರಾಜ್ಯದ ಬೊಕ್ಕಸದಿಂದ ಏನಾದರೂ ಹಣವನ್ನು ಕೊಟ್ಟಿದ್ದೀರಾ? ಬರ ನಿರ್ವಹಣೆಗೆ ರಾಜ್ಯ ಸರ್ಕಾರದ ಪಾಲು ಏನಿದೆ? ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನೇ ಬಿಡುಗಡೆ ಮಾಡುವುದಕ್ಕಾಗುತ್ತಿಲ್ಲ., ರಾಜ್ಯ ಸರ್ಕಾರದ ಪಾಲೇನಿದೆ? ಇವತ್ತು ನಮ್ಮ ರಾಜ್ಯ ಸರ್ಕಾರದ ಬೊಕ್ಕಸ ತುಂಬಿ ತುಳುಕುತ್ತಿದೆ ಎಂದು ಹೇಳುತ್ತಿದ್ದೀರಿ, ಆದರೆ ಎಲ್ಲಿ ಉಪಯೋಗ ಮಾಡುತ್ತಿದ್ದೀರಿ? ಬರಪೀಡಿತ ಪ್ರದೇಶಗಳಿಗೆ ಪರಿಹಾರ ಕೊಡುವುದಕ್ಕೆ ನೀವು ಹಣವನ್ನು ಉಪಯೋಗ ಮಾಡುತ್ತಿಲ್ಲ. ಇವತ್ತು ಯಾರು ಪ್ರಭಾವಿ ಮಂತ್ರಿಗಳಾಗಿರುತ್ತಾರೆ, ಯಾರು ಪ್ರಭಾವಿ ಶಾಸಕರಾಗಿರುತ್ತಾರೆ ಅಂತಹವರ ಮತಕ್ಷೇತ್ರದಲ್ಲಿ ಉಪಯೋಗ ಮಾಡುತ್ತಿದ್ದೀರೇ ವಿನಹ, ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಗೆ, ಬರ ನಿರ್ವಹಣೆಗೆ ರಾಜ್ಯ ಬೊಕ್ಕಸದ ಹಣ ನೆರವಿಗೆ ಬರುತ್ತಿಲ್ಲ. ಇವತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಕಂದಾಯ ಮಂತ್ರಿಗಳಾಗಿದ್ದಾರೆ, ಅವರು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದರು. ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಸುಮಾರು 4 ವರ್ಷಗಳ ಕಾಲ ರಾಜ್ಯ

ಬರಗಾಲವನ್ನು ಅನುಭವಿಸಿತು. ಆ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರಾಗಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳಷ್ಟು ಸವಾಲುಗಳನ್ನು ಎತ್ತಿದರು. ಆದರೆ ಇಂದು ಕಂದಾಯ ಸಚಿವರಾಗಿರುವ ಜಗದೀಶ್ ಶೆಟ್ಟರ್‌ರವರು ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿಸುತ್ತಿದ್ದೀರೆಂಬುದನ್ನು ಹೇಳಬೇಕು. ಆಗ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿತ್ತು. ಆಗಲೂ ಕೂಡ ಸಾಕಷ್ಟು ಹಣ ಬಂದಿಲ್ಲವೆಂದು ರಾಜ್ಯ ಸರ್ಕಾರ ಹೇಳಿತು. ಆದರೂ ಕೂಡ ಹಿಂದಿನ ಬರಪರಿಸ್ಥಿತಿಯಲ್ಲಿ ಎಷ್ಟು ನಿರ್ವಹಣೆಯಾಯಿತು, ಆ ಪ್ರದೇಶಗಳಿಗೆ ಸರ್ಕಾರ ಎಷ್ಟು ಫುಡ್ ಗ್ರೇನ್ಸ್ ಬಿಡುಗಡೆ ಮಾಡಿತು ಎಂಬುದನ್ನು ನೀವು ಲೆಕ್ಕ ಹಾಕಿ ನೋಡಿ, ಅಂದಿಗೂ ಇದಿಗೂ ಬಹಳ ವ್ಯತ್ಯಾಸವಿದೆ. ರಾಜ್ಯ ಸರ್ಕಾರದಿಂದಲೂ ಕೂಡ ಸಾಕಷ್ಟು ಹಣವನ್ನು ಕುಡಿಯುವ ನೀರಿಗೆ ಮತ್ತು ಬರ ನಿರ್ವಹಣೆಗೆ ಕೊಡಬೇಕು. ನಾನು ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಇವತ್ತು ನಗರಪ್ರದೇಶಗಳಲ್ಲೂ ಕೂಡ ಬರ ಪರಿಸ್ಥಿತಿ ಇದೆ. ನಗರಪ್ರದೇಶಗಳಲ್ಲಿ ವಾಸ ಮಾಡುವವರೆಲ್ಲ ಶ್ರೀಮಂತರೇನು ಅಲ್ಲ, ಅವರು ಕೂಡ ರೈತರೇ, ಅವರು ಕೂಡ ಇವತ್ತು ಸಂಕಷ್ಟದಲ್ಲಿದ್ದಾರೆ. ಆದರೆ ನಗರ ಪ್ರದೇಶದಲ್ಲಿರುವವರಿಗೆ ಬರ ನಿರ್ವಹಣೆಯಲ್ಲಿ ಕಾಮಗಾರಿ ಕೊಡುವುದಕ್ಕೆ ಅವಕಾಶವಿಲ್ಲ. ಒಂದು ವೇಳೆ CRF ಎಂದು ನೀವು ಅದನ್ನು ಕ್ಯಾಟಗರೈಸ್ ಮಾಡಿದ ಮೇಲೆ, ನಗರ ಪ್ರದೇಶಗಳಲ್ಲಿ ಕಾಮಗಾರಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆನ್ನುವುದಾದರೆ ಇವತ್ತು ನೇರವಾಗಿ ರಾಜ್ಯ ಸರ್ಕಾರದಿಂದ ಮುನ್ಸಿಪಾಲಿಟಿಗಳಿಗೆ ಹಣವನ್ನು ಬಿಡುಗಡೆ ಮಾಡಿ. ಬರ ನಿರ್ವಹಣೆಗೆ ರಾಜ್ಯ ಸರ್ಕಾರ ನೇರವಾಗಿ ಮುನಿಸಿಪಾಲಿಟಿಗಳಿಗೆ ಹಣವನ್ನು ಬಿಡುಗಡೆ ಮಾಡಲಿ. ಇವತ್ತು ಅಲ್ಲಿ ಕುಡಿಯುವ ನೀರಿಗೆ ಹಣವಿಲ್ಲ. ನೇರವಾಗಿ ಮುನ್ಸಿಪಾಲಿಟಿಗಳಿಗೆ ಸರ್ಕಾರದಿಂದ ಹಣ ಬಿಡುಗಡೆ ಮಾಡಬೇಕು ಹಾಗೆ ಗ್ರಾಮೀಣ ಪ್ರದೇಶಗಳಿಗೂ ಕೂಡ ಇನ್ನು ಸಾಕಷ್ಟು ಹೆಚ್ಚು ಹಣವನ್ನು ಸರ್ಕಾರ ಕುಡಿಯುವ ನೀರಿಗೆ ಬಿಡುಗಡೆ ಮಾಡಬೇಕು. ಅದರಲ್ಲೂ ಇವತ್ತು ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಇಲ್ಲ. ನಾವು ಬೀಜವನ್ನು ಕೊಡುತ್ತಿದ್ದೇವೆಂದು ಇವತ್ತು ಹೇಳುತ್ತಿದ್ದಾರೆ. ಯಾರೂ ಕೂಡ ರೈತರಿಗೆ ಬೀಜವನ್ನು ಕೊಡುತ್ತಿಲ್ಲ, ಯಾವ ರೈತರೂ ಕೂಡ ಮೇವು ಬೆಳೆದು ಕೊಡುವುದಕ್ಕೆ ಮುಂದೆ ಬಂದಿಲ್ಲ. ಏಕೆಂದರೆ, ಸರ್ಕಾರ ಆ ಜವಾಬ್ದಾರಿಯನ್ನು ವಹಿಸಿಕೊಂಡಿಲ್ಲ, ಸರ್ಕಾರ ನಿರ್ದಿಷ್ಟವಾಗಿ ಹೇಳಿಲ್ಲ. ನೀವು ಮೇವು ಬೆಳೆದು

ಕೊಡಿ ಖರೀದಿ ಮಾಡುತ್ತೇವೆಂದು ಯಾರು ಹೇಳಿದ್ದಾರೆ? ಯಾವುದೇ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳಲ್ಲಿ ಈ ಸಮಸ್ಯೆಗಳಿವೆ ಎಂದು ಯಾವುದಾದರು ಸಭೆಗಳನ್ನು ಮಾಡಿದ್ದೀರಾ ಹೇಳಿ, ಇವತ್ತು, ಸರ್ಕಾರ ಉತ್ತರ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಇದುವರೆವಿಗೂ ಬರನಿರ್ವಹಣೆ ಬಗ್ಗೆ ಸಭೆಯಾಗಿಲ್ಲ, ಯಾವ ಜಿಲ್ಲೆಯಲ್ಲೂ ಆಗಿಲ್ಲ. ಇವತ್ತು ಶಾಸಕರು ಗ್ರಾಮೀಣ ಪ್ರದೇಶಗಳಲ್ಲಿ ಓಡಾಡುವುದು ಬಹಳ ಕಷ್ಟವಾಗಿದೆ. ಅದಕ್ಕೆ ಇವತ್ತು ಸಮಗ್ರವಾಗಿ 3 ತಿಂಗಳವರೆಗೆ, 4 ತಿಂಗಳವರೆಗೆ ನಾವೊಂದು ರಾಜ್ಯ ಸರ್ಕಾರದಿಂದ ಕಾರ್ಯಕ್ರಮವನ್ನು ಹಾಕಿಕೊಂಡು ನಾವು ಕೇವಲ ಕೇಂದ್ರ ಸರ್ಕಾರದ ಹಣವನ್ನು ನಿರೀಕ್ಷೆ ಮಾಡಬಾರದು. ರಾಜ್ಯ ಬೊಕ್ಕಸದಿಂದ ಹಣವನ್ನು ಕೊಟ್ಟು ರೈತರ ಸಂಕಷ್ಟಕ್ಕೆ ನಾವು ಪರಿಹಾರವನ್ನು ಹುಡುಕುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯಾದ್ಯಂತ ಬರದ ಒಂದು ತಾಪ ಕೇವಲ ರೈತರಿಗೆ ಮಾತ್ರವಲ್ಲ ಇಡೀ ರಾಜ್ಯದ ಎಲ್ಲ ಕಡೆ ಎಲ್ಲ ಕ್ಷೇತ್ರಗಳಲ್ಲಿ ಪ್ರಭಾವ ಬೀರಿ, ಬಹುಶ: ಸಂಪೂರ್ಣ ಆರ್ಥಿಕ ಸ್ಥಿತಿಗತಿ ಮೇಲೆ ಮತ್ತು ಬದುಕಿನ ಮೇಲೆ ಬಹಳ ಕೆಟ್ಟ ಪ್ರಭಾವ ಆಗುತ್ತಿರತಕ್ಕಂಥದ್ದು, ಪರಿಣಾಮ ಬೀರುತ್ತಿರತಕ್ಕಂಥದ್ದು ನಾವು ನೋಡುತ್ತಿದ್ದೇವೆ. ಇವತ್ತು ಏನು ರಾಜ್ಯದ 125 ತಾಲ್ಲೂಕುಗಳಲ್ಲಿ ಬರದ ಕಾರ್ಮೋಡ ಆವರಿಸಿಕೊಂಡಿದೆ. ಇದು ಕೇವಲ ನಿಸರ್ಗದ ಮೇಲೆ ದೂರು ಮಾಡುತ್ತಾ ನಿಂತರೆ ಸಾಲದು. ಬಹಳಷ್ಟು ಜನ ಹಿರಿಯರು ಮತ್ತು ಬೇರೆ ಸದಸ್ಯರು ಬರ ಪರಿಹಾರದ ಬಗ್ಗೆ ಮಾತನಾಡಿದ್ದಾರೆ. ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈ ದೇಶ ಕೃಷಿ ಪ್ರಧಾನವಾಗಿದ್ದು ಶೇಕಡ 78 ರಿಂದ 80ರಷ್ಟು ಮಾನವ ಸಂಪನ್ಮೂಲ ಕೃಷಿ ಅವಲಂಬಿತವಾಗಿ ಕಾರ್ಮಿಕರಾಗಿ ಕೆಲಸ ಮಾಡತಕ್ಕಂತಹ ಸಮಾಜದಲ್ಲಿ ಶಾಶ್ವತವಾದ ನೆಲೆಗಟ್ಟನ್ನು ನಾವು ಚಿಂತನೆ ಮಾಡುವ ದಿಕ್ಕಿನಲ್ಲಿ ಎಲ್ಲೋ ಒಂದು ಕಡೆ ವಿಫಲರಾಗಿದ್ದೇವೆಂದು ನನಗೆ ಆತಂಕವಾಗುತ್ತದೆ. ಇವತ್ತು ಪ್ರತಿ ವರ್ಷ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಸರ್ಕಾರಗಳು ಬಂದಾಗ ಬರದ ಬಗ್ಗೆ ಚಿಂತನೆ ಮಾಡುವುದು ಸಾವಿರಾರು ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ತರತಕ್ಕಂಥದ್ದು ರಾಜ್ಯ ಸರ್ಕಾರದಿಂದ ಕ್ರೋಢೀಕರಣ ಮಾಡುವುದನ್ನು ಕಾಣುತ್ತೇವೆ. ಮೂಲಭೂತವಾಗಿ

ಈ ಬರಕ್ಕೆ ತುರ್ತು ವ್ಯವಸ್ಥೆ ಮಾಡುವುದರ ಜೊತೆಗೆ ಶಾಶ್ವತವಾದ ನೆಲೆಗಟ್ಟನ್ನು ಮತ್ತು ರೂಪುರೇಶೆಗಳನ್ನು ಮಾಡತಕ್ಕಂತಹ ಚಿಂತನೆ ಸರ್ಕಾರಕ್ಕೆ, ರಾಜ್ಯಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಇದೆಯಾ ಎನ್ನತಕ್ಕಂಥದ್ದು ಮೂಲಭೂತವಾದ ಪ್ರಶ್ನೆ. ಬಹುಶ: ತಮಗೆ ಗೊತ್ತಿರುವ ಹಾಗೆ ಬಿಜಾಪುರದಲ್ಲಿ ಬ್ರಿಟಿಷರ ಕಾಲದಲ್ಲಿ Ante Famine institute ಎನ್ನತಕ್ಕಂತಹ ಒಂದು ಸಂಸ್ಥೆ ಪ್ರಾರಂಭವಾಯಿತು. ಇವತ್ತು ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಈ ಒಂದು ಸಂಸ್ಥೆ ಮುಖೇನ ರಾಜ್ಯಕ್ಕೆ ಅಥವಾ ಪರಿಸರದ ಮೇಲೆ ಆಗುತ್ತಿರುವಂತಹ ವಿಕೋಪಗಳಿಗೆ ಕಾರಣವೇನು? ಇದಕ್ಕೆ ಶಾಶ್ವತವಾದ ನೆಲೆಗಟ್ಟನ್ನು ನಾವು ಹೇಗೆ ಕಂಡುಕೊಳ್ಳಬೇಕು, ಎನ್ನುವುದರ ಬಗ್ಗೆ ಇದುವರೆಗೆ ಸಮಗ್ರವಾಗಿ ಚಿಂತನೆಯಾಗಲಿ, action programme ಆಗಲಿ, vision ಆಗಲಿ, mission ಆಗಲಿ ನಾವು ಕಾಣುವುದಿಲ್ಲ. ಇವತ್ತು ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಕೆಲವು ಸಾರಿ ನಿಮಗೆ ಗೊತ್ತಿರುವ ಹಾಗೆ ಒಂದು ಕಡೆ ಅತಿವೃಷ್ಟಿ ಮತ್ತೊಂದು ಕಡೆ ಅನಾವೃಷ್ಟಿ. ಅತಿವೃಷ್ಟಿಯಿಂದ ಅನಾವೃಷ್ಟಿಯ ಜಾಗಕ್ಕೆ ಬೇಕಾಗಿರತಕ್ಕಂತಹ ನದಿಯ ಜೋಡಣೆಯ ಕೆಲಸ ಏನಾಗಿದೆ, ಆ ಸಮಗ್ರ ಯೋಜನೆ ಏಕೆ ನೆನ್ನೆ ಗುದಿಗೆ ಬಿದ್ದಿದೆ ಎನ್ನತಕ್ಕಂತಹ ಪ್ರಶ್ನೆಯನ್ನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟಂಥ ಕೇಂದ್ರ ಸರ್ಕಾರಕ್ಕೆ ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಶಾಶ್ವತವಾದ ಒಂದು ನೆಲೆಗಟ್ಟನ್ನು ನಾವು ಏಕೆ ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದೇ ದೇಶದಲ್ಲಿ ಒಂದು ಕಡೆ ಅತಿವೃಷ್ಟಿ ಮತ್ತೊಂದು ಕಡೆ ಅನಾವೃಷ್ಟಿ ಆಗುವುದಾದರೆ, ನಾವು ಎಲ್ಲೋ ಒಂದು ಕಡೆ ತಂತ್ರಜ್ಞಾನವನ್ನು ಬಳಸುವುದರಲ್ಲಿ ವಿಫಲರಾಗಿದ್ದೇವೆ. Political will ಇಲ್ಲ, bureaucratic skill ಇಲ್ಲ, ದೂರದೃಷ್ಟಿಯ ಕೊರತೆ ಇದೆ ಎನ್ನುವುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಇವತ್ತು ಪ್ರತಿವರ್ಷ ವಿಶೇಷವಾಗಿ ನಗರದ ರೈತಾಪಿ ಜನ ಏನಿದ್ದಾರೆ ಆ ಮೂಲ ಕುಟುಂಬ ನಗರ ಪ್ರದೇಶಗಳಿಗೆ ಗುಳೆ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಒಂದು ಕಡೆ ಬೆಳೆ ನಾಶ, ಇನ್ನೊಂದು ಕಡೆ ಜಾನುವಾರುಗಳನ್ನು ಸಾಕುವುದಕ್ಕೆ ಮತ್ತು ಬದುಕಿಸುವುದಕ್ಕೆ ಬೇಕಾಗಿರತಕ್ಕಂತಹ ಮೂಲ ವ್ಯವಸ್ಥೆಯನ್ನು ಮಾಡುತ್ತಿಲ್ಲ. ಇದರ ಬಗ್ಗೆ ರೈತಾಪಿ ಜನ ಕಂಗೆಟ್ಟು ಸಮಸ್ಯೆಗಳು ದುಗುಡವಾಗಿ ಸರಪಳಿಯಲ್ಲಿ ರೈತ ನೇಣು ಹಾಕಿಕೊಳ್ಳುವುದನ್ನು ನಾವು ಕಾಣುತ್ತಿದ್ದೇವೆ. ಒಂದು ಕಡೆ ಬೋರ್‌ವೆಲ್‌ಗಳನ್ನು ತೋಡುತ್ತಾ

ಬಂದಿದ್ದೇವೆ, ಬಾವಿಗಳನ್ನು ತೋಡುತ್ತಾ ಬಂದಿದ್ದೇವೆ, ಅಂತರ್ಜಲ ಕೆಳಗಡೆ ಹೋಗುತ್ತಿದೆ. ನಾವು ಹೀಗೇ ಮಾಡುತ್ತಿದ್ದರೆ ಬಹುಶ: ಇವತ್ತು ಏನು ಕೋಲಾರ ಜಿಲ್ಲೆಯಲ್ಲಿ ನೀರನ್ನು ತೆಗೆಯುತ್ತಿದ್ದೇವೆ, 2000 ವರ್ಷಗಳ ಹಿಂದೆ ಶೇಖರಣೆಯಾದ ಅಂತರ್ಜಲವನ್ನು ನಾವು exploit, ಮಾಡಿ explore ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಬಹುಶ: ನಾವು ಯಾವ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎನ್ನುವುದನ್ನು ನಾವು ಸಮಗ್ರವಾಗಿ ಚಿಂತನೆ ಮಾಡ ಬೇಕಾಗಿದೆ. ನಮ್ಮ ಡಾಕ್ಟರ್‌ರವರು ಹೇಳಿದ ಹಾಗೆ ಬರ ಕೇವಲ ರೈತಾಪಿ ಜನರಿಗೆ ಅಲ್ಲ, ನಗರ ಪ್ರದೇಶಗಳಲ್ಲಿಯೂ ವ್ಯಾಪಿಸಿರುವುದು ನಾವು ಕಾಣುತ್ತಿದ್ದೇವೆ. ಬಹುಶ: ಹಳ್ಳಿಗಳ ಕಡೆ ಒಂದು ಕೆರೆ ಆದರೂ ಕಾಣುವುದಕ್ಕೆ ಸಿಗುತ್ತದೆ. ನಗರ ಪ್ರದೇಶಗಳಲ್ಲಿ ಜೀವಂತ ಕೆರೆಗಳು ಎನ್ನುವುದು ಇಲ್ಲ. ಇರತಕ್ಕಂತಹ ಕೆರೆಗಳು ಸಂಪೂರ್ಣವಾಗಿ ನಾಶವಾಗಿರುವುದು ನಾವು ಕಾಣುತ್ತೇವೆ. ಬೆಂಗಳೂರು ನಗರದ ಬಗ್ಗೆ ಹೇಳುವುದಾದರೆ 270 ಜೀವಂತ ಕೆರೆಗಳಲ್ಲಿ ಇವತ್ತು ಕೇವಲ ಬೆರಳೆಣಿಕೆಯಷ್ಟು 7–8 ಕೆರೆಗಳಿವೆ ಅಷ್ಟೆ. ಉಳಿದಿರತಕ್ಕಂತಹ ಕೆರೆಗಳು ಕೂಡ ಸಂಪೂರ್ಣವಾಗಿ ಕಲುಷಿತವಾಗಿ, ನೀರನ್ನು ಕುಡಿಯಲಿಕ್ಕೆ ಆಗಲಿ, ಬಳಸುವುದಕ್ಕಾಗಲಿ ಆಗದೆ ಇರತಕ್ಕಂತಹ ಸ್ಥಿತಿ ಇದೆ. ಬೆಂಗಳೂರು ನಗರದಲ್ಲಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಅಂತರ್ಜಲ ಬಹಳಷ್ಟು ಕೆಳಗೆ ಹೋಗಿದೆ. ನಾನು ತಮ್ಮ ಮುಖೇನ ಕೇಳಿಕೊಳ್ಳುವುದು, ಎಲ್ಲೆಲ್ಲಿ ಕೊಳವೆ ಬಾವಿಗಳಲ್ಲಿ ಮತ್ತು ಮಿನಿ ವಾಟರ್ ಸ್ಕೀಮ್‌ಗಳಲ್ಲಿ ಎಲ್ಲೆಲ್ಲಿ additional ಪೈಪ್ ಹಾಕಬೇಕು, ಅದನ್ನು ಹಾಕುವುದರ ಬಗ್ಗೆ ಜಲ ಮಂಡಳಿ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು alternate days ಗಳಲ್ಲಿ ನೀರು supply ಮಾಡುತ್ತಿದ್ದಾರೆ. ಕಾವೇರಿ ಬಗ್ಗೆ ನ್ಯಾಯಾಂಗ ತೀರ್ಪು ಹೊರ ಬಂದ ನಂತರ ಒಂದು ಆತಂಕ ನಮಗೆಲ್ಲಾ ಇದೆ. ಬೆಂಗಳೂರು ನಗರವನ್ನು ಬೃಹತ್ ಬೆಂಗಳೂರು ಮಾಡುವುದಕ್ಕೆ ಸರ್ಕಾರ ಹೊರಟಿರುವಾಗ ಈ ನಗರಕ್ಕೆ ಕುಡಿಯುವ ನೀರು ಎಲ್ಲಿಂದ ತರುತ್ತೀರಿ? ನಗರೀಕರಣ ಮಾಡುತ್ತಿರುವುದರಿಂದ ಇರತಕ್ಕಂತಹ ಕೆರೆಗಳು ನಾಶವಾಗುತ್ತಿವೆ. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುತ್ತಿದ್ದೀರಾ? ಇವತ್ತು ನಾವು ಯಾವ ದಿಕ್ಕಿಗೆ ಹೊರಟಿದ್ದೇವೆ? ಒಂದು ಕಡೆ ನಗರೀಕರಣ Special Economic Zone ಎಂದು ಹೇಳಿ ರೈತರ ಫಲವತ್ತಾದ ಭೂಮಿಯನ್ನು ನಾಶ ಮಾಡುತ್ತಿದ್ದೇವೆ. ರೈತರಿಗೆ ಗುಳೆ ಎಬ್ಬಿಸುವುದರ ಮೂಲಕ ಅವನ ಕುಲ

ಕಸುಬನ್ನು ನಾಶ ಮಾಡುತ್ತಿದ್ದೇವೆ. ಪರ್ಯಾಯ ಕೆಲಸವನ್ನು ಕೊಡುತ್ತೇವೆಂದು ಹೇಳುತ್ತಾರೆ ಯಾವುದೇ ಕೆಲಸವನ್ನು ಕೊಡುವುದಿಲ್ಲ. ಸನ್ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರು ಮೊನ್ನೆ ಹೇಳುತ್ತಿದ್ದರು, ಎಷ್ಟು ಎಕರೆ ಜಮೀನನ್ನು ತೆಗೆದುಕೊಳ್ಳುತ್ತಿದ್ದೇವೆ, ಎಷ್ಟು ಜನ ರೈತರಿಗೆ ಮತ್ತು ಅವರ ಮಕ್ಕಳಿಗೆ ಕೆಲಸವನ್ನು ಕೊಟ್ಟಿದ್ದೇವೆ ಎನ್ನತಕ್ಕಂಥದ್ದರ ಬಗ್ಗೆ ಅವರು ಸ್ಪಷ್ಟವಾದ ಉತ್ತರವನ್ನು ಕೊಡಲಿಲ್ಲ. ನಗರದ ಸುತ್ತಮುತ್ತ ಬರಗಾಲವನ್ನು ನಾವೇ ನಿರ್ಮಾಣ ಮಾಡುತ್ತಿದ್ದೇವೆ. ರೈತರ ಮಕ್ಕಳಿಗಾಗಿ ಒಂದು concrete comprehensive plan ಎನ್ನುವುದು ಇಲ್ಲವೇ ಇಲ್ಲ. ಅವನ ಜಮೀನು ಕೊಂಡುಕೊಳ್ಳುವಾಗ ಆಸಕ್ತಿ ಇರುತ್ತದೆ. ರೈತನ ಜಮೀನನ್ನು ಬಹಳಷ್ಟು ಕಡಿಮೆ ದರದಲ್ಲಿ ನಾವು ತೆಗೆದುಕೊಳ್ಳುತ್ತೇವೆ. ಸರ್ಕಾರದ ಕಾರ್ಖಾನೆ ಮಾಡುವುದಕ್ಕೆ ಸರ್ಕಾರದ ದರವನ್ನು ಕೊಟ್ಟು ಜಮೀನನ್ನು ಖರೀದಿ ಮಾಡಿ ಅವನಿಗೆ ಸ್ವಲ್ಪ ದಿವಸ ಸುಖವಾಗಿಟ್ಟು ಕೊನೆಗೆ ದಿಕ್ಕಾಪಾಲು ಮಾಡತಕ್ಕಂತಹ ಅಥವಾ ದಿವಾಳಿ ಮಾಡತಕ್ಕಂತಹ ದಿಕ್ಕಿನಲ್ಲಿ ನಾವು ಸಾಗುತ್ತಿದ್ದೇವೆ. ನಾನು ಮೊದಲಿನಿಂದಲೂ ಈ ಸದನದಲ್ಲಿ ಕೇಳುತ್ತಿದ್ದೇನೆ, ನಮ್ಮ ಹಳೆಯ ಮೈಸೂರು ವಿಭಾಗ ಏನಿದೆ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಯಚೂರು, ಗುಲ್ಬರ್ಗ, ಬೀದರ್, ಬಿಜಾಪುರ, ಧಾರವಾಡ, ಹಾವೇರಿ, ಚಿತ್ರದುರ್ಗ, ಮತ್ತು ತುಮಕೂರು ಜಿಲ್ಲೆ ಇರಬಹುದು, ನಮಗೆ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಏನಾದರೂ ಸಮಗ್ರ ಚಿಂತನೆ ಮಾಡುತ್ತಿದೆಯಾ? ಪರಮ ಶಿವಯ್ಯನವರ ವರದಿ ಪ್ರಕಾರವಾಗಿ ಪಶ್ಚಿಮಘಟ್ಟದಲ್ಲಿ ನೀರು ಸಮುದ್ರಕ್ಕೆ ಪೋಲಾಗುತ್ತಿರುವುದನ್ನು ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಪಟ್ಟ ಹಾಗೆ ತರತಕ್ಕಂತಹ ಸಮಗ್ರ ಯೋಜನೆಗೆ ಹಣ ಇಡಿ ಎಂದು ಹಲವಾರು ಸಾರಿ ಒತ್ತಾಯ ಮಾಡಿದರೂ ಸಹ ಈ ಭಾಗದ ಬಗ್ಗೆ ಸಮಗ್ರವಾದ ಚಿಂತನೆ ಇಲ್ಲ. Concrete plan ಇಲ್ಲ. ಇವತ್ತು ಪಂಚವಾರ್ಷಿಕ ಯೋಜನೆಗಳನ್ನು ಹಾಕುತ್ತೇವೆ, ಪಂಚವಾರ್ಷಿಕ ಯೋಜನೆಗಳನ್ನು ಹಾಕಿದರೂ ಸಹ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡತಕ್ಕಂಥದ್ದರ ಬಗ್ಗೆ long term programme ಗಳನ್ನು ಹಾಕುವ ಬಗ್ಗೆ ಏಕೆ plan ಮಾಡುತ್ತಿಲ್ಲ ಎಂದು ಈ ಸಂದರ್ಭದಲ್ಲಿ ನಾನು ತಮ್ಮ ಮುಖೇನ ಕೇಳುವುದಕ್ಕೆ ಬಯಸುತ್ತೇನೆ. ಈಗ ಬಂದಿರುವ ಮಾಹಿತಿ ಪ್ರಕಾರ ಸುಮಾರು ಸುಮಾರು 600 mm ಗಳಿಗಿಂತಲೂ ಹೆಚ್ಚು ಮಳೆ ಕಡಿಮೆಯಾಗಿರತಕ್ಕಂತಹ ಈ ಜಿಲ್ಲೆಗಳನ್ನು ನಾನೇನು ಉಲ್ಲೇಖ ಮಾಡಿದೆ ಇದರ

ಬಗ್ಗೆ ನಾವು ಸಮಗ್ರವಾಗಿ ಯೋಚನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು ಏಕೆ ಸದುಪಯೋಗ ಮಾಡುತ್ತಿಲ್ಲ, transparency ಏಕೆ ಇಲ್ಲ? Accountability ಏಕೆ ಇಲ್ಲ? ಇವತ್ತು ನಮ್ಮ ಅಧಿಕಾರಿಗಳಿಗೆ commitment ಏಕೆ ಇಲ್ಲ? ಬದ್ಧತೆ ಏಕೆ ಇಲ್ಲವೆಂದು? ನಾನು ಕೇಳುತ್ತೇನೆ. ಅಧಿಕಾರಿಗಳು ದಯವಿಟ್ಟು ಸದನದ ಸಮಯ ಬಿಟ್ಟು ಬೇರೆ ಸಮಯಗಳನ್ನು ನಿಗದಿಪಡಿಸಿಕೊಂಡು grass root levelಗೆ ಅವರು ಹೋಗಲಿ. ಮಾನ್ಯ ಮುಖ್ಯಮಂತ್ರಿಗಳು ಹೋಗಿ ಅಲ್ಲಿ ಮಲಗುವುದು ಮುಖ್ಯ ಅಲ್ಲ. ಅಧಿಕಾರಿಗಳು ಹಳ್ಳಿಗಳಿಗೆ ಹೋಗಿ ಮಲಗಬೇಕಾಗುತ್ತದೆ. ಅಲ್ಲಿ ಪರಿಸ್ಥಿತಿಯ ಅಧ್ಯಯನ ಮಾಡಬೇಕಾಗುತ್ತದೆ. ಹಿಂದೆ ಬ್ರಿಟೀಷ್ ಅಧಿಕಾರಿಗಳು ಈ ಪ್ರದೇಶಗಳಿಗೆ ಹೋಗಿ ನೋಡುತ್ತಿದ್ದರು. ಈ ನಮ್ಮ ಅಧಿಕಾರಿಗಳಿಗೆ ಏನಾಗಿದೆ? ಈ ಅಧಿಕಾರಿಗಳು Air condition room ಗಳಲ್ಲಿ ಕುಳಿತುಕೊಳ್ಳುವುದು ಬಿಟ್ಟು grass root levelಗೆ ಹೋಗಬೇಕು. ಅಲ್ಲಿ ಇಲ್ಲಿ race course ಗಳಲ್ಲಿ golf club ಗಳಲ್ಲಿ ಕುಳಿತುಕೊಳ್ಳುವುದನ್ನು ನಿಲ್ಲಿಸಬೇಕು. ಇದನ್ನು ನಿಲ್ಲಿಸದೇ, ತಮ್ಮ ಅತ್ಯಮೂಲ್ಯವಾದ ಸಮಯವನ್ನು ಸರ್ಕಾರ ಜನತೆಗೆ ಕೊಟ್ಟಿರತಕ್ಕಂತಹ ಅವಕಾಶವನ್ನು ಉಪಯೋಗಿಸಿಕೊಂಡು ಜನಗಳ ಸಮಸ್ಯೆಗಳ ಬಗ್ಗೆ ಸ್ಪಂದನ ಮಾಡುವುದರ ಬಗ್ಗೆ ಚಿಂತನೆ ಮಾಡಬೇಕು. ಆಗ ಮಾತ್ರ majority revenue amount ನಾವೇನು ಸಂಬಳ ಮತ್ತು pension ಗಳಿಗೆ ಖರ್ಚು ಮಾಡುತ್ತಿದ್ದೇವೆ ಅದು ಸದುಪಯೋಗ ಆದ ಹಾಗಾಗುತ್ತದೆ. ನಾನು ಎಲ್ಲ ಅಧಿಕಾರಿಗಳನ್ನು ಉಲ್ಲೇಖ ಮಾಡುತ್ತಿಲ್ಲ. ಇಷ್ಟೊಂದು ಜನ ಉನ್ನತಾಧಿಕಾರಿಗಳಲ್ಲಿ ಬಹುತೇಕ ಅಧಿಕಾರಿಗಳು ತಮ್ಮ ಬುದ್ಧಿಶಕ್ತಿಯನ್ನು ಚಾಣಾಕ್ಷತೆಯನ್ನು ಏಕೆ ಉಪಯೋಗ ಮಾಡುತ್ತಿಲ್ಲವೆಂದು ನಿಜವಾಗಿ ಶಂಕೆಯಾಗುತ್ತಿದೆ. ಈ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಕುರುಬರಹಳ್ಳಿ ಮತ್ತು ಬೆಂಗಳೂರು ನಗರದ ಸುತ್ತಮುತ್ತ ಬಂದಿರತಕ್ಕಂತಹ ಹಲವಾರು ಉತ್ತರ ಕರ್ನಾಟಕದ ರೈತಾಪಿ ಕುಟುಂಬಗಳಿಗೆ ಬೆಂಗಳೂರಿನಲ್ಲಿ ಆಶ್ರಯ ಸಿಗುವುದಿಲ್ಲ. ಅವರಿಗೆ ಯಾವುದೇ ರೀತಿಯ ಆಶ್ರಯ ಸಿಗುವುದಿಲ್ಲ. ಅಲ್ಲಿಯೇ ಕೃಷಿಯೇತರ ಕೆಲಸಗಳನ್ನು ಕೊಡತಕ್ಕಂಥ ದಿಕ್ಕಿನಲ್ಲಿ ಸಮಗ್ರವಾದ ಯೋಚನೆ ಆಗಬೇಕು. ಕೃಷಿಯ ಮೇಲೆ ಅವಲಂಬಿತರಾದವರು ಬೆಂಗಳೂರಿನಲ್ಲಿ ಬದುಕಬೇಕಾದರೆ ವಿದ್ಯಾಭ್ಯಾಸದ ಕೊರತೆ ಇರುತ್ತದೆ. ನಿರಾಶ್ರಿತರಾಗಿ ಬರತಕ್ಕಂತಹ ಜನಗಳಿಗೆ ಆಶ್ರಯ ಕೊಡುವ ದಿಕ್ಕಿನಲ್ಲಿ ಅವರಿಗೆ

ಭರವಸೆ ಕೊಡುವ ದಿಕ್ಕಿನಲ್ಲಿ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ನಾವು ಇವತ್ತು ನಮ್ಮ ದೇಶದಲ್ಲಿ Tele communication ಬಗ್ಗೆ ಕ್ರಾಂತಿಯನ್ನು ಮಾಡುತ್ತಿದ್ದೇವೆಯೋ? Tele communication ಈ ದೇಶದಲ್ಲಿ ಮಾನ್ಯ ದಿವಂಗತ ರಾಜೀವ್ ಗಾಂಧಿಯವರು ಇದ್ದಾಗ ಹೇಗೆ ಕ್ರಾಂತಿಯನ್ನು ಮಾಡಿದರು, ಅದೇ ರೀತಿಯಲ್ಲಿ ಪವರ್ ಸೆಕ್ಟರ್‌ನಲ್ಲಿ ವಿಶೇಷವಾಗಿ ದಕ್ಷಿಣ ಭಾರತದ ನಮ್ಮ ಕರ್ನಾಟಕ ರಾಜ್ಯದಲ್ಲಿ ಪವರ್ ಸೆಕ್ಟರ್‌ನಲ್ಲಿ ಕ್ರಾಂತಿ ಮಾಡತಕ್ಕಂಥ ಅವಕಾಶ ಇದೆ. ಈ ರೀತಿ ಮಾಡದಿದ್ದರೆ ಬಹಳಷ್ಟು ತೊಂದರೆಯಾಗುತ್ತದೆ. ಹಳ್ಳಿಗಳಲ್ಲಿ ಈಗ ನಾಲ್ಕೈದು ಗಂಟೆಗಿಂತಲೂ ಹೆಚ್ಚು ಕಾಲ ಕರೆಂಟ್ ಸಿಗದೇ ಬಹಳ ಕಷ್ಟ ಪರಿಸ್ಥಿತಿ ಇದೆ. ಈ ರೀತಿಯಾದರೆ ಹಳ್ಳಿಗಳವರ ಬದುಕು ಬಹುಶ: ಬಹಳಷ್ಟು ದುರ್ಬಲವಾಗುತ್ತದೆ. ಆದುದರಿಂದ ಆ ದಿಕ್ಕಿನಲ್ಲಿ ತಾವು ಬಹಳಷ್ಟು ಗಮನವನ್ನು ಹರಿಸಬೇಕಾದುದು ಬಹಳ ಮುಖ್ಯವಿದೆ. ಇನ್ನು ಜಾನುವಾರುಗಳಿಗೆ ಬೇಕಾಗಿರತಕ್ಕಂಥ ಆಹಾರವನ್ನು ಸಂಗ್ರಹಿಸುವ ಬಗ್ಗೆ ಇಂದು ಸಮರೋಪಾದಿಯಲ್ಲಿ ಕೆಲಸವನ್ನು ಏಕೆ ಮಾಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕೇಳಬಯಸುತ್ತೇನೆ. ಇವೊತ್ತು ಡಾ: ವೀರೇಶ್‌ರವರು ಕೊಟ್ಟಿರತಕ್ಕಂಥ ವರದಿಯನ್ನು ನೋಡಿದಾಗ ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ನಮಗೆ ಗೊತ್ತಾಗುತ್ತದೆ. 1996 ರಿಂದ 2000 ನೇ ಸಾಲಿನ ಅವಧಿಯಲ್ಲಿ ರಾಜ್ಯದಲ್ಲಿ 10950 ರೈತರ ಸಾವಾಗಿದೆ. 2231 ಹೆಣ್ಣು ಮಕ್ಕಳು ಮತ್ತು 8728 ಗಂಡು ಮಕ್ಕಳು. 2003–04 ರಲ್ಲಿ 708 ಜನ, 2004–05 ರಲ್ಲಿ 271 ಜನ, 2005–06 ರಲ್ಲಿ 143 ಜನ, ಈ ರೀತಿ ಜನರು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುವುದಕ್ಕೆ ಏನು ಕಾರಣಗಳು? ಡಾ: ವೀರೇಶ್‌ರವರು ಕೊಟ್ಟಿರತಕ್ಕಂಥ ವರದಿಯನ್ನು ಓದಿದರೆ ಈ ಬಗ್ಗೆ ನಮಗೆ ಗೊತ್ತಾಗುತ್ತದೆ. ಬಹುಶ: ಇದನ್ನು ತಪ್ಪಿಸಲು ಸಮಗ್ರವಾಗಿ ಏನು ಪ್ಲಾನ್ ಮಾಡುತ್ತಿದ್ದೀರೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇವೊತ್ತು ರೈತರುಗಳು ತಮಗೆ ಆಗುತ್ತಿರುವ ಸಾಲದ ಬಾಧೆಯನ್ನು ತಡೆದುಕೊಳ್ಳುವುದಕ್ಕೆ ಆಗದೇ ಪರಿತಪಿಸುತ್ತಿದ್ದಾರೆ. ರೈತರುಗಳಿಗೆ ಹಲವಾರು ರೀತಿಯಲ್ಲಿ ಶೋಷಣೆಯಾಗುತ್ತಿದೆ. ಅದರಲ್ಲಿ ಒಂದನೆಯದಾಗಿ ಸಾಲದ ಹೊರೆ. ಇನ್ನೊಂದು ರೈತರುಗಳು ಕೃಷಿ ಉತ್ಪನ್ನಗಳೇನನ್ನು ಮಾಡುತ್ತಾರೆ ಅವುಗಳಿಗೆ ಸರಿಯಾದ ಬೆಲೆಯನ್ನು ಕೊಡತಕ್ಕಂಥ ವ್ಯವಸ್ಥೆ ಇಲ್ಲ. ನಾನು ತಮಗೆ ಒಂದು ಸಣ್ಣ

ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರು ನಗರ ಐಟಿ:ಬಿಟಿ ನಗರವೆಂದು ಕೇಳುತ್ತೇವೆ. ನಿಮಗೆ ಗೊತ್ತಿರಬಹುದು, ರೈತರ ತರಕಾರಿ ಮತ್ತು ಹಣ್ಣು ಮಾರುಕಟ್ಟೆಯ ಒಂದು ಸಮಗ್ರ ಯೋಜನೆಗೆ ಶಂಕುಸ್ಥಾಪನೆ ಬ್ಯಾಟರಾಯನಪುರದಲ್ಲಿ ಆಗಿ ಎಷ್ಟು ವರ್ಷವಾಯಿತು? ಏಕೆ ನೀವು ಅದರ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿಲ್ಲ? ಏಕೆ ನೀವು ಆ ಕೆಲಸವನ್ನು ಕೈಗೆತ್ತಿಕೊಳ್ಳುತ್ತಿಲ್ಲ? ಕೋಟ್ಯಾಂತರ ರೂಪಾಯಿಗಳನ್ನು ಬೇರೆ ಬೇರೆ ವಿಷಯಗಳಿಗೆ ನಾವು ಖರ್ಚು ಮಾಡುತ್ತಿದ್ದೇವೆ. 85% ಕೃಷಿ ಆಧಾರಿತ ಜನಗಳಿರುವ ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಈ ಜನರಿಗೆ ಬೇಕಾಗಿರತಕ್ಕಂಥ ಒಳ್ಳೆಯ ಮಾರುಕಟ್ಟೆಯನ್ನು ನಿರ್ಮಾಣ ಮಾಡುವುದಕ್ಕೆ ನಿಮ್ಮ ಸಂಕಲ್ಪ ಇಲ್ಲವೆ? ದಯವಿಟ್ಟು ಸಂಬಂಧಪಟ್ಟವರು ಈ ಬಗ್ಗೆ ನೋಟ್ ಮಾಡಿಕೊಳ್ಳಬೇಕು. ಏಕೆ ಆ ಕಡತ ಇನ್ನೂ ನೆನೆ ಗುದಿಗೆ ಬಿದ್ದಿದೆ? ಹಣದ ಕೊರತೆಯೇ ಅಥವಾ ನಿಮಗೆ ಇದರ ಬಗ್ಗೆ ಇಚ್ಛಾಶಕ್ತಿಯ ಕೊರತೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ತಮಗೆ ಕೇಳಬಯಸುತ್ತೇನೆ. ಇವೊತ್ತು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಬಳಕೆ, ನವೀಕರಣಗೊಂಡ ತಾಂತ್ರಿಕತೆ, ಲಭ್ಯವಿದ್ದು ಇಸ್ರೇಲ್‌ನಂಥ 5 ಸೆಂ.ಮೀ. ಮಳೆ ಬೀಳತಕ್ಕಂಥ ರಾಷ್ಟ್ರದಲ್ಲಿಯೇ ಕೃಷಿ ಮಾಡುವುದಕ್ಕೆ ಸಾಧ್ಯವಾಗುವುದಾದರೆ 600 ಸೆಂ.ಮೀ. ಮತ್ತು ಅದಕ್ಕೂ ಸ್ವಲ್ಪ ಕಡಿಮೆ ಮಳೆ ಬೀಳತಕ್ಕಂಥ ಪ್ರದೇಶಗಳಲ್ಲಿ ಯಾವ ರೀತಿಯಾದ ಬೆಳೆಗಳನ್ನು ಬೆಳೆಯಬೇಕು ಎನ್ನುವ ಬಗ್ಗೆ ಚಿಂತನೆಯನ್ನು ಏಕೆ ಮಾಡುತ್ತಿಲ್ಲ. ಬಹಳಷ್ಟು ಪಶ್ಚಿಮ ಘಟ್ಟದಲ್ಲಿರುವಂಥ ಕಾಡುಗಳನ್ನು ನಾಶ ಮಾಡುತ್ತಿರುವುದೇ ಮಳೆ ಕಡಿಮೆಯಾಗಲು ಕಾರಣವಾಗಿದೆ. ಇವೊತ್ತು ಗಣಿಗಾರಿಕೆ ನೆಪದಲ್ಲಿ ಸಮಗ್ರವಾಗಿರತಕ್ಕಂಥ ಕಾಡು ಮತ್ತು ಆ ಗಣಿಯ ಕಲ್ಲುಗಳನ್ನು ನಾಶ ಮಾಡುತ್ತಾ ನಿಸರ್ಗ ವಿಕೋಪವಾಗುವಂಥ ರೀತಿಯಲ್ಲಿ ಸರ್ಕಾರ ಏನು ವ್ಯವಸ್ಥೆಗಳನ್ನು ಮಾಡುತ್ತಿದೆ, ಯಾರೋ ಬೆರಳೆಣಿಕೆಯಷ್ಟು ಜನ ಮಾತ್ರ ಶ್ರೀಮಂತರಾಗುವುದಕ್ಕೋಸ್ಕರ ಈ ವ್ಯವಸ್ಥೆಯಲ್ಲಿ ನಿಸರ್ಗವನ್ನು ಬಲಿ ಕೊಡಬೇಕೆ ಎಂದು ನಾನು ಈ ಸದನದಲ್ಲಿ ಕೇಳಬಯಸುತ್ತೇನೆ. ಇವೊತ್ತು ಹಳ್ಳಿಗಳಲ್ಲಿ ಏನಾಗಿದೆಯೆಂದರೆ ಅಲ್ಲಿ ಏನಿಲ್ಲದಿದ್ದರೂ ಹಳ್ಳಿ ಮತ್ತು ಪಟ್ಟಣಗಳಲ್ಲಿ ಒಂದಂಕಿ ಲಾಟರಿ ಅಂಗಡಿಗಳು, ಎರಡಂಕಿ ಲಾಟರಿ ಅಂಗಡಿಗಳು, ಸಾರಾಯಿ ಅಂಗಡಿ, ವೈನ್ ಸ್ಟೋರ್‌ಗಳನ್ನು ಕಡ್ಡಾಯವಾಗಿ ಇಡುತ್ತಿರುವುದನ್ನು ನೋಡುತ್ತಿದ್ದೇವೆ. ದಯವಿಟ್ಟು ಇವಕ್ಕೆಲ್ಲಾ ಅಂಕುಶ ಹಾಕಿ ಇದರ ಬಗ್ಗೆ

ತೀರ್ಮಾನವನ್ನು ತೆಗೆದುಕೊಳ್ಳಿ. ಬಹುಶ: ಬಹುತೇಕ ರೈತ ಕುಟುಂಬಗಳಲ್ಲಿ ರೈತ ಬೆಳಗ್ಗೆಯಿಂದ ಸಂಜೆಯವರೆಗೂ 25 ರಿಂದ 50 ರೂಪಾಯಿಗಳನ್ನು ಸಂಪಾದನೆ ಮಾಡಿದರೆ ಇದರಲ್ಲಿ ಲಾಟರಿ ಆಡುವುದೋ, ಜೂಜಾಡುವುದೋ, ಸಾರಾಯಿ ಅಂಗಡಿಯಲ್ಲಿ ಸಾರಾಯಿ ಕುಡಿಯುವುದನ್ನೋ ಅಥವಾ ವೈನ್ ಕುಡಿಯುವುದನ್ನೋ ಮಾಡಿಬಿಡುತ್ತಾನೆ. ಇವೆಲ್ಲಾ ಹಳ್ಳಿಗಳಿಗೆ ಬೇಕಾಗಿಲ್ಲ. ಹಿಂದೆ ಹಳ್ಳಿ ಎಂದರೆ ಎಂಥ ಒಂದು ಪರಿಕಲ್ಪನೆಯನ್ನು ನಮ್ಮ ಹಿರಿಯರು ಮಾಡಿದ್ದರೋ, ಅಂದರೆ ಒಂದು ಹಳ್ಳಿ ಎಂದರೆ ಅಲ್ಲಿ ಒಂದು ಗುಂಡಿ ತೋಪು ಇರುತ್ತಿತ್ತು, ಸರ್ವೆ ತೋಪು ಇರುತ್ತಿತ್ತು, ಕಲ್ಯಾಣಿ ಇರುತ್ತಿತ್ತು, ಕೆರೆ ಇರುತ್ತಿತ್ತು. ಅದೇ ರೀತಿ ಇವೊತ್ತು ಹಳ್ಳಿಗಳಲ್ಲಿ ಬೇಕಾಗಿದೆ. ಇದಲ್ಲದೇ 70 ರಿಂದ 80 ಲಕ್ಷ ಜನಸಂಖ್ಯೆ ಇರತಕ್ಕಂಥ ನಗರಪ್ರದೇಶಗಳಲ್ಲಿ ಬೇಕಾಗಿರತಕ್ಕಂಥ ಮೂಲಭೂತ ವ್ಯವಸ್ಥೆಗಳನ್ನು ಮಾಡುತ್ತಿಲ್ಲವೆಂದರೆ ಯಾವ ದಿಕ್ಕಿನಲ್ಲಿ ನಗರವನ್ನು, ಸಮಾಜವನ್ನು, ನಾಗರಿಕತೆಯನ್ನು ನಾವು ಕೊಡುವುದಕ್ಕೆ ಹೋಗಿದ್ದೇವೆ ಎಂದು ನೋಡಿದಾಗ ನಿಜವಾಗಿಯೂ ನಮಗೆ ಆಶ್ಚರ್ಯವಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಸಭಾಧ್ಯಕ್ಷ ಪೀಠದಲ್ಲಿ ಆಸೀನರಾದರು)

ಮಾನ್ಯ ಉಪಾಧ್ಯಕ್ಷರೇ, ಇವೊತ್ತು ಮಳೆ ನೀರು ಕೊಯ್ಲು ಪದ್ಧತಿಯ ಬಗ್ಗೆ ಬರ ಬಂದಾಗ ಯೋಚನೆಯನ್ನು ಮಾಡುತ್ತೇವೆಯೇ ಹೊರತು ಸಮಗ್ರವಾಗಿ, ಶಾಶ್ವತವಾಗಿ, ನಿರಂತರವಾಗಿ ಈ ವ್ಯವಸ್ಥೆಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಏಕೆ ರೂಪಿಸುತ್ತಿಲ್ಲವೆನ್ನುವ ಪ್ರಶ್ನೆಯನ್ನು ನಾನು ಕೇಳಬಯಸುತ್ತೇನೆ. ಇವೊತ್ತು ಒಣಭೂಮಿ ಪ್ರದೇಶಗಳಾಗಿ ಪರಿವರ್ತಿತವಾಗಿರತಕ್ಕಂಥದ್ದರಲ್ಲಿ ಒಣ ಬೇಸಾಯ ಪದ್ಧತಿ ಬಗ್ಗೆ ನಾವು ಬಹಳಷ್ಟು ವಿಚಾರಗಳು ಪತ್ರಿಕೆಗಳಲ್ಲಿ ಮತ್ತು ಪುಸ್ತಕಗಳಲ್ಲಿ ಮುದ್ರಣ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವುಗಳಿಗೆ ಶಾಶ್ವತವಾದ ವ್ಯವಸ್ಥೆಯನ್ನು ಏಕೆ ಮಾಡುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇನ್ನು ಮುಂದೆ ರೈತ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೇ ಹಾಗೂ ತನ್ನ ಪ್ರಾಣವನ್ನು ಕಳೆದುಕೊಳ್ಳದೇ ಇರಲು ರೈತರ ಕುಟುಂಬಕ್ಕಾಗಿ ಯಾವ ರೀತಿಯ ಸೌಲಭ್ಯಗಳನ್ನು ಕೊಡುತ್ತೀರಿ? ಇವೊತ್ತು ಸರ್ಕಾರಿ ನೌಕರರಿಗಾಗಲಿ ಅಥವಾ ಸರ್ಕಾರದ ವ್ಯವಸ್ಥೆಯೊಳಗೆ ಬರತಕ್ಕಂಥವರಿಗಾಗಲಿ ಮತ್ತು ನಗರ ಪ್ರದೇಶಗಳಲ್ಲಿರತಕ್ಕಂಥ ಕಾರ್ಮಿಕರಿಗಾಗಲಿ ಹಲವಾರು ರೀತಿಯ

ಯೋಜನೆಗಳಿವೆ. ಇವೊತ್ತು ಅವರು ನಿವೃತ್ತರಾದ ಮೇಲೆ ಅವನ ಕುಟುಂಬದ ಬದುಕಿನ ಮುಂದಿನ ದಿಕ್ಕೇನು ಎನ್ನುವ ರೀತಿಯಲ್ಲಿಯೇ ರೈತರ ಬಗ್ಗೆಯೂ ಕೂಡ ಯೋಚನೆಯನ್ನು ಮಾಡಿದರೆ ಮಾತ್ರ ರೈತರ ಆತ್ಮಹತ್ಯೆಗಳು ಕಡಿಮೆಯಾಗುತ್ತವೆ. ಬರದ ಪರಿಸ್ಥಿತಿಯಲ್ಲೂ ಕೂಡ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ರೈತ ಹೆಜ್ಜೆ ಇಡುತ್ತಾನೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡ ಕೆಲಸವನ್ನು ಮಾಡಬೇಕು. ಒಂದು ಒತ್ತಾಯವನ್ನು ನಾನು ಮಾಡುತ್ತೇನೆ. ಗಂಗಾ –ಕಾವೇರಿ ನದಿಗಳ ಜೋಡಣೆಯ ಪರಿಕಲ್ಪನೆ ಹಿಂದಿನಿಂದು ಏನು ಬರುತ್ತಿದೆ ಅದನ್ನು ಆದಷ್ಟು ಬೇಗ ಮಾಡುವ ದಿಕ್ಕಿನಲ್ಲಿ ದಕ್ಷಿಣ ಭಾಗದಲ್ಲಿ ನಮ್ಮ ರಾಜ್ಯಕ್ಕೂ ಕೂಡ ಅದರ ಉಪಯೋಗವಾಗಬೇಕು. ಪಶ್ಚಿಮ ಘಟ್ಟದಲ್ಲಿ ಪೋಲಾಗುತ್ತಿರತಕ್ಕಂಥ ನೀರನ್ನು ಇವತ್ತು ಹೇಗೆ ತರಬೇಕು ಎಂಬ ಬಗ್ಗೆ ಚಿಂತನೆಯನ್ನು ಮಾಡಬೇಕು. ಇವುಗಳನ್ನು ಮಾಡಿ ಮುಂದಿನ ದಿನಗಳಲ್ಲಿ ರೈತ ಕುಟುಂಬಗಳೇನಿವೆ ಆ ಜನ ಮತ್ತು ಬಡತನ ರೇಖೆಗಿಂತ ಹಿಂದುಳಿದ ಜನಗಳೇನಿದ್ದಾರೆ ಅಂಥ ಕುಟುಂಬಗಳ ಜನಗಳ ಬದುಕಿನ ಬಗ್ಗೆ ಚಿಂತನೆಯನ್ನು ಮಾಡಬೇಕು ಮತ್ತು ಕಾಡು ಮತ್ತು ಜನಗಳ ಬಗ್ಗೆ ನಾವು ಮಾತನಾಡುತ್ತಿರುವ ಹಾಗೆಯೇ ಕಾಡು ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಕುಡಿಯುವ ನೀರಿಲ್ಲದಿದ್ದರೆ ಅವುಗಳ ಗತಿ ಏನಾಗಬೇಕು? ಇವೊತ್ತು ಕಾವೇರಿ ತೀರ್ಪನ್ನು ನೋಡಿದಾಗ ನಮಗೆ ನಾಚಿಕೆಯಾಗುತ್ತದೆ. ಬಹುಶ: ಇದರಲ್ಲಿ ಕಬಿನಿಯ ಬ್ಯಾಕ್ ವಾಟರ್ ಬಳಿ ಹೋಗಿ ನಿಂತು ನೋಡಿದಾಗ ಎಷ್ಟು ಆನೆಗಳು, ಎಷ್ಟು ಜಿಂಕೆಗಳು ಆ ನೀರಿನ ಮೇಲೆಯೇ ಅವಲಂಬಿತವಾಗಿರತಕ್ಕಂಥದ್ದು ಕಂಡುಬರುತ್ತದೆ. ಇವೊತ್ತು ಬರದ ವಿಚಾರದಲ್ಲಿ ಏನೇನು ಪರಿಣಾಮ ಬೀರುತ್ತಿದೆ ಎಂಬುದನ್ನು ನಿಮ್ಮ ಮುಂದೆ ಹೇಳುತ್ತಾ ಬಹುಶ: ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಏಕೆಂದರೆ ಇದು ಕೇವಲ ಹಳ್ಳಿಗೆ ಸೀಮಿತವಾಗಿರತಕ್ಕಂಥದ್ದಲ್ಲ, ಕೇವಲ ರೈತರಿಗೂ ಮಾತ್ರ ಸೀಮಿತವಾಗಿರ ತಕ್ಕಂಥದ್ದಲ್ಲ, ಸಮಗ್ರವಾಗಿ ಇಡೀ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಮತ್ತು ಜನಗಳ ಬದುಕಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆದಕಾರಣ ಈ ಬಗ್ಗೆ ಸಮಗ್ರವಾಗಿ, ಶಾಶ್ವತವಾಗಿ, ನಿರಂತರವಾಗಿ ಚಿಂತನೆ ಮಾಡತಕ್ಕಂಥ ವ್ಯವಸ್ಥೆಯಾಗಬೇಕೆಂದು ಆಗ್ರಹಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜೇಂದ್ರನ್: ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳು ಬರುವುದೇ ಇಲ್ಲ. ಅವರಿಗೆ ಏನಾಗಿದೆಯೋ ನನಗೆ ಗೊತ್ತಿಲ್ಲ. ಅವರನ್ನು ನೋಡಲಿಲ್ಲವೆಂದರೆ ನನಗೆ ನೋವಾಗುತ್ತದೆ. ಪ್ರತಿ ದಿನ ಮುಖ್ಯಮಂತ್ರಿಗಳನ್ನು ನೋಡುತ್ತಿದ್ದರೆ ನನಗೆ ಸಂತೋಷವಾಗುತ್ತದೆ. ಆದರೆ ಅವರು ಕಾಣಿಸಲೇ ಇಲ್ಲ. ಟಿ.ವಿ. ಯಲ್ಲೂ ಇಲ್ಲ, ಪೇಪರ್‌ನಲ್ಲೂ ನ್ಯೂಸ್ ಇಲ್ಲ. ಎಲ್ಲಿ ಹೋಗಿದ್ದಾರೆ? ಅವರಿಗೆ ಕಾಯಿಲೆ ಏನಾದರೂ ಆಗಿದೆಯೇ? ಅಥವಾ ಅವರಿಗೆ ಇಲ್ಲಿಗೆ ಬರುವುದಕ್ಕೆ ಅವರಿಗೆ ಇಂಟರೆಸ್ಟ್ ಇಲ್ಲವೇ? ಇಲ್ಲಿಗೆ ಬರುವುದು ಬೇಡವೆಂದು ಏನಾದರೂ ಡಿಸೈಡ್ ಮಾಡಿದ್ದಾರೆಯೆ; ಏನು? ಎಂಬ ಬಗ್ಗೆ ನಮಗೆ ಗೊತ್ತಿಲ್ಲವಾಗಿದೆ. ಮುಖ್ಯಮಂತ್ರಿಗಳನ್ನು ದಿನ ನೋಡಿಲ್ಲವೆಂದರೆ ನೋವಾಗುತ್ತದೆ. ಏಕೆಂದರೆ ಅವರು No. 1 of the State. ಅವರ ಮುಖವನ್ನು ನಾವು ನೋಡಬೇಕು. ಅವರ ಮೇಲೆ ನಮಗೆಷ್ಟು ಪ್ರೀತಿ, ಅವರು. ಹೃದಯದಲ್ಲಿಯೇ ಇದ್ದಾರೆ ಸ್ವಾಮಿ, ಹಾರ್ಟ್ ಆಪರೇಷನ್‌ಗೆ ಸಂಬಂಧಪಟ್ಟಂತೆ ಪತ್ರಕ್ಕೆ ಅವರ ಸಹಿ ತೆಗೆದುಕೊಳ್ಳಬೇಕು, ಕಿಡ್ನಿ ಆಪರೇಶನ್‌ಗೆ ಸಂಬಂಧಪಟ್ಟಂತೆ ಪತ್ರಕ್ಕೆ ಅವರ ಸಹಿ ತೆಗೆದುಕೊಳ್ಳಬೇಕು. ಆದರೆ ಅವರು ಸಿಕ್ಕಿಲ್ಲ. ಎಲ್ಲಿಗೆ ಹೋಗಿದ್ದಾರೆ? ಏನಾಗಿದ್ದಾರೆ? ಹೆಲ್ತಿಯಾಗಿದ್ದಾರೋ ಅಥವಾ ಇಲ್ಲವೋ? ಮೆಂಟಲ್ ಟಾರ್ಚರ್ ಆಗಿದೆಯೇ? ಎನ್ನುವ ಬಗ್ಗೆ ಗೃಹ ಮಂತ್ರಿಗಳು ಹೇಳಬೇಕು. ಮುಖ್ಯಮಂತ್ರಿಗಳ ಮುಖ ನೋಡದಿದ್ದರೆ ನನಗೆ ನಿದ್ರೆ ಬರುವುದಿಲ್ಲ. ಊಟ ಮಾಡುವುದಕ್ಕೆ ಹೋದರೆ ಅಲ್ಲಿ ಅವರ ಮುಖವೇ ಬರುತ್ತದೆ ಸ್ವಾಮಿ,

ಶ್ರೀ ಕೆ. ಶ್ರೀನಿವಾಸಗೌಡ: ಊಟ ಮಾಡಿದರೂ ಜೀರ್ಣವಾಗುವುದಿಲ್ಲ.

ಶ್ರೀ ಎನ್. ರಾಜೇಂದ್ರನ್: ಇವರಿಗೆ ನೋಡಿ, ಜೀರ್ಣವಾಗುವುದಿಲ್ಲವಂತೆ, ನನಗೆ ಊಟವೇ ಗಂಟಲಿಗೆ ಹೋಗುವುದಿಲ್ಲ. ಏಕೆಂದರೆ ಆ ರೀತಿಯ ಪ್ರೀತಿ ಇದೆ. ಅದಕ್ಕಾಗಿ ಕೇಳುತ್ತಿದ್ದೇನೆ. ಅವರು ಎಲ್ಲಿದ್ದಾರೆ, ಹೇಗಿದ್ದಾರೆ ಎಂಬ ಬಗ್ಗೆ ತಾವು ತಿಳಿಸಬೇಕಲ್ಲವೆ ಸ್ವಾಮಿ. ಇದು ಸೀರಿಯಸ್ ಮ್ಯಾಟರ್ ಕೂಡ ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್(ಗೃಹ ಸಚಿವರು): ಖಂಡಿತವಾಗಿಯೂ ಕೂಡ ನೀವು ಉಪವಾಸ ಇರಬಾರದೆಂದು ನಂಬಿಕೆ ಇಟ್ಟಿರುವುದರಿಂದ ಇನ್ನು ಸ್ವಲ್ಪ ಸಮಯದಲ್ಲಿಯೇ ಮುಖ್ಯಮಂತ್ರಿಗಳು ಬರುತ್ತಾರೆ. ತಾವು ಲಂಚ್ ಬ್ರೇಕ್‌ನಲ್ಲಿ ಚೆನ್ನಾಗಿ ಊಟ ಮಾಡಬಹುದು.

ಶ್ರೀ ಎಸ್. ರಾಜೇಂದ್ರನ್: ಅವರ ಜೊತೆಯಲ್ಲಿಯೇ ಊಟ ಮಾಡುತ್ತೇನೆ. ಅವರು ಬಂದರೆ ಊಟ ಮಾಡುತ್ತೇನೆ. ಅವರು ಬರದಿದ್ದರೆ ಊಟವನ್ನೇ ಮಾಡುವುದಿಲ್ಲ.

ಉಪಾಧ್ಯಕ್ಷರು: ಮಾನ್ಯ ಮಿರಾಜುದ್ದೀನ್‌ರವರೆ ತಾವು ಮಾತನಾಡಿ.

ಶ್ರೀ ಮಿರಾಜುದ್ದೀನ್ ಪಟೇಲ್(ಹುಮ್ನಾಬಾದ್): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಮಾತನಾಡುವಾಗ ರೈತರ ಸಾಲ ಮನ್ನಾ ಮಾಡಿದರೆ ಕೋ–ಆಪರೇಟಿವ್ ಸೆಕ್ಟರ್‌ನಲ್ಲಿ ಲಾಸ್ ಆಗುತ್ತದೆ ಮತ್ತು ಡೆಬಿಟ್, ಕ್ರೆಡಿಟ್ ಸಿಸ್ಟಂ ಹೊರಟು ಹೋಗುತ್ತದೆಂದರು. ಈ ಅಪೆಕ್ಸ್ ಬ್ಯಾಂಕ್ ಹಾಗೂ ಡಿ.ಸಿ.ಸಿ. ಬ್ಯಾಂಕ್‌ಗಳು ಕೂಡಿಕೊಂಡು ಸೊಸೈಟಿಗಳನ್ನು ಹಾಳು ಮಾಡಿಬಿಟ್ಟಿವೆ. ಈ ಸೊಸೈಟಿಗಳಲ್ಲಿ ಈಗ ಶಕ್ತಿಯೇ ಉಳಿದಿಲ್ಲ. ಇವರೆಲ್ಲಾ ರಿಸರ್ವ್ ಬ್ಯಾಂಕ್‌ನಿಂದ 6 ಪರ್ಸೆಂಟ್, 5 ಪರ್ಸೆಂಟ್‌ಗೆ ಸಾಲವನ್ನು ತೆಗೆದುಕೊಂಡು ರೈತರಿಗೆ 12 ಪರ್ಸೆಂಟ್, 14 ಪರ್ಸೆಂಟ್ ಬಡ್ಡಿದರವನ್ನು ಹಾಕಿ ಮಾರ್ಜಿನ್ ಹಂಚಿ ಎಂದರೆ ನೀವು ತೆಗೆದುಕೊಳ್ಳುವುದು. ರೆಕವರಿ ಸೊಸೈಟಿ ಮಾಡುವುದು. ಇದು ಒಂದು ವಿಚಾರ. ಇನ್ನು ಸಾಲ ಮನ್ನಾ ಮಾಡುವ ಪ್ಲಾನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಚಿಂತನೆಯನ್ನು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಈ ಬಜೆಟ್‌ನಲ್ಲಿಯೇ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಘೋಷಣೆಯನ್ನು ಮಾಡುತ್ತೇವೆಂದು ಈಗಾಗಲೇ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದರಿಂದ ಸೊಸೈಟಿಗೆ ಅಥವಾ ಬ್ಯಾಂಕಿಗೆ ಸ್ವಲ್ಪ ಲಾಸ್ ಆದರೂ ಕೂಡ ರೈತರಿಗೆ ಲಾಭವಾಗುತ್ತಿದೆಯಲ್ಲ. ಈಗ ಒಂದು ಡ್ಯಾಂ ಮಾಡುವುದಕ್ಕೆ ಹೋದರೆ ಆ ಭಾಗದಲ್ಲಿ ಒಂದು ಸಾವಿರ ಎಕರೆಗೂ ಹೆಚ್ಚು ಭೂಮಿ ಮುಳುಗಡೆ ಅಗುತ್ತದೆ. ಹತ್ತು ಸಾವಿರ ಎಕರೆ ಭೂಮಿಗೆ irrigation ಆಗುತ್ತದೆ. ಅದೇ ರೀತಿಯಾಗಿ ಯಾರೂ ಕೂಡ ರೈತರಿಗೆ ಸಾಲ ಮನ್ನಾ ಮಾಡುತ್ತೇವೆಂದು ಚಿಂತನೆ ಮಾಡಲಿಲ್ಲವಲ್ಲ. ಹಿಂದೆ ಯಾರಾದರೂ ಸಾಲ ಮನ್ನಾ ಅಥವಾ ಬಡ್ಡಿ ಮನ್ನಾ ಮಾಡಿದಾರಾ? ಈಗ ಈ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯ ಮಂತ್ರಿಗಳು ಸಂಪೂರ್ಣವಾಗಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ ಧೈರ್ಯ ಮಾಡಿದ್ದಾರೆ. ಅದನ್ನು ನೀವು ಸ್ವಾಗತಿಸಬೇಕು ಮತ್ತು ಅಭಿನಂದಿಸಬೇಕು. ಇವತ್ತು ರೈತರು ಕಷ್ಟದಲ್ಲಿದ್ದಾರೆ. Co–operative Sector comes under the State

Government. Nationalized Banks come under the Central Government. ಯಾವ Central Government ಕೂಡ ಮಾಡಲಿಲ್ಲ, ಮಾಡುತ್ತೇವೆಂದು ಘೋಷಣೆಯನ್ನು ಮಾಡಿಲ್ಲ. ಮಾನ್ಯ ಶ್ರೀನಿವಾಸ ಗೌಡರು IFFCO ಮತ್ತು Federation ನಲ್ಲಿ chairman ಅಗಿ ಕೆಲಸ ಮಾಡಿದ್ದೀರಿ. ನಿಮಗೆ Co–operative sector ನಲ್ಲಿ ಒಳ್ಳೆಯ ಅನುಭವ ಇದೆ. ರೈತರ ಸಾಲ Commercial Bank ನಲ್ಲಿ ಏನಿದೆ ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ(ಕೋಲಾರ): ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಕೂಡ ಅತಿವೃಷ್ಟಿ ಮತ್ತು ಅನಾವೃಷ್ಟಿ. ಇವೆರಡೂ ಕೂಡ ಈ ರಾಜ್ಯಕ್ಕೆ ಪ್ರತಿ ವರ್ಷ ಇರುವಂತಹ ಕಷ್ಟಗಳು. ಇವತ್ತು ನಮ್ಮಲ್ಲಿ ಹೇಗಿದೆಯೆಂದರೆ ಮನೆ ಹತ್ತಿ ಉರಿದಾಗ ಆಗ ಬಾವಿ ತೋಡುವುದಕ್ಕೆ ಹೋಗುತ್ತೇವೆನ್ನುವ ರೀತಿಯಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ. ಇವತ್ತು ಇಂತಹ ಪರಿಸ್ಥಿತಿಯಲ್ಲಿ ಅದರಲ್ಲೂ ಮೊನ್ನೆ ತಾನೇ ಅತಿವೃಷ್ಟಿಯಿಂದ ಐದಾರು ಜಿಲ್ಲೆಗಳು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿವೆ. ಎರಡು ಮೂರು ವರ್ಷಗಳಿಂದ ಅತಿವೃಷ್ಟಿ ಆಗಿದ್ದರೂ ಕೂಡ ಅಲ್ಲಿ ಹೋಗಿ ಇವತ್ತಿಗೂ ಸಾಂತ್ವನ ಹೇಳುವುದು ಬಿಟ್ಟರೆ ಅದಕ್ಕೆ permanent ಆಗಿ ಪರಿಹಾರ ಮಾಡುವಂತಹ ಉದ್ದೇಶ ಸರ್ಕಾರಕ್ಕೆ ಬರಲಿಲ್ಲ. ಇದು ಅತಿವೃಷ್ಟಿ ವಿಷಯದಲ್ಲಿ ಹೇಳುವಂತಹ ವಿಚಾರಗಳಾಗಿದ್ದು, ನಾವೆಲ್ಲರೂ ಕೂಡ ಬರ ಜಿಲ್ಲೆಯಿಂದ ಬಂದಿರುವವರಾಗಿರುವುದರಿಂದ ಆ ವಿಷಯಕ್ಕೆ ಬರುತ್ತೇನೆ. ಮಾನ್ಯ ಕಂದಾಯ ಮಂತ್ರಿ ಗಳು ನಮ್ಮ ಜಿಲ್ಲೆಗೆ ಬಂದಿದ್ದರು. ನಾವು ಎಲ್ಲಾ ಶಾಸಕರು ಸೇರಿ ಕುಡಿಯುವ ನೀರಿಗೆ ಇರುವ ಸಮಸ್ಯೆಗಳನ್ನು ಹೇಳಿದೆವು. ಆಗಲೇ 12 ಕೋಟಿ ರೂಪಾಯಿ ಬಿಡುಗಡೆಯಾಗಿತ್ತು. ಜಿಲ್ಲಾಧಿಕಾರಿಗಳು ನಮಗೆ 25 ಕೋಟಿ ರೂಪಾಯಿಗೆ ಕಾಮಗಾರಿಗಳ ಪಟ್ಟಿ ಕೊಡಿ ಎಂದು ಹೇಳಿದರು. ನಾವು ಒಂದೊಂದು ಕ್ಷೇತ್ರಕ್ಕೆ 2 ಕೋಟಿ ಚಿಲ್ಲರೆ ರೂಪಾಯಿಯಂತೆ ಪಟ್ಟಿಯನ್ನು ಕೊಟ್ಟಿದ್ದೇವೆ. ಆದರೆ ಆವತ್ತು ನಮ್ಮ ಕಂದಾಯ ಮಂತ್ರಿಗಳು ಏನು ಹೇಳಿದರೆಂದರೆ ಬೆಂಗಳೂರಿಗೆ ಬರುತ್ತಿದ್ದ ಹಾಗೆ ದುಡ್ಡು ಕಳುಹಿಸುತ್ತೇವೆ ಎನ್ನುವಂತಹ ಭಾವನೆಯಿಂದ ಮಾತನಾಡಿದರು. ನನಗಂತೂ ಬಹಳ

ಸಂತೋಷವಾಯಿತು. ಆವತ್ತು ನಮ್ಮ ಜಿಲ್ಲೆಯ ಅನೇಕ ಮಾನ್ಯ ಶಾಸಕರುಗಳಾದ ರಮೇಶ್‌ಕುಮಾರ್, ರಾಜೇಂದ್ರನ್, ಶ್ರೀರಾಮರೆಡ್ಡಿ ಇದ್ದರು. ಹೀಗೆ ಬರ ಎದುರಿಸುವಂತಹ ಸಂದರ್ಭದಲ್ಲಿ ಏನಾದರೂ ಒಂದು ಮಾತು ಹೇಳಿದರೆ ಅದರಂತೆ ಸರ್ಕಾರ ನಡೆದುಕೊಳ್ಳುತ್ತದೆಯೇ ಎಂದು ಅನುಮಾನದಿಂದ ನೋಡಬೇಕಾಗುತ್ತದೆ. ಕೋಲಾರ, ಚಿತ್ರದುರ್ಗ, ತುಮಕೂರು, ಗುಲ್ಬರ್ಗ ಹಾಗೂ ರಾಯಚೂರು ಬರಕ್ಕೆ ತುತ್ತಾಗುವಂತಹ ಜಿಲ್ಲೆಗಳು. ಅದರ ಜೊತೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಸಾಕಷ್ಟು ಹಣ ಇದೆಯೆಂದು ಪ್ರತಿಯೊಂದು ದಿವಸ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಾರೆ. ಇವತ್ತು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಬೋರ್‌ವೆಲ್ ಕೊರೆದಿದ್ದೇವೆ. ಬೋರ್‌ವೆಲ್ ಕೊರೆಯುವುದು ಜಿಲ್ಲಾಪಂಚಾಯತ್‌ನಿಂದ, ಅದಕ್ಕೆ motor, pump ಹಾಗೂ pipe ಕೊಡುವವರು ಜಿಲ್ಲಾಧಿಕಾರಿಗಳು. ಒಂದು ವರ್ಷವಾಗಿದೆ. ಆಗ ನಮ್ಮ ಜಿಲ್ಲೆಯಲ್ಲಿ ನೀರಿಗೆ ಹಾಹಾಕಾರ ಇರಲಿಲ್ಲ. ಕಾರಣ ಹೋದ ವರ್ಷ ಒಳ್ಳೆಯ ಮಳೆಯಾಗಿತ್ತು. ನಮಗೆ ಕುಡಿಯುವ ನೀರಿಗೆ pump set ಹಾಗೂ pipe ಬೇಕು ಮತ್ತು ಅದಕ್ಕೆ ಬೇಕಾದಂತಹ ಎಲ್ಲಾ ಸಾಮಾನುಗಳು ಬೇಕು. ಅದಕ್ಕೆ ನಮ್ಮಲ್ಲಿ ಸಾಕಷ್ಟು ಹಣ ಇಲ್ಲ. ಅದರ ಜೊತೆಗೆ BESCOM ನವರು 50 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿ deposit ಕಟ್ಟಿದರೆ ಮಾತ್ರ ನಿಮಗೆ connection ಕೊಡುತ್ತೇವೆ, ಇಲ್ಲದಿದ್ದರೆ connection ಕೊಡುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ನನಗೆ ಗೊತ್ತಿದೆ. ನಾನು ಬರ ಪರಿಹಾರದ Cabinet Sub–committee ನಲ್ಲಿ ಇದ್ದೆ. ಈ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳು ನೇರವಾಗಿ, ನೀವು 50 ಸಾವಿರ ಅಥವಾ ಒಂದು ಲಕ್ಷ ರೂಪಾಯಿ ಕಟ್ಟಬೇಕು, ಇಲ್ಲದೇ ಇದ್ದರೆ ನಾವು current ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಕಂದಾಯ ಸಚಿವರು BESCOM ನ ಮೂರು ಜನ Executive Engineers ಮೇಲೆ ಜೋರು ಮಾಡಿ ಬಂದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರಿಗೆ ಆದೇಶ ಇಲ್ಲದೇ ಅವರು ಹೇಗೆ connection ಕೊಡುತ್ತಾರೆ? ಅದನ್ನು ಹೇಳಿದ್ದು.

ಶ್ರೀ ಕೆ. ಶ್ರೀನಿವಾಸಗೌಡ: ಅದಕ್ಕೆ ಸರ್ಕಾರದ ಆದೇಶ ಏನೂ ಇಲ್ಲ. ನಾನು ವ್ಯವಸಾಯಕ್ಕೆ ಬೇಕಾದಂತಹ ನೀರಿನ ಬಗ್ಗೆ ಮಾತನಾಡುತ್ತಿಲ್ಲ. ಕನಿಷ್ಠ

ಕುಡಿಯುವ ನೀರಿಗೆ ಕೂಡ ನಿಮ್ಮ ಸರ್ಕಾರ ಗಮನಹರಿಸಲಿಲ್ಲವೆಂದು ನೇರವಾಗಿ ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಆವತ್ತು ನಮ್ಮಲ್ಲಿ ಕೇವಲ 2 ಕೋಟಿ ರೂಪಾಯಿಗಳು ಇದೆ ಎಂದು ಜಿಲ್ಲಾಧಿಕಾರಿಗಳೂ ಹೇಳಿದರು. ನನ್ನ ಕೋಲಾರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಲ್ಲಿ 16 borewell ಕೊರೆಸಿದ್ದೇವೆ. ಇವತ್ತಿನವರೆಗೂ ಒಂದು ಪೈಸೆ ಹಣ ಬಿಡುಗಡೆ ಮಾಡಲಿಲ್ಲ. ಸುಮಾರು ಒಂದು ಲಕ್ಷ ಚಿಲ್ಲರೆ ಜನಸಂಖ್ಯೆ ಇರುವಂತಹ ಪಟ್ಟಣದಲ್ಲಿ ಇವತ್ತಿಗೂ ಕೂಡ pump set ಗೆ ಹಾಗೂ pipe ಗೆ ಒಂದು ರೂಪಾಯಿ ಕೂಡ ಬಿಡುಗಡೆಯಾಗಲಿಲ್ಲ. ಇನ್ನು ಹಳ್ಳಿಗಳ ಪಾಡೇನು ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಹಳ್ಳಿಗಳಲ್ಲಿ ಜನ ಮಾತ್ರ ನೀರು ಕುಡಿಯುವುದಿಲ್ಲ. ದನ, ಕುರಿ, ಮೇಕೆಗಳಿಗೆ ನೀರು ಬೇಕು. ನಾನು ಚಿಕ್ಕ ಹುಡುಗನಾಗಿದ್ದಾಗ ಹಳ್ಳಿಯಲ್ಲಿ 5–6 ಗಂಟೆಗೆಲ್ಲಾ ನಮ್ಮ ಕಡೆ ಪಿಚಕಕ್ಕಿ, english ನಲ್ಲಿ sparrow ಎಂದು ಹೇಳುವ ಪಕ್ಷಿಗಳು ಸಾವಿರಾರು ಇರುತ್ತಿದ್ದವು, ಅವೂ ಕೂಡ ನೀರು ಇಲ್ಲದೇ ಸತ್ತು ಹೋಗಿವೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಯಾವ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ ಎಂದರೆ ಸಣ್ಣ ಸಣ್ಣ ಹಕ್ಕಿಗಳು ಗಿಡ ಇದ್ದರೆ ರಾತ್ರಿಯೆಲ್ಲಾ ಇರುತ್ತಿದ್ದವು, ಅವೂ ಕೂಡ ಮಂಗಮಾಯವಾಗಿವೆ. ಅಂತಹ ಪರಿಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದು ಹದಿನೈದು ದಿವಸವಾಯಿತು, ಸರ್ಕಾರದಿಂದ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದರೂ ಕೂಡ ಇವತ್ತಿಗೂ ಒಂದು ರೂಪಾಯಿ ಬಿಡುಗಡೆಯಾಗಿಲ್ಲ. ನಿಮ್ಮ Rural Development Secretary ಅಥವಾ Revenue Secretary ಅಥವಾ ನಿಮ್ಮ BESCOM ಅಧಿಕಾರಿಗಳಿಂದ delay ಆಗುತ್ತಿದೆಯಾ? ಸರ್ಕಾರದಲ್ಲಿ ದುಡ್ಡು ಇಲ್ಲವೇ ಕುಡಿಯುವ ನೀರನ್ನು ಕೊಡುವುದಕ್ಕೂ ಕೂಡ ಸರ್ಕಾರಕ್ಕೆ ಶಕ್ತಿ ಇಲ್ಲವೇ ಎಂದು ಕೇಳಬೇಕಾಗುತ್ತದೆ. ಎಲ್ಲಿ ನೋಡಿದರೂ ಕೂಡ ನಾವು ಬಂದಮೇಲೆ Revenue ಅಷ್ಟು ಜಾಸ್ತಿಯಾಗಿದೆ ಇಷ್ಟು ಜಾಸ್ತಿಯಾಗಿದೆ ಎಂದು ನಮ್ಮ Deputy Chief Minister ಹೇಳುತ್ತಲೇ ಇರುತ್ತಾರೆ. ಕನಿಷ್ಠ ಕುಡಿಯುವ ನೀರಿಗೆ ಮೊದಲು ಹಣ ಕೊಡಿ, ಆಮೇಲೆ ಕಾಮಾಗಾರಿಗೆ ಕೊಡಿ. ಕಾಮಗಾರಿಗೆ ಇವತ್ತಲ್ಲ ನಾಳೆ ಕೊಡಿ, ಪರವಾಗಿಲ್ಲ. ನಮ್ಮಲ್ಲಿ ಗುಳೆ ಎದ್ದು ಹೋಗುವಂತಹ ಜನರಿಗೆ ನಾವು request ಮಾಡಿಕೊಳ್ಳುತ್ತೇವೆ. 3 ರೂಪಾಯಿಯಂತೆ ಅಕ್ಕಿ ಕೊಡುತ್ತಿರುವುದರಿಂದ ಜನರಿಗೆ

ಹಳ್ಳಿಗಳಲ್ಲಿ ಸ್ವಲ್ಪ ಕಷ್ಟ ಕಾಣಿಸುತ್ತಿಲ್ಲ. ವಾಸ್ತವಾಂಶವನ್ನು ನಾನು ಮುಚ್ಚಿಟ್ಟುಕೊಳ್ಳುವುದಿಲ್ಲ. ಆದರೆ ಕುಡಿಯುವ ನೀರಿನ್ನು ಕೊಡದಂತಹ ಸರ್ಕಾರಕ್ಕೆ ನಾವೇನು ಹೇಳಬೇಕು, ಏನನ್ನಬೇಕು, ಏನೆಂದು ಕರೆಯಬೇಕು? ಇವತ್ತು ಅದರ ಬಗ್ಗೆ ಚಿಂತನೆ ಮಾಡಬೇಕು. ನಮ್ಮಂಥ ಕೋಲಾರದಂಥ ಬರ ಪೀಡಿತ ಜಿಲ್ಲೆಗೆ ಕುಡಿಯುವ ನೀರಿಗೆ ಹಣ ಕೊಡುವಂತಹ ಶಕ್ತಿ ಸರ್ಕಾರಕ್ಕೆ ಇಲ್ಲದ ಮೇಲೆ ಏಕೆ ನೀವು ನಮ್ಮ ಜಿಲ್ಲೆಗಳಲ್ಲಿ ಸಭೆಗಳನ್ನು ನಡೆಸುತ್ತೀರಿ? ನೀವು ಸಭೆಗಳನ್ನು ನಡೆಸುವಂತಹ ಅಗತ್ಯ ಏನಿದೆ? ಇವತ್ತು ಅಂತಹ ಜಿಲ್ಲೆಗೆ ಕುಡಿಯುವ ನೀರನ್ನು ಕೊಡುವಂಥ ಶಕ್ತಿ ಸರ್ಕಾರಕ್ಕೆ ಇಲ್ಲದ ಮೇಲೆ, ಇಲ್ಲಿ ಏಕೆ ಬಂದು ಸಭೆಗಳನ್ನು ನಡೆಸುತ್ತೀರಿ? ಸಭೆಗಳನ್ನು ನಡೆಸುವ ಅಗತ್ಯ ಏನಿದೆ? ನಾನು ವಿದ್ಯುಚ್ಛಕ್ತಿಯ ಬಗ್ಗೆ ಅಗಲೇ ಹೇಳಿದೆ. ಇವತ್ತಿಗೂ ಬೆಸ್ಕಾಂನವರು ಬಗ್ಗುತ್ತಿಲ್ಲ. ಅವರು ಕನಿಷ್ಠ ಸ್ಕೇರ್‌ಸಿಟಿಯಲ್ಲಿ ಹಾಕುವಂಥ ಬೋರ್‌ವೆಲ್‌ಗಳಿಗೆ, ವಿದ್ಯುಚ್ಛಕ್ತಿ ಒದಗಿಸುತ್ತಿಲ್ಲ. ಹಿಂದೆ ಮಾನ್ಯ ಎಂ.ಪಿ.ಪ್ರಕಾಶ್‌ರವರು ಕ್ಯಾಬಿನೆಟ್ ಸಬ್ ಕಮಿಟಿಯ ಅಧ್ಯಕ್ಷರು ಆಗಿದ್ದರು, ನಾನು ಕೂಡ ಅದರಲ್ಲಿ ಸದಸ್ಯನಾಗಿ ಇದ್ದೆ. ಆಗ ಒಂದು ಆರ್ಡರ್ ಅನ್ನು ಮಾಡಿದ್ದರು. ಸ್ಕೇರ್‌ಸಿಟಿಯಲ್ಲಿ ಬೋರ್‌ವೆಲ್‌ಗಳನ್ನು ಕೊರೆದರೆ, ವಿದ್ಯುಚ್ಛಕ್ತಿಗೆ ಡಿಪಾಸಿಟ್ ಅನ್ನು ಕಟ್ಟುವಂಥಾದ್ದು, ಆಗಬಾರದೆಂದು ಆರ್ಡರ್ ಅನ್ನು ಇಷ್ಯೂ ಮಾಡಿದ್ದರು. ಮಾನ್ಯ ಪ್ರಕಾಶ್‌ರವರೆ, ಅದು ನಮ್ಮ ಗಮನದಲ್ಲಿದೆ. ಅದು ಏನು ಆಗಿದೆ? ಅದನ್ನು ನಿಲ್ಲಿಸಿದ್ದೀರಾ ಅಥವಾ ಅದನ್ನು ಕೊಡುವುದಕ್ಕೆ ಬೆಸ್ಕಾಂನವರು ಏನಾದರೂ ಅಡ್ಡ ಹಾಕುತ್ತಿದ್ದಾರ? ಅಥವಾ ಮಾನ್ಯ ಹೆಚ್.ಡಿ.ರೇವಣ್ಣನವರು, ಹಿಂದೆಯೂ ಕೂಡ ಜಗಳವಾಡುತ್ತಿದ್ದರು. ಅವರು ಆಗ ಇಂಧನ ಸಚಿವರಾಗಿದ್ದರು. ಆಗ ಅವರು ನಮಗೆ ದುಡ್ಡನ್ನೇ ಕೊಟ್ಟಿಲ್ಲ, ಇಪ್ಪತ್ತನಾಲ್ಕು ಕೋಟಿ ರೂಪಾಯಿ ಗಳು ಕೊಟ್ಟಿದ್ದು, ಎಲ್ಲಾ ಮುಗಿದು ಹೋಯಿತೆಂದು ಅವರು ಏನಾದರೂ ಅಡ್ಡ ಹಾಕುತ್ತಿದ್ದಾರಾ? ಇವೆಲ್ಲವನ್ನು ನೀವು ಮಾಡದಿದ್ದರೆ, ನಾವು ಕುಡಿಯುವ ನೀರಿಗೆ ಬಹಳ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಇದನ್ನು ಸರ್ಕಾರ ಮನಗಂಡು, ತಾವು ಇವತ್ತು ಸಭೆಯಲ್ಲಿ ಏನು ರಿಪ್ಲೈ ಕೊಡುತ್ತೀರಿ, ಆ ರಿಪ್ಲೈನಲ್ಲಿ ಜಿಲ್ಲಾವಾರು ಎಷ್ಟೆಷ್ಟು ಹಣವನ್ನು ಕೊಡಲಾಗಿದೆ ಎಂದು ತಿಳಿಸಬೇಕು. ಕೇಂದ್ರ ಸರ್ಕಾರದಿಂದ ಬರ ಪರಿಸ್ಥಿತಿಗೆ ಎಂದು 260 ಕೋಟಿ ರೂಪಾಯಿಗಳು ಬಂದಿದೆಯೆಂಬುದನ್ನು ಕೇಳಿದ್ದೇನೆ. ನೀವು ಕೊಟ್ಟಿರುವುದೆಲ್ಲವನ್ನು ಸೇರಿಸಿದರೆ, ಸುಮಾರು ನೂರು ಚಿಲ್ಲರೆ

ತಾಲ್ಲೂಕುಗಳಲ್ಲಿ ಮಾತ್ರ ಬರ ಬಂದಿದೆ. ಇನ್ನು ಕೇಂದ್ರ ಸರ್ಕಾರದಿಂದ ಬಂದಿರುವ ಹಣವೇ ನಿಮ್ಮ ಹತ್ತಿರ ಇದೆ. ನೀವು ರಾಜ್ಯದಿಂದ ಹಣವನ್ನು ಏನು ಕೊಡಬೇಕಾದ್ದು ಇಲ್ಲ. ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು ಕೊಡುವುದಕ್ಕೆ ನಿಮಗೆ ಏನು ಕಷ್ಟ? ಇದನ್ನು ಕೂಡ ನಾನು ಕೇಳಲಿಚ್ಛಿಸುತ್ತೇನೆ. ಇವತ್ತು ಕೃಷಿ ಚಟುವಟಿಕೆಗಳ ಬಗ್ಗೆ ಹೇಳುವುದಾದರೆ, ನಮಗೆ ಯಾವುದೇ ನದಿಗಳು ಇಲ್ಲ. ನಾನು ಬಹಳ ಸಾರಿ ಈ ಬಗ್ಗೆ ಕೇಳುತ್ತಿದ್ದೇನೆ., ನದಿಯ ಕೆಳಗಡೆ ಇರುವಂಥ ರೈತರಿಗೆ, ಒಂದು ಎಕರೆಗೆ ಒಂದು ವರ್ಷಕ್ಕೆ 300 ರೂಪಾಯಿಗಳನ್ನು ಕೊಡುತ್ತೀರಿ. ನಾವು ಒಂದು ಬೋರ್‌ವೆಲ್ ಅನ್ನು ಕೊರೆದು ಮೋಟರ್ ಹಾಕಿ ನೀರನ್ನು ಹೊರಗೆ ತೆಗೆಯಬೇಕೆಂದರೆ, ಎರಡು ಲಕ್ಷ ರೂಪಾಯಿಗಳು ಬೇಕು. ನಾವು 300 ರೂಪಾಯಿಗಳನ್ನು ಕೊಡುತ್ತೇವೆ. ನಮಗೂ free ಆಗಿ ಬೋರ್‌ವೆಲ್‌ಗಳನ್ನು ಹಾಕಿ ಕೊಡಿ, ನಮಗೂ free ಯಾಗಿ ಪವರ್ ಕೊಡಿಸಿ, ಕರೆಂಟ್ ಚಾರ್ಜ್ ಅನ್ನು ನೀವೇ ಕಟ್ಟಿಸಿ. ನೀವೇ ಮಂತ್ರಿಗಳಾಗಿದ್ದಾಗ, ಏಕೆ ಮಾಡಲಿಲ್ಲವೆಂದು ನೀವು ಕೇಳಬಹುದು. ಆವತ್ತು ನಾನು ಮಂತ್ರಿಯಾಗಿ ಇದನ್ನೇ ಹೇಳಿದ್ದೆ. ಇವತ್ತು ನದಿ ಕೆಳಗಡೆ ಇರುವ ರೈತರು, ಕೂಡ ರೈತರೇ. ಅವರ ಮೇಲೆ ನಾನು ಏನು ಹೇಳುವುದಿಲ್ಲ. ಆದರೆ ಅವರಿಂದ 300 ರೂಪಾಯಿಗಳನ್ನು ತೆಗೆದುಕೊಳ್ಳುತ್ತೀರಿ. ನಾವೂ ಕೂಡ ರೈತರು, ಅದು ಕೋಲಾರ ಜಿಲ್ಲೆಯವರು ಇರಬಹುದು, ಬೆಂಗಳೂರು ಗ್ರಾಮಾಂತರದವರು ಇರಬಹುದು, ತುಮಕೂರು ಜಿಲ್ಲೆಯವರು ಇರಬಹುದು, ಚಿತ್ರದುರ್ಗದವರು ಇರಬಹುದು, ಇನ್ನು ಉಳಿದ ಬಯಲು ಸೀಮೆ ಪ್ರದೇಶದ ಜನರು ಇರಬಹುದು. ನಮಗೂ ಕೂಡ ಒಂದು ಬೋರ್‌ವೆಲ್‌ಗೆ 300 ರೂಪಾಯಿಗಳನ್ನು ತೆಗೆದುಕೊಂಡು, ನೀವು ಬೋರ್‌ವೆಲ್ ಅನ್ನು ಹಾಕಿಕೊಡಬೇಕು, ಕರೆಂಟ್ ಅನ್ನು ಕೊಡಬೇಕು, ಆ ಕರೆಂಟ್ ಚಾರ್ಜ್ ಅನ್ನು ನೀವು ಕಟ್ಟಬೇಕು. ಅದನ್ನು ನೀವು ನಮಗೂ ಕೊಡಿ. ಅಲ್ಲಿ ಇರುವವರು ಮಾತ್ರ ರೈತರು, ನಾವು ರೈತರಲ್ಲವಾ? ನಾವು ಏನು ವ್ಯವಸಾಯವನ್ನು ಮಾಡುವುದಿಲ್ಲವಾ? ನಮ್ಮ ರೈತರು ಬಹಳ ಕಷ್ಟಪಟ್ಟು ವ್ಯವಸಾಯ ಮಾಡುತ್ತಾರೆ. ಯಾವುದಾದರೂ ಯೂನಿವರ್ಸಿಟಿಯಲ್ಲಿ ಬಿತ್ತನೆ ಬೀಜ, ಅದು ಇನ್ನು ಅನೌನ್ಸ್ ಆಗುವ ಸ್ಟೇಜ್‌ನಲ್ಲಿ ಇರುವಾಗಲೇ ನಮ್ಮ ಕೋಲಾರ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ನಮ್ಮಲ್ಲಿ ಅಷ್ಟು ಮುಂದುವರೆದ ರೈತರು ಇದ್ದಾರೆ, ಗ್ರಹಚಾರಕ್ಕೆ ನಮಗೆ ನೀರು ಇಲ್ಲ. ನಮಗೆ ನೀರು ಇದ್ದರೆ, ಕರೆಂಟ್ ಇಲ್ಲ. ಇವತ್ತು ಬರ ಜಿಲ್ಲೆಗಳಲ್ಲಿ ಇಂತಹ

ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿದೆ. ಇವತ್ತು ಈ ಬರವನ್ನು ಶಾಶ್ವತವಾಗಿ ಹೋಗಲಾಡಿಸಲು ನೀವು ಏನು ಕ್ರಮಗಳನ್ನು ಮಾಡಿದ್ದೀರಿ? ನಾನು ಆಗಲೇ ಹೇಳಿದ್ದು ನೀವು ಆವತ್ತಿಗೆ ಒಂದಷ್ಟು ಹಣವನ್ನು ಬಿಡುಗಡೆ ಮಾಡುವುದು, ಅಷ್ಟು ಕೆಲಸವನ್ನು ಕೊಡುವಂಥಾದ್ದು, ಕೇಂದ್ರ ಸರ್ಕಾರದ ಕಡೆಗೆ ಮುಖವನ್ನು ಹಾಕುವುದು. ನಾನು ಈ ಮಾತನ್ನು ಯಾವ ಸರ್ಕಾರವಾಗಲೀ ಹೇಳಲಿಚ್ಛಿಸುತ್ತೇನೆ. ಕೇಂದ್ರ ಸರ್ಕಾರದೆಡೆಗೆ ಮುಖವನ್ನು ಹಾಕಿ ಮಾತನಾಡುವುದನ್ನು ಬಿಟ್ಟು, ನಮ್ಮಲ್ಲೇ 500 ಕೋಟಿ ರೂಪಾಯಿಗಳನ್ನು ಇಡಿ. ಇಂತಹ ಅತಿವೃಷ್ಟಿ, ಅನಾವೃಷ್ಟಿ ಬಂದಾಗ, ಕೇಂದ್ರ ಸರ್ಕಾರದಿಂದ ಹಣ ಬರುವುದಕ್ಕೆ ನೀವು ಕಾಯಬಾರದು. ಈ ಹಣವನ್ನು ಖರ್ಚು ಮಾಡುವ ಶಕ್ತಿ ಇರಬೇಕು. ನಾನು ಕಳೆದ ಬಾರಿ ಸಹ ಈ ಕಡೆಗೆ ಕುಳಿತ್ತಿದ್ದೆ, ಮಾನ್ಯ ಎಸ್.ಎಂ.ಕೃಷ್ಣರವರು ಕುಳಿತಿದ್ದರು. ಆಗ ನಾನು ರೈತರು ಬೆಳೆದ ಬೆಳೆಗಳು, ಅವು Maize ಇರಬಹುದು, ಭತ್ತ ಇರಬಹುದು, ಇವುಗಳ ಬೆಲೆ ಬಹಳ ಹೆಚ್ಚಾಯಿತು. ಅದಕ್ಕೆ ನಿಮ್ಮ ಸಲಹೆ ಏನು ಎಂದು ಆಗಿನ ಕೃಷಿ ಮಂತ್ರಿಯವರು ನನ್ನನ್ನು ಕೇಳಿದರು. ಅದಕ್ಕೆ ಒಂದು ಅವರ್ತ ನಿಧಿಯನ್ನು ತೆಗೆಯಿರಿ, ಎಂದು ನಾನು ಹೇಳಿದೆ. ಮೊದಲು ನೂರು ಕೋಟಿ ರೂಪಾಯಿಗಳನ್ನು ಇಡಿ, APMC Actನಲ್ಲಿ ಎಲ್ಲಾ ಎ.ಪಿ.ಎಂ.ಸಿ.ಗಳಲ್ಲೂ ಇಷ್ಟು ಪರ್ಸೆಂಟ್ ಎಂದು ರೈತರು ಬೆಳೆದ ಬೆಳೆಗೆ ದುಡ್ಡನ್ನು ಕೊಡಬೇಕೆಂದು ರಿಸರ್ವ್ ಫಂಡ್ ಇದೆ. ಅದನ್ನು ಯಾವ ಸರ್ಕಾರದವರು , ಹೇಳಿದ್ದು ಅಲ್ಲ. ಅದನ್ನು ನಾನು ಹೇಳಿದ್ದು. ಆ ದಿವಸವೇ ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಅನ್ನು ತೆಗೆದುಕೊಂಡು, ಬೆಳಿಗ್ಗೆ ಅದು ಪತ್ರಿಕೆಗಳಲ್ಲಿ ಬಂತು.

ಉಪಾಧ್ಯಕ್ಷರು: ಮಾನ್ಯ ಕೆ. ಶ್ರೀನಿವಾಸ ಗೌಡರೆ, ಈಗ ಸರ್ಕಾರದಿಂದ 1.30 ಗಂಟೆಗೆ ಉತ್ತರ ಕೊಡುವುದು ಇದೆ. ಇನ್ನು ಇಬ್ಬರು, ಮೂರು ಸದಸ್ಯರು ಮಾಡನಾಡುವವರು ಇದ್ದಾರೆ. ತಾವು ಆದಷ್ಟು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಉಪಾಧ್ಯಕ್ಷರೆ, ತಾವು ಹೀಗೆ ಹೇಳಿದರೆ ಹೇಗೆ? ನನಗೆ ಕನಿಷ್ಠ ಎರಡು, ಮೂರು ಗಂಟೆಗಳ ಕಾಲಾವಕಾಶ ಬೇಕಾಗುತ್ತದೆ.

ಉಪಾಧ್ಯಕ್ಷರು: ಇನ್ನು ಮುಂದೆ ಸಾಕಷ್ಟು ವಿಷಯಗಳು ಇವೆ, ತಾವು ಆಗ ಮಾತನಾಡಬಹುದು. ಇದೇ ಕೊನೆಯಾಗುವುದಿಲ್ಲ. ಇವತ್ತು ಶುಕ್ರವಾರ

ಬೇರೆ ಆಗಿದೆ. ನಿಮಗೂ ಗೊತ್ತಿದೆ, ಈ ದಿವಸ ಏಕೆ ಅರ್ಜೆಂಟ್ ಎಂಬುದು ಗೊತ್ತಿದೆ. ಸರ್ಕಾರದವರು 1.30 ಗಂಟೆಗೆ ಉತ್ತರವನ್ನು ಕೊಡುತ್ತಾರೆ. ಇನ್ನು ಇಬ್ಬರು, ಮೂರು ಸದಸ್ಯರು ಮಾತನಾಡಬೇಕೆಂದು ಕೈ ಎತ್ತುತ್ತಿದ್ದಾರೆ. ಅವರಿಗೂ ಐದು ನಿಮಿಷಗಳಂತೆ ಅವಕಾಶವನ್ನು ಕೊಟ್ಟರೆ, ಅರ್ಧ, ಮುಕ್ಕಾಲು ಗಂಟೆಯಾಗುತ್ತದೆ. ನಿಮಗೂ ಇನ್ನೂ ಮುಂದೆ ಮಾತನಾಡುವುದಕ್ಕೆ ವಿಷಯಗಳು ಇವೆ. ಆಗ ತಾವು ಮಾತನಾಡಿ, ಈಗ ದಯವಿಟ್ಟು ಇನ್ನು ಐದು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ತಾವು ದಯಮಾಡಿ ಸ್ವಲ್ಪ co–operate ಮಾಡಿ.

ಶ್ರೀ ಕೆ.ಶ್ರೀನಿವಾಸ ಗೌಡ: ಅಯಿತು, ಆದಷ್ಟು ಕಡಿಮೆ ಮಾಡುತ್ತೇನೆ.

ಉಪಾಧ್ಯಕ್ಷರು: ಕಡಿಮೆ ಮಾಡುವುದಲ್ಲ, ಇನ್ನು ಐದು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಕೆ.ಶ್ರೀನಿವಾಸ ಗೌಡ: ಇನ್ನು ಪಡಿತರ ಚೀಟಿಗಳ ಬಗ್ಗೆ ಹೇಳುವುದಾದರೆ, ಕೆ.ಜಿ. ಅಕ್ಕಿಗೆ 3ರೂಪಾಯಿಗಳಂತೆ ಬಂದ ಮೇಲೆ ಪರಿಸ್ಥಿತಿ ಏನು ಆಗಿದೆಯೆಂದರೆ, ನಾನು ಪ್ರತಿ 6 ತಿಂಗಳಿಗೊಮ್ಮೆ ಪ್ರತಿ ಹಳ್ಳಿಗೂ ಹೋಗುತ್ತೇನೆ. ಒಂದು ಹಳ್ಳಿಗೆ ಹೋಗಿದ್ದಾಗ ಈ ಪಡಿತರ ಚೀಟಿಗೆ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಜೊತೆಯಲ್ಲಿ ಇದ್ದರು. ಆಗ ನಮ್ಮ ಬಳಿಗೆ ಒಬ್ಬನು ಮಚ್ಚನ್ನು ಹಿಡಿದುಕೊಂಡು ಬಂದ, ಅವನು ಈ ಸೆಕ್ರೆಟರಿಯನ್ನು ಕತ್ತರಿಸಿಬಿಡುತ್ತೇನೆಂದು ಹೇಳಿದನು, ಏಕೆಂದರೆ ಅವನು ರಿಪೋರ್ಟ್‌ನಲ್ಲಿ ಸುವೇಗವಿದೆಯೆಂದು ಬರೆದಿದ್ದಾನೆಂದು ಹೇಳಿದ. ನಾವು ಎಂತಹ ಪರಿಸ್ಥಿತಿಯನ್ನು ಹಳ್ಳಿಗಳಲ್ಲಿ ಎದುರಿಸಿದ್ದೇವೆಂದರೆ, ನಮ್ಮ ಸರ್ಕಾರವಿದ್ದಾಗಲೇ, ಒಂದು ಕೆ.ಜಿ. ಅಕ್ಕಿಯನ್ನು 3 ರೂಪಾಯಿಗಳಿಗೆ ಕೊಡಬೇಕೆಂಬ ತೀರ್ಮಾನವನ್ನು ಮಾಡಿದೆ. ಆದರೆ ಅದನ್ನು ಫಲಾನುಭವಿಗಳಿಗೆ ಕೊಡುವಾಗ, ಅದಕ್ಕೆ ಆನೇಕ ಕಂಡೀಷನ್‌ಗಳು ಇವೆ. ಅವರಿಗೆ ಬೋರ್‌ವೆಲ್ ಇರಬಾರದು, ಮೋಟಾರ್ ಸೈಕಲ್ ಅನ್ನು ಇಟ್ಟುಕೊಂಡಿರಬಾರದು. ಇದಕ್ಕೆ ಕೇಂದ್ರ ಸರ್ಕಾರದ ಹಣ ಇದ್ದರೂ ಕೂಡ, ರಾಜ್ಯ ಸರ್ಕಾರದಲ್ಲೂ ಹಣ ಇದೆಯಲ್ಲಾ, ನೀವು ಚೇಂಜ್ ಮಾಡಿ, ನೀವು ಕೇಂದ್ರ ಸರ್ಕಾರ ಹೇಳಿದ್ದೆ, ಕೇಳಬೇಕೆಂದು ಇದೆಯೇನು? ನಮ್ಮ ಕೈಯಲ್ಲಿ ಸರ್ಕಾರ ನಡೆಯುವಾಗ, ಪ್ರಜಾ ತಂತ್ರದಲ್ಲಿ ನಿಮಗೂ ಅಧಿಕಾರವಿದೆ. ನೀವು ಅದನ್ನು ಚೇಂಜ್ ಮಾಡಬಹುದು. ಈ ಪಡಿತರ ಚೀಟಿಯಲ್ಲಿ ಆದಂತಹ ಅವ್ಯವಹಾರ ಹಳ್ಳಿಗಾಡಿನಲ್ಲಿ ಒಂದು ಕಡೆ, ಪಟ್ಟಣಗಳಲ್ಲಿ ಎಫ್.ಡಿ. (Fair Shop

Depot)ದವರು ಪಡಿತರ ಚೀಟಿಗಳನ್ನು ಹಂಚುವವರು. ಇವತ್ತು ಎಲ್ಲಿ ಪಟ್ಟಣಗಳು ಇವೆ, ಆ ಪಟ್ಟಣಗಳಲ್ಲಿರುವಂತಹ ಎಫ್.ಡಿ.ಗಳು ಪಡಿತರ ಚೀಟಿಗಳನ್ನು ಹಂಚುವವರು. ಅದನ್ನು ಅಧಿಕಾರಿಗಳು ಹಂಚುವುದಿಲ್ಲ, ಏನಾದರೂ ಬಡವರಿಗೆ 100 ರೂ.ಗಳು, 200 ರೂ. ಗಳು ಬೇಕೆಂದರೆ, ಆ ಪಡಿತರ ಚೀಟಿಯನ್ನು ಅವನು ಇಟ್ಟುಕೊಂಡು ಅವನಿಗೆ ಹಣವನ್ನು ಕೊಡುವುದು. ಅಲ್ಲಿಗೆ ಅವನಿಗೆ ಬರುವ ಎಲ್ಲಾ ಸಾಮಗ್ರಿಗಳು ಎಫ್.ಡಿ.ಯವರಿಗೆ ಆಗುತ್ತದೆ. ಎಲ್ಲೋ ಒಂದೊ, ಎರಡೊ, ಸಹಕಾರ ಸಂಘಗಳು ನಡೆಯುತ್ತಿದ್ದರೆ, ಅವುಗಳ ಮೇಲೆ ನಮ್ಮ ಅಧಿಕಾರಿಗಳ ಕಣ್ಣು ಬೀಳುತ್ತವೆ. Food & Civil Supply ಇಲಾಖೆಯವರು ಹೇಗೆಂದರೆ, ಎಲ್ಲಾದರೂ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಒಂದೆರಡು ದಿವಸ ಆಹಾರ ಧಾನ್ಯಗಳನ್ನು ಎತ್ತಿದರೆ, ಆಗಲೇ KSFCಗೆ ಆಹಾರ ಧಾನ್ಯಗಳನ್ನು ತೆಗೆಯುವುದಕ್ಕೆ ಕಳುಹಿಸಿ ಬಿಡುತ್ತಾರೆ. ಅವರಿಗೆ ಇಲ್ಲಿ ಏನು ಸಿಗುವುದಿಲ್ಲ, ಆ ಕಡೆ ಸಿಗುತ್ತದೆ. ಆ ಕಡೆ ಮಣ್ಣು ಸಿಗುತ್ತದೆಂದು, ಆ ಕಡೆಗೆ ನೋಡುತ್ತಾರೆ. ಎಲ್ಲೆಲ್ಲಿ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ, ಅವುಗಳಿಗೆ ತೊಂದರೆಯಾಗದಂತೆ ಮಾಡಬೇಕು, ಮತ್ತೆ ಅವರ ಮೇಲೆ ಕಡಿವಾಣವನ್ನು ಹಾಕಬೇಕು. ನಾನು ಕಡಿವಾಣ ಹಾಕಬಾರದೆಂದು ಹೇಳುವುದಿಲ್ಲ. ಇದನ್ನು ಮಾಡಬೇಕೆಂದು ಹೇಳುತ್ತೇನೆ. ನಾವು ಹಳ್ಳಿಗೆ ಹೋದರೆ ಪ್ರತಿಯೊಬ್ಬರು ಕೇಳುತ್ತಾರೆ. ಅದರಲ್ಲೂ ನಮ್ಮಂಥ ಜಿಲ್ಲೆಯ ಹಳ್ಳಿಗಳಲ್ಲಿ, ಇದಕ್ಕೆ ಕಾರಣವೇನೆಂದರೆ ಒಂದು ಕಡೆ ಬರ ಇದೆ, ಬೋರ್‌ವೆಲ್‌ಗಳು ಬತ್ತಿಹೋಗಿವೆ. ನಿನ್ನ ಹತ್ತಿರ ಎರಡು ಬೋರ್‌ವೆಲ್‌ಗಳು ಇವೆಯೆಂದು ಹೇಳಿದರೆ, ಬನ್ನಿ ನೋಡಿ ಎರಡು ಬೋರ್‌ವೆಲ್‌ಗಳು ಬತ್ತಿ ಹೋಗಿವೆಯೆಂದು ಹೇಳುತ್ತಾರೆ. ಇಂತಹ ಪರಿಸ್ಥಿತಿ ಇದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರನ್ನು ಎಬ್ಬಿಸಿ. ಮಾನ್ಯ ಶ್ರೀರಾಮರೆಡ್ಡಿಯವರು ಜಾಸ್ತಿ ನಿದ್ದೆ ಹೋಗುತ್ತಿದ್ದಾರೆ.

ಶ್ರೀ ಎಸ್.ರಾಜೇಂದ್ರನ್: ಪಡಿತರ ಚೀಟಿ ಇಲ್ಲ, ಊಟದ ವ್ಯವಸ್ಥೆ ಇಲ್ಲ, ನಿದ್ದೆ ಬರದೇ ಬೇರೆ ಇನ್ನು ಏನು ಬರುವುದು? ಊಟವಿಲ್ಲವೆಂದರೆ ನಿದ್ರೆ ಬಂದೇ ಬರುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಇಷ್ಟು ಹೊತ್ತಿನಲ್ಲಿ ಏಕೆ ನಿದ್ರೆ ಮಾಡಿದರೋ, ನನಗೆ ಗೊತ್ತಾಗಲಿಲ್ಲ.

ಶ್ರೀ ಎಸ್.ರಾಜೇಂದ್ರನ್: ಆಯಿತು, ಅವರ ರೂಮಿಗೆ ಹೋಗಿ ಕೇಳಿ.

ಉಪಾಧ್ಯಕ್ಷರು: ಮಾನ್ಯ ಬಾಲಕೃಷ್ಣರವರೇ, ಮಾನ್ಯ ಶ್ರೀರಾಮರೆಡ್ಡಿಯವರು ನಿದ್ದೆ ಮಾಡುತ್ತಿಲ್ಲ, ಏನೋ ಬೇರೆ ಯೋಚನೆ ಮಾಡುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ, ಪಡಿತರ ಚೀಟಿಗಳನ್ನು ಜಿಲ್ಲಾಧಿಕಾರಿಗಳನ್ನು ಕರೆದು ನೀವು ಇದನ್ನು ಇಷ್ಟು ಕಡಿಮೆ ಮಾಡಬೇಕೆಂಬ ಆದೇಶವನ್ನು ಕೊಟ್ಟಿದ್ದಾರೆ. ಅದು ಶೇ.30, ಶೇ.40 ಎಷ್ಟು ಎಂಬುದು ಗೊತ್ತಿಲ್ಲ. ಮಾನ್ಯ ಗೋವಿಂದ ಎಂ. ಕಾರಜೋಳರವರು ಇದ್ದಿದ್ದರೆ ಹೇಳುತ್ತಿದ್ದರು. ಅವರು ಸದನದಲ್ಲಿ ಇಲ್ಲ. ಶೇ.40ರಷ್ಟನ್ನು ಕಡಿತ ಮಾಡಿ ಹಳ್ಳಿಗಳಲ್ಲಿ ಕೊಡಿ ಎಂದು ಹೇಳಿದ್ದಾರೆ, ಅಂದರೆ ಅಲ್ಲಿ ನೂರು ಫ್ಯಾಮಿಲಿ ಇದ್ದರೆ, ಅವರು 40 ಜನರು ಬಡವರಾಗಿದ್ದರೂ ಇಲ್ಲ. ಈ ವ್ಯವಸ್ಥೆಯಲ್ಲಿ ಹೇಗಾಗಿದೆ ಎಂದರೆ ಚೆನ್ನಾಗಿರುವವನಿಗೆ BPL card ಸಿಕ್ಕಿದೆ, ನಿಜವಾಗಿ ಯಾರು ಬಡವನಾಗಿದ್ದಾನೆ ಅವನಿಗೆ APL card ಸಿಕ್ಕಿದೆ. ಎಂಥ ವ್ಯವಸ್ಥೆ ಇದು? ಕಾರಜೋಳರವರು ಹೊಸದಾಗಿ ಮಂತ್ರಿಯಾಗಿ ಬರುತ್ತಲೇ, "ನಾವು ಎಲ್ಲವನ್ನು ಸರಿಪಡಿಸುತ್ತೇವೆ, ಎಲ್ಲೆಲ್ಲಿ ಅಗತ್ಯವಿದೆ ಅಲ್ಲಿ ಕೊಡುತ್ತೇವೆ" ಎಂದು ಹೇಳಿದರು. ಎಲ್ಲ ಮಂತ್ರಿಗಳು ನಿಮ್ಮನಿಮ್ಮ ಆಸನದಲ್ಲಿ ನಿಂತುಕೊಂಡು ಹೇಳಿ, ನಿಮ್ಮ ಕ್ಷೇತ್ರದಲ್ಲಿ ಎಲ್ಲ ಬಡವರಿಗೆ BPL card ಸಿಕ್ಕಿದೆಯೇ? ನಿಮಗೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ನೀವು ಸರ್ಕಾರದಲ್ಲಿದ್ದೀರಿ. ಹಾಗಾಗಿ ನೀವು ಬಾಯಿ ಮುಚ್ಚಿಕೊಳ್ಳಬೇಕಾಗುತ್ತದೆ. ಹೌದಲ್ಲವೇ ಚಲುವರಾಯಸ್ವಾಮಿಯವರೇ.

ಶ್ರೀ ಎನ್. ಚಲುವರಾಯಸ್ವಾಮಿ: ನಮಗೆ ಕಲಿಸಿದ್ದೆಲ್ಲ ನೀವೇ ಅಲ್ಲವೇ. ನೀವು Agriculture Minister ಆಗಿದ್ದಾಗ ಎಷ್ಟು ಸ್ಪೀಡ್‌ನಲ್ಲಿ ಮಾತನಾಡುತ್ತಿದ್ದಿರಿ, ಹೊರಗಡೆಗೆ ಹೋದಾಗ ಹೇಗಿದ್ದೀರಿ ಎನ್ನುವುದು ಗೊತ್ತು. ಅದನ್ನು ನಾವೂ ಅನುಸರಿಸಬೇಕಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ: ಈಗಲೂ ಅದೇ ಸ್ಪೀಡ್ ಇದೆ. ಸ್ಪೀಡನ್ನು ನಾನು ಯಾವಾಗಲೂ ಕಡಿಮೆ ಮಾಡಿಕೊಳ್ಳುವುದೇ ಇಲ್ಲ. ನಿಮ್ಮ ಬಸ್ಸಿನ ಸ್ಪೀಡಿಗಿಂತಲೂ ರೈಲು ಓಡಿಸಲು ನಾನು ರೆಡಿ ಇಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ: ನಾವು ಶ್ರೀನಿವಾಸಗೌಡರಷ್ಟು ಆವೇಶದಲ್ಲೂ ಮಾತನಾಡುವುದಿಲ್ಲ, ಶ್ರೀನಿವಾಸಗೌಡರಷ್ಟು ಹಿಂದಕ್ಕೂ ಹೋಗುವುದಿಲ್ಲ. ಇದ್ದುದರಲ್ಲಿ ಸ್ವಲ್ಪ ಉತ್ತಮವಾಗಿ ಹೋಗುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಇಂಥ ಪರಿಸ್ಥಿತಿಯಲ್ಲಿ ನಾನು ಸರ್ಕಾರಕ್ಕೆ ಕಳಕಳಿಯಾಗಿ ಪ್ರಾರ್ಥನೆ ಮಾಡುವುದೇನೆಂದರೆ, ಇದರಲ್ಲಿ percentage fix ಮಾಡಬಾರದು. ಬಡವರಾಗಿರುವವರಿಗೆ ನೀವು BPL card ಅನ್ನು ಕೊಡಬೇಕಾಗುತ್ತದೆ. ಇವರು 40% ಕಡಿಮೆ ಮಾಡಿದರೆ, ಆಗ ಬಹಳಷ್ಟು ಜನ ಬಡವರು eliminate ಆಗಿಹೋಗುತ್ತಾರೆ. ಆಗ ಅವರ ಶಾಪ ನಿಮ್ಮ ಸರ್ಕಾರಕ್ಕೆ ತಗಲುತ್ತದೆ. ಇದನ್ನೂ ಕೂಡ ನೀವು ಮರೆಯಬಾರದು. ಬಡವರ ಶಾಪ ಅಷ್ಟು ಸುಲಭವಾದಂಥಾದ್ದಲ್ಲ. ಆದ್ದರಿಂದ, 40% ಕಡಿಮೆ ಮಾಡುವುದು ಏನಿದೆ, ಅದನ್ನು ತೆಗೆದು ಬಡವರು ಎಷ್ಟೇ ಇರಲಿ ಅವರಿಗೆ ಕೊಡುವಂಥ ವ್ಯವಸ್ಥೆಯಾಗಬೇಕು. ಪಡಿತರ ಚೀಟಿಯಲ್ಲಿ ಕೆಲವು ಅಧಿಕಾರಿಗಳು ಅವ್ಯವಹಾರವನ್ನು ನಡೆಸುತ್ತಾರೆ. ಅವರ ಮೇಲೆ ಕಠಿಣವಾದಂಥ ಕ್ರಮವನ್ನು ನೀವು ತೆಗೆದುಕೊಳ್ಳದಿದ್ದರೆ, ನಾವೆಲ್ಲರೂ ಸೇರಿ ಬಡವರಿಗೆ ಮೋಸ ಮಾಡಿದ ಹಾಗೆ ಆಗುತ್ತದೆ ಎನ್ನುವಂಥಾದ್ದನ್ನು ಈ ಸರ್ಕಾರ ಅರಿತುಕೊಳ್ಳಬೇಕು ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು, ಸಹಕಾರಿ ಸಂಘಗಳಿಂದ ರೈತರು ತೆಗೆದುಕೊಂಡಿರುವ ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಹೇಳುವುದಾದರೆ, ರೈತರು ಕಮರ್ಷಿಯಲ್ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ನೀವು ಮನ್ನಾ ಮಾಡಿದರೆ ನಾನು ಬಹಳ ಸಂತೋಷಪಡುತ್ತೇನೆ. ಅದರಿಂದ ರೈತರಿಗೆ ಅನುಕೂಲವಾಗಿದ್ದರೆ, ನಾನೂ ಒಬ್ಬ ರೈತನಾಗಿ ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ, ಮುಂದಿನ ವರ್ಷಕ್ಕೆ ಅದಕ್ಕೆ alternative ಆಗಿ ನೀವು ಏನು ತೀರ್ಮಾನ ಮಾಡಿದ್ದೀರಿ? ಅದಕ್ಕೆ parallel ಆಗಿ ಹೋಗಲಿ. ಮುಂದಿನ ವರ್ಷ ಸಹಕಾರಿ ಸಂಘಗಳೆಲ್ಲ ಬೀಗ ಹಾಕಿಕೊಂಡು ಹೋಗುತ್ತವೆ. ಇದಕ್ಕೆ parallel ಆಗಿ ನೀವು ಏನು ಮಾಡಿದ್ದೀರಿ ಎಂದು ಹೇಳಿ. ಹೋದ ಸಾರಿ

ನಾವು ಸುಸ್ತಿ ಬಡ್ಡಿ ಮನ್ನಾ ಮಾಡಿದ್ದರಲ್ಲೇ ಇನ್ನೂ 233 ಕೋಟಿ ರೂಪಾಯಿಗಳು ಲ್ಯಾಂಡ್ ಬ್ಯಾಂಕಿಗೇ ಬರಬೇಕು. ಅಪೆಕ್ಸ್ ಬ್ಯಾಂಕ್‌ಗೆ ಎಷ್ಟು ಬರಬೇಕು ಎನ್ನುವುದು ನನ್ನ ಹತ್ತಿರ ಲೆಕ್ಕ ಇಲ್ಲ. ಅದು ಆಗಿ ಸುಮಾರು ಒಂದು ವರ್ಷವಾಯಿತು. ಇವತ್ತಿಗೂ ಕೂಡ ಅದರ ಹಣವನ್ನು ಕೊಟ್ಟಿಲ್ಲ. ಪರಿಸ್ಥಿತಿ ಹೀಗಿರುವಾಗ, ಇವತ್ತು ನೀವು ಸಾವಿರಾರು ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವ ಮಾತನ್ನಾಡುತ್ತಿದ್ದೀರಿ. ಅದು ನಿಮ್ಮಿಂದ ಸಾಧ್ಯವೇ? ನಿಮಗೆ ಬರುವಂಥ ರೆವಿನ್ಯೂನಲ್ಲಿ ಇದನ್ನು ಕೊಡಲಿಕ್ಕೆ ಸಾಧ್ಯವೇ? ಜಮೀನು ಮಾರಿ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಬೆಂಗಳೂರಿನ ಸುತ್ತಮುತ್ತ ಜಮೀನನ್ನು ಕಬಳಿಕೆ ಮಾಡಿಕೊಂಡಿರುವವರು ಎಂಥ ದೊಡ್ಡವರು, ಮೊಂಡ ಗಿರಾಕಿಗಳು ಎಂದರೆ ನೀವ್ಯಾರೂ ಅಲ್ಲಿಗೆ ಮೂಗು ಹಾಕಲೂ ಕೂಡ ಆಗುವುದಿಲ್ಲ. ಅವು ದೊಡ್ಡದೊಡ್ಡ ತಿಮಿಂಗಿಲಗಳು. ನೀವು ಅಲ್ಲಿಗೇನಾದರೂ ಹೋದರೆ ಅವು ನಿಮ್ಮನ್ನೂ ಒಳಗೆ ಹಾಕಿಕೊಂಡು ತಿಂದು ಹಾಕಿಬಿಡುತ್ತವೆ. ಇದನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ಯಾರು ಸರ್ಕಾರದ ಗಮನಕ್ಕೆ ತಂದರೋ, ಜಮೀನುಗಳನ್ನು ಮಾರಿ ಅದರಿಂದ ಬರುವ ಹಣದಿಂದ ಬಡ್ಡಿ ಮನ್ನಾ ಮಾಡಬಹುದು, ಅಸಲು ಮನ್ನಾ ಮಾಡಬಹುದು ಎನ್ನುವ ವಿಚಾರ ಯಾರ ತಲೆಯಲ್ಲಿ ಬಂತೋ ಗೊತ್ತಿಲ್ಲ. ಅಥವಾ ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ. ಈ ಎರಡೂ ಪಕ್ಷಗಳವರು, ಅವರೆಲ್ಲಿ ಒಳ್ಳೆಯ ಹೆಸರು ತೆಗೆದು ಕೊಳ್ಳುತ್ತಾರೋ ಎಂದು ಇವರು ಮೊದಲು ಹೇಳುವುದು, ಇವರೆಲ್ಲಿ ಒಳ್ಳೆಯ ಹೆಸರನ್ನು ತೆಗೆದು ಕೊಳ್ಳುತ್ತಾರೋ ಎಂದು ಅವರು ಹೇಳುವಂಥಾದ್ದು ಆಗಿದೆ ಎನ್ನುವುದು ನನ್ನ ಭಾವನೆ. ನಾನು ಕಳಕಳಿಯಿಂದ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಿಮಗೆ ಅಂಥ ಕಳಕಳಿ ರೈತರ ಬಗ್ಗೆ ಇದ್ದರೆ ಅವರಿಗೆ zero percentನಲ್ಲಿ ಸಾಲವನ್ನು ಕೊಡಿ. ಇವತ್ತು 4%ಗೆ ಕೊಡುತ್ತಿದ್ದೀರಿ. ಮುಖ್ಯವಾಗಿ ರೈತನಿಗೆ ಮೂರು ಅಗತ್ಯತೆಗಳು ಬೇಕು ಎಂದು ಸ್ವಾಮಿನಾಥನ್‌ರವರು ಹೇಳಿದ್ದಾರೆ. ಒಂದನೆಯದು, low interest rate ಇರುವಂಥ ಸಾಲ. ಎರಡನೆಯದು, ನೀರು. ಮೂರನೆಯದು, ಮಾರುಕಟ್ಟೆ. ರೈತನಿಗೆ ಈ ಮೂರನ್ನೂ ಕೊಟ್ಟರೆ, ಯಾವುದೇ ರೈತನೂ ಯಾವ ಸರ್ಕಾರದ ಕಡೆಗಾಗಲೀ, ಯಾವ politician ಕಡೆಗಾಗಲೀ ನೋಡುವುದಿಲ್ಲ. ಇದನ್ನು ನಾನು ಒಬ್ಬ ರೈತನಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು ಕಡಿಮೆ ಬಡ್ಡಿ ದರದಲ್ಲಿ ಅಂದರೆ 4% ಬಡ್ಡಿದರದಲ್ಲಿ

ಸಾಲವನ್ನು ಕೊಡಲು ಪ್ರಾರಂಭ ಮಾಡಿದ್ದೀರಿ, ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ ಇವತ್ತು ನೀವು 25,000, 50,000 ರೂಪಾಯಿಗಳ ಅಸಲನ್ನು ಮನ್ನಾ ಮಾಡುವ ಮೂಲಕ ಯಾರನ್ನು ಸಪೋರ್ಟ್ ಮಾಡುತ್ತಿದ್ದೀರಿ ಎಂದರೆ ಕ್ರಾನಿಕ್ ವಿಲ್‌ಫುಲ್ ಡಿಫಾಲ್ಟರ್‌ಗಳಿಗೆ ಸಹಾಯ ಮಾಡುತ್ತಿದ್ದೀರಿ. ಇದರಿಂದ ಯಾರು ಹತ್ತಾರು ವರ್ಷಗಳಿಂದ ದುಡ್ಡು ಕಟ್ಟದೇ ನೆನೆಗುದಿಗೆ ಬಿದ್ದಿರುತ್ತಾನೋ ಅವನಿಗೆ ಸಹಾಯವಾಗುತ್ತದೆಯೇ ವಿನಃ, ಮಾರ್ಚ್ 31ರೊಳಗೆ ಕಟ್ಟುವಂಥ ರೈತನಿಗೆ ಒಂದು ಪೈಸೆಯಷ್ಟೂ ಕೂಡ ಸಹಾಯ ಆಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕ್ರೆಡಿಟ್ ಸೊಸೈಟಿಗಳ ಗತಿಯೇನು? ಅದು PLD Bank ಆಗಿರಬಹುದು, DCC Bank ಆಗಿರಬಹುದು, Apex Bank ಇರಬಹುದು, Land Bank ಇರಬಹುದು ಅಥವಾ ಪೆಕಾರ್ಡ್ ಸೊಸೈಟಿಗಳಾಗಿರಬಹುದು. ಈಗ ಅವುಗಳು ಪೆಕಾರ್ಡ್ ಬ್ಯಾಂಕುಗಳಾಗಿವೆ. ಇಂಥ ಪರಿಸ್ಥಿತಿಯನ್ನು ನೀವು ಅವಲೋಕಿಸಲಿಲ್ಲವೇ?

ಶ್ರೀ ಜಿ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೇ, ಶ್ರೀನಿವಾಸಗೌಡರು ಹಿರಿಯ ಸಹಕಾರಿಗಳು, ರಾಷ್ಟ್ರಮಟ್ಟದ ಸಹಕಾರಿಗಳು. ಸಹಕಾರಿ ಸಂಸ್ಥೆಗಳು, ಕ್ರೆಡಿಟ್ ಸಂಸ್ಥೆಗಳ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಸರ್ಕಾರವೂ ಕೂಡ ಈ ಬಗ್ಗೆ ಅಷ್ಟೇ ಬದ್ಧತೆಯಿಂದ ಇದ್ದು ಅತಿ ಶೀಘ್ರವಾಗಿ ಕ್ರಮವನ್ನು ಕೈಗೊಂಡು ಕ್ರೆಡಿಟ್ ಸಂಸ್ಥೆಗಳನ್ನು, ಸಹಕಾರಿ ಸಂಸ್ಥೆಗಳನ್ನು ಉಳಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ ಎಂದು ಅಧ್ಯಕ್ಷರ ಮೂಲಕ ತಮಗೆ ತಿಳಿಸುತ್ತಿದ್ದೇನೆ.

ಶ್ರೀ ಹಂಪನಗೌಡ ಬಾದರ್ಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ. ಹೋದ ಸಲ ಮನ್ನಾ ಮಾಡಿರುವುದರಲ್ಲೇ ಇನ್ನೂ 130 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಮೊದಲು ಅದನ್ನು ಬಿಡುಗಡೆ ಮಾಡಿ, ನಂತರ ಮನ್ನಾ ಮಾಡುವುದನ್ನು ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ: ಅದನ್ನೇ ನಾನೂ ಸಹ ಹೇಳಿದ್ದು. ಈಗಾಗಲೇ ಮನ್ನಾ ಮಾಡಿರುವಂಥ ಹಣವನ್ನೇ ಬಿಡುಗಡೆ ಮಾಡಿಲ್ಲ. ಸಹಕಾರಿ ಸಂಘಗಳ ಅಧ್ಯಕ್ಷರುಗಳು ಬಾಯಿ ಬಡಿದುಕೊಳ್ಳುತ್ತಾರೆ. ಈಗ ಇದನ್ನು ಮನ್ನಾ ಮಾಡಿದರೆ, ನೀವು ಕೊಡುತ್ತೀರಿ ಎಂದು ಏನು ಗ್ಯಾರಂಟಿ?

ಶ್ರೀ ಜಿ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೇ, ಹಂಪನಗೌಡ ಬಾದರ್ಲಿಯವರೇ, ತಾವು ಏನು ಹೇಳುತ್ತಿದ್ದೀರಿ, ಅದನ್ನು ಸ್ವಲ್ಪ ಯೋಚನೆ ಮಾಡಿ. ಏಕೆಂದರೆ, ಕಳೆದ 15 ವರ್ಷಗಳಲ್ಲಿ 450 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿರುವುದನ್ನು ಬಿಟ್ಟರೆ ಹೆಚ್ಚು ಹಣ ಬಿಡುಗಡೆ ಮಾಡಿರಲಿಲ್ಲ. ಆದರೆ ಈಗ ನಾವು ಒಂದೇ ವರ್ಷದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಜಮಾ ಮಾಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಉಳಿದುದ್ದನ್ನು ಅಂದರೆ ಹಳೆಯದನ್ನು ಯಾವಾಗ ಜಮಾ ಮಾಡುತ್ತೀರಿ ಎಂದು ಈ ಸದನದಲ್ಲಿ ಹೇಳಿ.

ಶ್ರೀ ಜಿ.ಟಿ.ದೇವೇಗೌಡ: ಅದನ್ನೂ ಕೂಡ ನಾವು ಅತೀ ಶೀಘ್ರವಾಗಿ ಸಂಸ್ಥೆಗಳಿಗೆ ಕೊಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಅತೀ ಶೀಘ್ರ ಎಂದರೆ ಯಾವಾಗ? ಈ ತಿಂಗಳಲ್ಲಿ ಜಮಾ ಮಾಡುತ್ತೀರಾ?

ಶ್ರೀ ಜಿ.ಟಿ.ದೇವೇಗೌಡ: ಅತೀ ಶೀಘ್ರವಾಗಿ ಅದನ್ನು ಮಾಡತಕ್ಕಂಥಾದ್ದಕ್ಕೆ ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ತುಂಬಿರತಕ್ಕಂಥವರಿಗೆ, 200 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥಾದ್ದೇನೂ ದೊಡ್ಡದಲ್ಲ. ಅದನ್ನೂ ಕೂಡ ಜಮಾ ಮಾಡುವುದನ್ನು ಸರ್ಕಾರ ಶೀಘ್ರವಾಗಿ ಮಾಡುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ: 200 ಕೋಟಿ ರೂಪಾಯಿಗಳನ್ನೇ ಕೊಡಲಿಕ್ಕೆ ಶಕ್ತಿ ಇಲ್ಲದಂಥ ಈ ಸರ್ಕಾರದವರು ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಹೇಗೆ ಮನ್ನಾ ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅಸೆಂಬ್ಲಿಯಲ್ಲಿ ಉತ್ತರ ಕೊಡಬೇಕು ಎಂದು ಕೊಡುತ್ತಿದ್ದೀರಿ ಅಷ್ಟೇ. ಈ ಬಗ್ಗೆ ನಿಮ್ಮ ಸ್ಟೇಟ್‌ಮೆಂಟ್ ಏನು ಬಂದಿದೆ ಎಂದು ನೋಡಿಕೊಳ್ಳಿ, ಸಹಕಾರಿಗಳ ಸಭೆಯಲ್ಲಿ ನೀವೇ ಆತಂಕ ವ್ಯಕ್ತಪಡಿಸಿದ್ದೀರಿ. ಸರ್ಕಾರ ತೀವ್ರದಲ್ಲಿ ಏನೇನು ಮಾಡುತ್ತದೆನ್ನುವುದನ್ನು ಹೇಳಬೇಕು, ಇಲ್ಲದಿದ್ದರೆ ನಮ್ಮ ಸಂಸ್ಥೆಗಳು ಮುಳಿಗಿ ಹೋಗುತ್ತವೆ ಎಂದು ತಾವೇ ಹೇಳಿದ್ದೀರಿ. ಸುಮ್ಮನೇ ಇಲ್ಲಿ ಉತ್ತರ ಹೇಳುವುದು ಬೇರೆ. ಉತ್ತರ ಕೊಡುವ ಮುನ್ನ, ನೀವು ತುಂಬದೇ ಇರುವ ರೊಕ್ಕಕ್ಕೆ ಎಷ್ಟು ಬಡ್ಡಿಯಾಗುತ್ತಿತ್ತೆನ್ನುವ ಲೆಕ್ಕವನ್ನು ತರಿಸಿ. ನೀವು ಒಂದು ಸಾವಿರ ಕೋಟಿ

ರೂಪಾಯಿಗಳನ್ನು ತುಂಬಿದ್ದೀರಲ್ಲ, ಈ ಬಾಕಿಯನ್ನೂ ಆವತ್ತೇ ಕಟ್ಟಿದ್ದರೆ ಎಷ್ಟು ಆಗುತ್ತಿತ್ತು, ಈಗ ಆ ಬಾಕಿಯನ್ನು ತುಂಬುವವರೆಗೆ ಬಡ್ಡಿ ಎಷ್ಟಾಗುತ್ತದೆ ಎಂದು ನೋಡಿ. ಹೀಗಾದರೆ ಆ ಸಂಸ್ಥೆಗಳು ಹೇಗೆ ಉಳಿಯುತ್ತವೆ? ಹಿಂದೆ ನಾನು ಮಂತ್ರಿಯಾಗಿದ್ದಾಗ, 130 ಕೋಟಿ ರೂಪಾಯಿಗಳನ್ನು ತುಂಬುವ ಮುನ್ನ, ಅದರ ಮೇಲೆ 10 ಕೋಟಿ ರೂಪಾಯಿಗಳ ಬಡ್ಡಿ ಕೊಡಿ ಎಂದು ಸಿದ್ದರಾಮಯ್ಯನವರನ್ನು ಕೇಳಿದ್ದೆ. ನೀವು ಇಲ್ಲಿ ಮಾತನಾಡುವುದು ಬೇರೆ. ಆದರೆ, ವಾಸ್ತವವಾಗಿ ಆ ಸಂಸ್ಥೆಗಳು ಉಳಿಯುವುದಿಲ್ಲ, ಸಂಸ್ಥೆಗಳು ಹಾಳಾಗಿ ಹೋದರೆ ರೈತ ಉಳಿಯುವುದಿಲ್ಲ. ಇದನ್ನೂ ಕೂಡ ನಾವೆಲ್ಲರೂ ಎಚ್ಚರದಿಂದ ನೋಡಬೇಕಾಗುತ್ತದೆ. ಉತ್ತರ ಕೊಡುವುದು ಬೇರೆ, ಅಲ್ಲಿರುವ ಪರಿಸ್ಥಿತಿ ಬೇರೆ, ಈಗ 5–6 ಸಾವಿರ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆ ಎಂದು ನೀವು ವಿಚಾರ ಮಾಡಿದ್ದೀರಿ. ಈ ಬಗ್ಗೆ ಮಾನ್ಯ ಎ.ಟಿ.ರಾಮಸ್ವಾಮಿಯವರಿಗೂ ಅದು ಬಹಳ ಕಷ್ಟ ಇದೆ. ಆ ಕಾರಣದಿಂದ ಹೇಳುತ್ತಿದ್ದೇನೆ, ಈ ಸಂಸ್ಥೆಗಳು ಹಾಳಾದ ಮೇಲೆ ಹಣ ಕಟ್ಟುವುದಕ್ಕಾಗುವುದಿಲ್ಲ. ಇವತ್ತು DCC Bankನ ಪರಿಸ್ಥಿತಿ ಏನಿದೆ ಎನ್ನುವ ಬಗ್ಗೆ ಉತ್ತರ ಹೇಳುವಾಗ ಹೇಳಿ. ಯಾವ ಯಾವ ಸೊಸೈಟಿಗಳು ಎಷ್ಟು ಹಾನಿಯಲ್ಲಿವೆ, DCC Bank ಎಷ್ಟು ಹಾನಿಯಲ್ಲಿದೆ, Land Bankನ ಪರಿಸ್ಥಿತಿ ಏನಿದೆ ಎನ್ನುವುದನ್ನು ದಯವಿಟ್ಟು ಹೇಳಿ. ನೀವು ಇಲ್ಲಿ ಉತ್ತರ ಹೇಳುವುದು ಬೇರೆ. ಆದರೆ ಸಹಕಾರಿ ಸಚಿವರಾಗಿ ನೀವು ಹೊರಗಡೆ ಇರುವ ಪರಿಸ್ಥಿತಿಯನ್ನು, ಹೇಳಬೇಕಾದುದನ್ನೇ ಹೇಳಿದ್ದೀರಿ. ನಾನು ಒಪ್ಪಿಕೊಂಡಿದ್ದೇನೆ. ಎಲ್ಲರೂ ಮಂತ್ರಿಗಳು ಹೀಗೆ ಹೇಳಿದ್ದಾರೆ ಎಂದರು. ಹೌದು, ಸಹಕಾರಿ ಮಂತ್ರಿಯಾಗಿ ಅವರು ಏನು ಹೇಳಬೇಕೋ ಅದನ್ನೇ ಹೇಳಿದ್ದಾರೆ, ಸಂಸ್ಥೆಗಳನ್ನು ಮುಳುಗಿಸಲು ಸಹಕಾರಿ ಸಚಿವರನ್ನು ಇಟ್ಟಿಲ್ಲ, ಸಂಸ್ಥೆಯನ್ನು ಉಳಿಸುವುದಕ್ಕೆ ಇಟ್ಟಿದ್ದಾರೆ, ಆ ಕಾರಣದಿಂದ ಅವರು ಹಾಗೆ ಉತ್ತರ ಹೇಳಿದ್ದಾರೆ ಎಂದು ನಾನು ನಿಮ್ಮ ಪರವಾಗಿ ಮಾತನಾಡಿದ್ದೇನೆ. ಹಾಗಾಗಿ, ಸುಮ್ಮನೆ ಏಕೆ ಇಲ್ಲಿ ರಕ್ಷಣೆ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಿ, ಅವರು ಮಾತನಾಡಲಿ.

ಡಾ: ಎಂ. ಸಿ. ಸುಧಾಕರ ರೆಡ್ಡಿ: ಸರ್ಕಾರದವರು ಸಾಲ ಮನ್ನಾ ಬಗ್ಗೆ ಮಾತನಾಡುತ್ತಿದ್ದಾರೆ. ಹಿರಿಯ ಸಹಕಾರಿಗಳೆಲ್ಲ ಮಾತನಾಡಿದ್ದಾರೆ. ನಾವು ಸ್ವಲ್ಪ ಹಿಂದಿನದನ್ನು ಯೋಚನೆ ಮಾಡೋಣ. ಹಿಂದೆ ಇದ್ದಂಥ ಸರ್ಕಾರದವರು current charge ಅನ್ನು ಮನ್ನಾ ಮಾಡಿದರು. ಅದರಿಂದ ಇವತ್ತು ಎಸ್ಕಾಂಗಳೆಲ್ಲ

ಎಷ್ಟು ನಷ್ಟದಲ್ಲಿವೆ, ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿವೆ ಎಂದರೆ, ನನ್ನ ತಾಲ್ಲೂಕಿನಲ್ಲೇ ಸುಮಾರು 15–20 ಕೋಟಿ ರೂಪಾಯಿಗಳಷ್ಟು ಹಣವನ್ನು ಯಾರೂ ಕಟ್ಟಿಲ್ಲ. ಅದನ್ನು ಇವತ್ತು ಮನ್ನಾ ಮಾಡುತ್ತಾರೆ, ನಾಳೆ ಮನ್ನಾ ಮಾಡುತ್ತಾರೆ ಎಂದು ಹಣ ಕಟ್ಟದೇ ಇರುವಂಥ ಪರಿಸ್ಥಿತಿಯಾಗಿದೆ. ಈ ರೀತಿಯಾಗಿ ಏನೋ ಒಂದು ಒಳ್ಳೆಯ ಕೆಲಸ ಮಾಡುತ್ತಿದ್ದೇವೆಂದು ಇವರು ಭಾವಿಸಿಕೊಂಡು ಇಡೀ ವ್ಯವಸ್ಥೆಯೇ ಕುಸಿಯುವಂಥ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ಬಹುಶ: ನಾವು ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ವ್ಯವಸ್ಥೆ ಸರಿಯಾದ ರೀತಿಯಲ್ಲಿ ನಡೆಯುವ ರೀತಿಯಲ್ಲಿ ನಾವು ಆಲೋಚನೆ ಮಾಡಿ ಮಾಡಬೇಕೇ ವಿನ: ಇವತ್ತು ನಾನು ಬಹಳ ಪ್ರಭಾವಿ ವ್ಯಕ್ತಿಯಾಗಿಬಿಡುತ್ತೇನೆ, ನನಗೆ ಬಹಳ ಅನುಕೂಲ ಸಿಗುತ್ತದೆಂದು ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಸರಿಯಲ್ಲ. ದಯವಿಟ್ಟು ಸ್ವಲ್ಪ ಆಲೋಚನೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಸರ್ಕಾರ ಅಂಕಿಅಂಶ ಸಮೇತ ಉತ್ತರ ಕೊಡುತ್ತದೆ. ಅದನ್ನು ನಾವು ಉತ್ತರದಲ್ಲಿ ಹೇಳುತ್ತೇವೆ. ಆದರೆ, ಸಾಲ ಮನ್ನಾ ಬಡ್ಡಿ ಮನ್ನಾದಿಂದಲೇ ಸಂಸ್ಥೆಗಳು ಮುಳುಗಿಹೋಗುತ್ತವೆಂದು ತಾವು ಏನು ಹೇಳುತ್ತಿದ್ದೀರಿ, ಅದು ಸರಿಯಲ್ಲ. ಸಾಲ ಬಡ್ಡಿ ಮನ್ನಾ ಮಾಡುವುದರಿಂದಲೇ ಸುಮಾರು 20 ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಕೂಡ ಇವತ್ತು ಲಾಭದಾಯಕವಾಗಿ ಆಗಿವೆ, ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆ ಇದ್ದ ಸ್ಥಿತಿ, ಅದಕ್ಕಿಂತ ಹಿಂದೆ ಇದ್ದಂಥ ಸ್ಥಿತಿಯನ್ನು ತಾವು ಗಮನಿಸಿದರೆ ಗೊತ್ತಾಗುತ್ತದೆ. ನಮ್ಮ ಸರ್ಕಾರ ಬಡ್ಡಿ ಮನ್ನಾ ಮಾಡಿದ ನಂತರ ಇಡೀ 20 ಜಿಲ್ಲೆಗಳಲ್ಲೂ ಕೂಡ ಬ್ಯಾಂಕುಗಳು ಲಾಭದಾಯಕವಾಗಿ ನಡೆಯುತ್ತಿವೆ ಎಂಬುದನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ): ಮಾನ್ಯ ಅಧ್ಯಕ್ಷರೆ, ಬಡ್ಡಿ ಮನ್ನಾ , ಸುಸ್ತಿ ಬಡ್ಡಿ ಮನ್ನಾ ಮಾಡುವುದರಲ್ಲಿ ನಾನು ಇವತ್ತು ಸಹ ಹೇಳುತ್ತೇನೆ. ಹೌದು, ಅದರಿಂದ ಹೆಚ್ಚಿಗೆ ಸರ್ಕಾರದ ಮೇಲೆ ಹೊರೆ ಬೀಳುವುದಿಲ್ಲ. ನೀವು ಅಸಲನ್ನೇ

ಮನ್ನಾ ಮಾಡುತ್ತೇವೆಂದು ಹೇಳಿದರೆ ಆ ಹೊರೆಯನ್ನು ಹೊರುವುದು ಹೇಗೆ? ಒಂದು ಕಡೆ ಸಾರಾಯಿ ಅನ್ನು ನಿಲ್ಲಿಸುತ್ತೇವೆಂದು ಹೇಳುತ್ತೀರಿ, ಸಾರಾಯಿ ನಿಲ್ಲಿಸಿದರೆ ಅದರಿಂದ ಬರುವಂಥ revenue ನಿಂತು ಹೋಗುತ್ತದೆ. ಹಣವನ್ನು ಎಲ್ಲಿಂದ ತರುತ್ತೀರಿ ಸ್ವಾಮಿ? ಹೇಳಿ. ವಾಸ್ತವಾಂಶವನ್ನು ಮುಚ್ಚುಮರೆಯಿಲ್ಲದೆ ಮಾತನಾಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಶ್ರೀ ಶ್ರೀನಿವಾಸಗೌಡರು ರೈತರ ಸಾಲ ಮನ್ನಾ ಮಾಡಿಬಿಟ್ಟರೆ ಏನೇನು ಅನಾಹುತವಾಗುತ್ತದೆಂದು ಹೇಳುತ್ತಿದ್ದಾರೆ. ಸಹಕಾರ ರಂಗದಲ್ಲಿ ಅವರಷ್ಟು ಅನುಭವ ನನಗಿಲ್ಲ. ಆದರೆ ನಾನು ಅವರಿಂದ ಒಂದು ವಿವರಣೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ರೈತರ ಸಾಲ ಮನ್ನಾ ಮಾಡಿದರೆ ಬ್ಯಾಂಕುಗಳು ಇತ್ಯಾದಿ ದಿವಾಳಿಯಾಗುತ್ತದೆ ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರ ಒಂದು ಲಕ್ಷದ 4 ಸಾವಿರ ಕೋಟಿ ರೂಪಾಯಿಗಳಷ್ಟು bad debts ಅನ್ನು industries ಗೆ ಮನ್ನಾ ಮಾಡಿದೆ. ಅದರಿಂದ ಆ ಬ್ಯಾಂಕುಗಳು ಏನಾಗಿವೆ ಎಂಬ ಬಗ್ಗೆ ಸ್ವಲ್ಪ ವಿವರಣೆಯನ್ನು ಮಾನ್ಯ ಶ್ರೀನಿವಾಸಗೌಡರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಹೇಳುತ್ತೇನೆ. ಮಾನ್ಯ ಶ್ರೀರಾಮರೆಡ್ಡಿಯವರು communist partyಯವರು. ನಾನು ಸಹ ಆ ಪಕ್ಷದಲ್ಲಿದ್ದು ಬಂದವನು. ಸ್ವಾಮಿ, ಆ industries ನವರು Commercial Bank, Nationalised Bank ನಿಂದ ಸಾಲ ತೆಗೆದುಕೊಳ್ಳುವುದು. ಅಲ್ಲಿ ಏನಾದರೂ loss ಆದರೆ ಕೇಂದ್ರ ಸರ್ಕಾರ ಕಟ್ಟಿಕೊಡುತ್ತದೆ. ಕೇಂದ್ರ ಸರ್ಕಾರದಲ್ಲಿ ಯಾವುದೇ commercial bank loss ಆದರೆ ಅದರ guarantee ಕೇಂದ್ರ ಸರ್ಕಾರ ಆಗಿರುತ್ತದೆ. 150 ಕೋಟಿ loss ಆದರೆ 150 ಕೋಟಿ ಕೇಂದ್ರ ಸರ್ಕಾರ ಕೊಡುತ್ತದೆ. ಆದರೆ ಇಲ್ಲಿ ಒಬ್ಬ ಸಾಮಾನ್ಯ ರೈತ ನಿಕ್ಕರು ಹಾಕಿಕೊಂಡು ಸಹಕಾರ ಸಂಘಕ್ಕೆ ಹೋದರೆ ಗೌರವ ಕೊಡುವಂಥ ವ್ಯವಸ್ಥೆ ಏನಾದರೂ ಈ credit system ನಲ್ಲಿ ಇರುವುದೆಂದರೆ ಸಹಕಾರ ಸಂಘಗಳಲ್ಲಿಯೇ. ನಿಮ್ಮ ಪಾರ್ಟಿಯವರೇ ಸರ್ಕಾರದಲ್ಲಿರುವುದು. ಹಾಗಾದರೆ ಸರ್ಕಾರದ ಪಾಲಿಸಿಯನ್ನು ಇವತ್ತು ನಿಮ್ಮ ಪಾರ್ಟಿಯವರು withdraw ಮಾಡಿ. ವಾಸ್ತವಾಂಶವನ್ನು ಯಾವತ್ತೂ ಮುಚ್ಚುಮರೆಯಿಲ್ಲದೇ ಮಾತನಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ನಿಮ್ಮ ಮೇಲೆ ತಪ್ಪು ಅಭಿಪ್ರಾಯ ಬರುವ ಹಾಗೆ ಅವರು ಹೇಳಿದರು. ಮಾನ್ಯ ಶ್ರೀನಿವಾಸಗೌಡರು ರೈತರ ಸಾಲ ಮನ್ನಾ ಮಾಡಬೇಡಿ ಎಂದು ಹೇಳಿದರು ಎನ್ನುವ ಮಾತನ್ನು ಶ್ರೀರಾಮರೆಡ್ಡಿಯವರು ಹೇಳಿದರು. ಆದರೆ ಅದನ್ನು ಶ್ರೀನಿವಾಸಗೌಡರು ಹೇಳಿಲ್ಲ. ಮನ್ನಾ ಮಾಡಿ, ಸಹಕಾರ ಸಂಘಗಳಿಗೆ ದುಡ್ಡು ತುಂಬಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮನ್ನಾ ಮಾಡುವ ಹಾಗಿದ್ದರೆ ಪ್ರತಿ ರೂಪಾಯಿ ಸಾಲವನ್ನು ಸಹ ಮನ್ನಾ ಮಾಡಿ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: (ಶ್ರೀರಾಮರೆಡ್ಡಿಯವರನ್ನುದ್ದೇಶಿಸಿ) ನೀವು ಏನು ಮಾಡುತ್ತೀರೆಂದರೆ ಕೇವಲ ಕೂಲಿಕಾರರ ಕಡೆಗೆ ಮಾತ್ರ ಹೋಗಿಬಿಡುತ್ತೀರಿ. ರೈತರ ಕಡೆ ನೀವೂ ಸಹ ನೋಡುವುದಿಲ್ಲ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಶ್ರೀರಾಮರೆಡ್ಡಿಯವರು ಹೇಗೆಂದರೆ, ಬರೀ ಪುಸ್ತಕದಲ್ಲಿ ವ್ಯವಸಾಯ. ನೀವು ಅವರು ಯಾವಾಗಲಾದರೂ ನೇಗಿಲು ಹಿಡಿದಿದ್ದೀರಾ, ಕೇಳಿ. ಇನ್ನು ರೈತರ ಆತ್ಮಹತ್ಯೆಗಳ ಬಗ್ಗೆ ಹೇಳುವುದಾದರೆ, ಈ ವರ್ಷ 117 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬ ಮಾನ್ಯ ಕೃಷಿ ಸಚಿವರ ಹೇಳಿಕೆಯನ್ನು ನಾನೆಲ್ಲೋ ನೋಡಿದೆ. ಮುಂದಿನ ವರ್ಷ ಇದು 1500 ಆಗಬಹುದು. ಕಾರಣವೇನೆಂದರೆ, ಯಾವತ್ತು ಸಹಕಾರ ಸಂಘಗಳಲ್ಲಿ ಸಾಲ ಸಿಗುವುದಿಲ್ಲವೋ ಆವತ್ತು ಅವನು ಖಾಸಗಿ ಸಾಲಗಾರನ ಹತ್ತಿರ ಹೋಗುತ್ತಾನೆ. ಅವನು 100 ರೂ.ಗಳಿಗೆ 120% ಬಡ್ಡಿ ಕೊಟ್ಟು ಸಾಲ ತೆಗೆದುಕೊಂಡರೆ ಅವನು ಬದುಕಲಿಕ್ಕೆ ಸಾಧ್ಯವಿದೆಯೇ? ಅವನಿಗೆ ವಿಷವೇ ಗತಿ ವಿನ: ಅವನಂತೂ ಬದುಕಲಿಕ್ಕೆ ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯನ್ನು ಸರ್ಕಾರ ಹುಟ್ಟುಹಾಕುತ್ತಿದೆ. ನೀವು ಮಾಡುವುದಿದ್ದರೆ ಎಲ್ಲಾ ಸಾಲವನ್ನು ಮನ್ನಾ ಮಾಡಿ ಸಹಕಾರ ಸಂಘಗಳಿಗೆ ಸರ್ಕಾರದಿಂದ ಹಣ ಕಟ್ಟಿ. ನಿಮಗೆ ಆ ಶಕ್ತಿ ಇದ್ದರೆ ಅದನ್ನು ಮಾಡಿ. ಅದು ಬಿಟ್ಟು, ಎಲ್ಲೋ 25 ಸಾವಿರ ರೂ.ಗಳ ಮನ್ನಾ ಮಾಡುತ್ತೇವೆ, 50 ಸಾವಿರ ರೂ.ಗಳ ಮನ್ನಾ ಮಾಡುತ್ತೇವೆ, ನಾವೂ ಕೂಡ ಸ್ವಾಗತಿಸುತ್ತೇವೆ. ಆದರೆ ಮನ್ನಾ ಮಾಡುವಂಥ ಹಣವನ್ನು ನೀವು ಆ ಸಹಕಾರ ಸಂಘಗಳಿಗೆ

ಕಟ್ಟಬೇಕು. ಹಾಗೆ ಕಟ್ಟಿದಾಗ ಮಾತ್ರ ಇದು ಪ್ರಯೋಜನವಾಗುತ್ತದೆಂದು ಹೇಳಿ, ಇನ್ನು ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ನಾನು ಕಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ನಂಜುಂಡಪ್ಪನವರ ವರದಿಯಲ್ಲಿ ಹೇಳಿದ ಆ 39 ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣವನ್ನು ಆ ಜಿಲ್ಲೆಗಳ ಅಭಿವೃದ್ಧಿಗೆ ಸರ್ಕಾರದ ಕಡೆಯಿಂದ ಇಟ್ಟಿದ್ದೀರಿ? Industry Minister ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು 4% ಬಡ್ಡಿಯಲ್ಲಿ ಸಾಲ ಕೊಟ್ಟಿದ್ದಕ್ಕೆ ಆವಾಗ ಏನೋ ಹೇಳುತ್ತಿದ್ದರು. ಸ್ವಾಮಿ, ನಾವು ಆಡಳಿತ ನಡೆಸುತ್ತಿದ್ದಾಗ 6% ಬಡ್ಡಿಗೆ ಸಾಲ ಕೊಟ್ಟಿದ್ದೆವು. ಈಗ ನಾನು ಹೇಳುತ್ತಿದ್ದೇನೆ, ನೀವು ರೈತರಿಗೆ ಒಳ್ಳೆಯದು ಮಾಡಬೇಕಾಗಿದ್ದರೆ 0% ಬಡ್ಡಿಯಲ್ಲಿ ಸಾಲ ಕೊಡಿ. ಆಗ ರೈತರು ನಿಮ್ಮನ್ನು ನೆನಪಿಸಿಕೊಳ್ಳುತ್ತಾರೆ. ನಿಮಗೆ ಆ ಶಕ್ತಿ ಇದ್ದರೆ 0%ನಲ್ಲಿ ಸಾಲ ಕೊಡಿ ಅಥವಾ ಸಾಲ ಮನ್ನಾ ಮಾಡಬೇಕಾದರೆ ಪೂರ್ತಿ ಸಾಲ ಮನ್ನಾ ಮಾಡಿದರೆ ಆಗ ರೈತ ಒಪ್ಪಿಕೊಳ್ಳುತ್ತಾನೆ. ನಾವೂ ಸಹ ರೈತರಿಗೆ 6%ಬಡ್ಡಿಗೆ ಸಾಲ ಕೊಟ್ಟಿದ್ದೇವೆ.

ಶ್ರೀ ಜಿ.ಟಿ.ದೇವೇಗೌಡ: ಇಡೀ ಭಾರತ ದೇಶದಲ್ಲಿ ಯಾವ ಸರ್ಕಾರವೂ ಕೂಡ ಮಾಡದಿರುವ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ನಮ್ಮ ಸರ್ಕಾರ ಮಾಡಿದೆ. ನಮ್ಮ ಆರ್ಥಿಕ ಸಚಿವರು 4% ಬಡ್ಡಿಯಲ್ಲಿ ಸಾಲ ಕೊಟ್ಟಿರುವುದು ಇಡೀ ರಾಷ್ಟ್ರದಲ್ಲಿ ಪ್ರಥಮ. ನೀವು ಪುಕ್ಕಟೆ ಕೊಡಿ ಎಂದು ಹೇಳುತ್ತಿದ್ದೀರಿ. ನಿಮ್ಮ ಸರ್ಕಾರ ಇದ್ದಾಗ ಏನು ಮಾಡಿದ್ದೀರಿ ಎಂಬುದನ್ನು ಹೇಳಬೇಕಲ್ಲವೇ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: 4% ಬಡ್ಡಿಗೆ ಸಾಲ ಕೊಟ್ಟಿರುವುದನ್ನು ಸ್ವಾಗತಿಸಿದ್ದೇವೆ. ಹಾಗೆಯೇ ನಾವೂ ಸಹ 6%ಗೆ ಸಾಲ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಜಿ.ಟಿ.ದೇವೇಗೌಡ: ನಿಮ್ಮ ಸರ್ಕಾರ ಇದ್ದಾಗ ಎಷ್ಟು ಮಾರ್ಜಿನ್ ಇಟ್ಟುಕೊಂಡು ಮಾಡಿದ್ದೀರಿ, ಏನು ಸೇವೆ ಮಾಡಿದ್ದೀರಿ ಎನ್ನುವುದು ಇಡೀ ರಾಜ್ಯಕ್ಕೆ, ಇಡೀ ದೇಶಕ್ಕೆ ಗೊತ್ತಿದೆ.

(ಗೊಂದಲ)

ಶ್ರೀ ಆಲಂಗೂರು ಶ್ರೀನಿವಾಸ್: ನಿಮ್ಮ ಪಕ್ಷದ ಆಡಳಿತವಿರುವ ಆಂಧ್ರ ಪ್ರದೇಶದಲ್ಲಿ ಏನು ಮಾಡಿದ್ದೀರಿ? ನಿಮ್ಮ ಪಕ್ಷದ ಸರ್ಕಾರವೇ ಇದ್ದು ಅಲ್ಲಿ ಎಷ್ಟು percent ಬಡ್ಡಿ ಮನ್ನಾ ಮಾಡಿದ್ದೀರಿ?

(ಗೊಂದಲ)

ಶ್ರೀ ಜಿ.ಟಿ.ದೇವೇಗೌಡ: ನೀವು ಯಾವ ರಾಜ್ಯದಲ್ಲಿ ಕಡಿಮೆ ಬಡ್ಡಿಗೆ ಸಾಲ ಕೊಟ್ಟಿದ್ದೀರಿ? ರೈತರ ಬಗ್ಗೆ ಮಾತನಾಡುತ್ತೀರಿ. ಇಡೀ ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿ ತಮ್ಮದೇ ಪಕ್ಷದ ಸರ್ಕಾರಗಳಿವೆ. ತಾವು ಎಷ್ಟು ಬಡ್ಡಿಗೆ ಸಾಲ ಕೊಟ್ಟಿದ್ದೀರಿ ಎನ್ನುವುದನ್ನು ಮೊದಲು ಹೇಳಬೇಕಾಗುತ್ತದೆ.

(ಗೊಂದಲ)

ಡಾ: ಎಂ.ಸಿ. ಸುಧಾಕರ : ನಿಮ್ಮ NDA ಸರ್ಕಾರವಿದ್ದಾಗ ಎಷ್ಟು ಕೊಟ್ಟಿದ್ದೀರಿ ಹೇಳಿ.UPA ಸರ್ಕಾರ ಎಷ್ಟು ಕೊಟ್ಟಿದೆ ಎನ್ನುವುದು ಗೊತ್ತಿದೆ.

(ಗೊಂದಲ)

ಶ್ರೀ ಜಿ.ಟಿ.ದೇವೇಗೌಡ: ಮಾಡಿದ್ದಕ್ಕೆ ಮೊಸರಲ್ಲಿ ಕಲ್ಲು ಹುಡುಕುವುದಲ್ಲ. ಇಲ್ಲಿ ಮಾಡಿ ಎಂದು ಕೇಳುವುದಲ್ಲ. ಅಲ್ಲಿ ಏನು ಮಾಡಿದ್ದೀರಿ ಎನ್ನುವುದನ್ನು ಮೊದಲು ಹೇಳಿ.ಇಡೀ ದೇಶದಲ್ಲಿ ನಿಮ್ಮ ಅಧಿಕಾರ ಯಾವ ಸ್ಥಿತಿಯಲ್ಲಿದೆಯೆಂದು ಗೊತ್ತಿದೆಯೇ? ಶ್ರೀ ಶರತ್ ಪವಾರ್ ರವರು 4% ಬಡ್ಡಿಯಲ್ಲಿ ಸಾಲ ಕೊಡುತ್ತಾರೆಯೇ? ಕೇಂದ್ರ ಸರ್ಕಾರವನ್ನು ಕೇಳುವುದಕ್ಕೆ ನಿಮಗೆ ತಾಕತ್ತು ಇದೆಯೇ? ತಾಕತ್ತು ಇದ್ದರೆ ಹೇಳಿ. ನೋಡೋಣ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೆ, ಈ 6% ಮಾಡಲಿಕ್ಕೆ ಶ್ರೀ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿ 6% ಮಾಡಿದ್ದರಿಂದ, ಓಹೋ, ಅವರು 6% ಮಾಡಿದ್ದಾರೆ, ನಾವು 4% ಮಾಡಿದ್ದೇವೆಂದು ನೀವು ಭುಜ ತಟ್ಟಿಕೊಂಡಿರೇ ವಿನ: ನಿಮ್ಮದೇನೂ ಇಲ್ಲ. ನಿಮ್ಮ ಸರ್ಕಾರಗಳು ಗುಜರಾತ್‌ನಲ್ಲಿ 11% ಬಡ್ಡಿಗೆ ಸಾಲ ಕೊಟ್ಟಿದ್ದೀರಿ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಇವತ್ತು ಬಿ.ಜೆ.ಪಿ. ಪಕ್ಷದ ಸರ್ಕಾರಗಳು ಬೇರೆ ಬೇರೆ ರಾಜ್ಯದಲ್ಲಿವೆ. ಎಷ್ಟು percent ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುತ್ತಿದ್ದಾರೆನ್ನುವುದನ್ನು ಇವತ್ತು ಹೇಳಲಿ. ಗುಜರಾತ್‌ನಲ್ಲಿ ಎಷ್ಟು percent ಬಡ್ಡಿಗೆ ಸಾಲ ಕೊಡುತ್ತಿದ್ದಾರೆನ್ನುವುದನ್ನು ಹೇಳಲಿ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಆಂಧ್ರದ ಬಗ್ಗೆ ಮಾತನಾಡಿದಿರಿ. (**ಗೊಂದಲ**) ಮಾನ್ಯ ಉಪಾಧ್ಯಕ್ಷರೆ, ಭಾರತೀಯ ಜನತಾ ಪಾರ್ಟಿ ಯಾವತ್ತೂ ವ್ಯಾಪಾರಿಗಳ ಪಾರ್ಟಿ. ರೈತರುಗಳ ಪಾರ್ಟಿ, ಬಡವರ ಪಾರ್ಟಿ ಅಲ್ಲ. ಅದು ಶ್ರೀಮಂತರ ಪಾರ್ಟಿ.

ಶ್ರೀ ಎಸ್.ಎಸ್.ಪಾಟೀಲ್: ನಮ್ಮ ಬಾಗಲಕೋಟೆಯಲ್ಲಿ DCC bank 3% ಬಡ್ಡಿದರದಲ್ಲಿ ಸಾಲ ಕೊಟ್ಟಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ: ನಂಜುಂಡಪ್ಪನವರ ವರದಿಯನ್ನು ಯಾವ ಉದ್ದೇಶಕ್ಕೆ ತಂದರೋ ಅದನ್ನು ಸರಿಯಾಗಿ ಸಫಲವಾಗಿ ಸರ್ಕಾರ ಮಾಡಲಿಲ್ಲ. ಇನ್ನು ಬರ ಪ್ರದೇಶಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೆ, ಈಗಾಗಲೇ ಒಂದೂವರೆ ಗಂಟೆಯಾಗಿದೆ. ಮಾನ್ಯ ಮಂತ್ರಿಗಳು ಯಾವಾಗ reply ಕೊಡುವುದು? ಇನ್ನು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಇನ್ನು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಇವರೆಲ್ಲ ಮಧ್ಯದಲ್ಲಿ ಮಾತನಾಡಿದರಿಂದ ಮಾತನಾಡಿ ಮುಗಿಸಲಿಕ್ಕೆ ಆಗಲಿಲ್ಲ. ನಾನು ಮಾತನಾಡುವುದಕ್ಕೆ ನಿಂತುಕೊಂಡಾಗಲೆಲ್ಲಾ ನನಗೆ interruptions ಜಾಸ್ತಿ ಮಾಡುತ್ತಾರೆ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮಂಥ ಜಿಲ್ಲೆಗೆ 1024 ಕೆರೆಗಳಿಗೆ ಜಲಸಂವರ್ಧನೆ ಯೋಜನೆ ತಂದರು. ಮಾನ್ಯ ಜಲಸಂವರ್ಧನ ಮಂತ್ರಿಯವರು ಹೇಳುವುದೇನಿದ್ದರೂ ತಮ್ಮ reply ನಲ್ಲಿ ಹೇಳಲಿ.

ಉಪಾಧ್ಯಕ್ಷರು: ಅವರು ಹೇಳಿದ್ದು ಆಗಲೇ ಆಗಿಹೋಯಿತು.

ಶ್ರೀ ಎಸ್. ರಾಜೇಂದ್ರನ್: ಶ್ರೀನಿವಾಸಗೌಡರು, ನಮ್ಮ ಜಿಲ್ಲಾ ಮಂತ್ರಿ ಆಲಂಗೂರು ಶ್ರೀನಿವಾಸ್‌ರವರು ಎದ್ದು ಮಾತನಾಡುವ ಸಂದರ್ಭದಲ್ಲಿ ಅವರು ಯಾವ ಮಂತ್ರಿ ಎಂದು ಕೇಳುತ್ತಾರೆ. ಹೇಗಿದೆ ಸ್ವಾಮಿ?

ಉಪಾಧ್ಯಕ್ಷರು: ಯಾರು ಕೇಳಿದ್ದು?

ಶ್ರೀ ಎಸ್. ರಾಜೇಂದ್ರನ್: ನಮ್ಮ ಜಿಲ್ಲಾ ಮಂತ್ರಿ ಯಾವ department ಹೊಂದಿದ್ದಾರೆಂಬ ಬಗ್ಗೆ ಇವರಿಗೆ ಗೊತ್ತಿಲ್ಲವೇ? ಇದು ನ್ಯಾಯವೇ?

ಶ್ರೀ ಕೆ. ಶ್ರೀನಿವಾಸಗೌಡ: ಇರಲಿ. ಬರಪೀಡಿತ ಜಿಲ್ಲೆಗಳಿಗೆ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಜಲಸಂವರ್ಧನಾ ಯೋಜನೆ ತಂದರು. ನಮ್ಮ ಜಿಲ್ಲೆಯಲ್ಲಿ ಸುಮಾರು 3,608 ಕೆರೆಗಳಿವೆ. ಇದರಡಿಯಲ್ಲಿ ಸುಮಾರು 1,024 ಕೆರೆಗಳು ಬಂದವು. ನಾವು ಯಾವತ್ತೂ ಕೂಡ ಕಟ್ಟೆ ಅಥವಾ ತೂಬು ಅಥವಾ ಕೋಡಿ ಹೋಗುವಂಥ ಮರವೆ ಇವಾವುದಕ್ಕೂ ಕೂಡ ರಿಪೇರಿಗಳನ್ನು ಮಾಡಿರಲಿಲ್ಲ. ಇತ್ತೀಚೆಗೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನೀವು ಇದಕ್ಕೆ ಹಣ ತನ್ನಿ. ಮಾನ್ಯ ಜಗದೀಶ್ ಶೆಟ್ಟರ್‌ರವರಿಗೇಕೆ ಹೇಳುತ್ತೇನೆಂದರೆ, ಬರಪೀಡಿತ ಜಿಲ್ಲೆಗಳ ಬಗ್ಗೆ ಕೆಲವು ಸಲಹೆ ಹೇಳುತ್ತೇನೆ. ರಾಜಕಾರಣದ ಬಗ್ಗೆ ಆಮೇಲೆ ಮಾತನಾಡೋಣ. World Bank ನಿಂದ ಆಗ ಎಷ್ಟು ಹಣ ಬಂತೋ, ಈಗ ನಮ್ಮ ಜಿಲ್ಲೆಯಿಂದ ಬಹುಶ: 6, 7 ಜಿಲ್ಲೆಗಳನ್ನು ತೆಗೆದುಕೊಂಡಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಇನ್ನೂ ತೆಗೆದುಕೊಂಡಿಲ್ಲ. ಇದನ್ನು ನೀವು ಮಾಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ, ಶ್ರೀರಾಮರೆಡ್ಡಿ, ನಮ್ಮ ಜಿಲ್ಲೆಯ ಎಲ್ಲ ಪಕ್ಷದವರೂ, ನಾವೆಲ್ಲ ಸೇರಿ Rule 69ರಲ್ಲಿ ಚರ್ಚೆಗೆ ಅವಕಾಶ ಕೇಳಿದ್ದೇವೆ. ನಮಗೆ ಶಾಶ್ವತ ನೀರಾವರಿ ಕೊಡಬೇಕು. ನಮಗೇನೂ ಬೇಡ. ಶಾಶ್ವತ ನೀರಾವರಿ ಎಂದರೆ, ನಿಮ್ಮ ಹಾಗೆ, ಕಾಲುವೆಗಳಲ್ಲಿ ನೀರು ಬಿಟ್ಟುಕೊಂಡು ಹೋಗುವುದು ಬೇಡ. ನಮಗೆ ಕೆರೆಗಳಿಗೆ ನೀರು ತುಂಬಿಸಿಕೊಡಿ.

ಉಪಾಧ್ಯಕ್ಷರು: ಬಹಳ detail ಗೆ ಹೋದರೆ ಈ ವಿಚಾರ ಇವತ್ತು ಮುಗಿಯುವುದಿಲ್ಲ. ಈಗಾಗಲೇ ಸಮಯ 1.30 ಗಂಟೆ ಅಯಿತು. ಅವರು ಉತ್ತರ ಯಾವಾಗ ಕೊಡುವುದು? ಬೇಗ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಪರಮಶಿವಯ್ಯನವರು ನಮ್ಮ ಜಿಲ್ಲೆಗೆ ನೀರು ತರಬೇಕೆನ್ನುವಂಥ ಅನೇಕ ಅನಿಸಿಕೆಗಳನ್ನು ನಮಗೆಲ್ಲ ಹೇಳಿಕೊಂಡಿದ್ದಾರೆ. ಸರ್ಕಾರಕ್ಕೂ ಕೂಡ ಮನದಟ್ಟು ಮಾಡಿದ್ದಾರೆ. ಭದ್ರಾ ಮೇಲ್ದಂಡೆಯಿಂದ ನಮ್ಮ ಕೆರೆಗಳಿಗೆ ನೀರು ತುಂಬಿಸುತ್ತಾರಂತೆ. ಅದೂ major ಆಗಿ ನನ್ನ ತಾಲ್ಲೂಕಿನಲ್ಲೇ ಜಾಸ್ತಿ ಬರುತ್ತವೆ. 3,608 ಕೆರೆಗಳಿಗೆ ನೀರನ್ನು ಉಣಿಸುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ಕೆ.ಸಿ. ರೆಡ್ಡಿ report ಅನ್ನು ಪಕ್ಕಕ್ಕೆ ಇಡಿ. ಅವರು ಬಹಳ ಬುದ್ಧಿವಂತರಿದ್ದರೆ ಅವರನ್ನು ಎಲ್ಲಿಯಾದರೂ ನೀರಾವರಿ ವಿಷಯಕ್ಕೆ ಸಲಹೆ ಕೊಡುವುದಕ್ಕೆ ನೇಮಿಸಿಕೊಳ್ಳಿ. ಬರಪೀಡಿತ ಜಿಲ್ಲೆಗಳಾದಂಥ ನಮ್ಮ ಕೋಲಾರ,

ತುಮಕೂರು, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ನೀರನ್ನು ಬಿಟ್ಟು ನಂತರ ಕೆರೆಗಳಿಗೆ ನೀರು ಬಿಡಿ ಸ್ವಾಮಿ. ನಮಗೆ ಕುಡಿಯುವುದಕ್ಕೆ ನೀರು ಸಿಗುತ್ತದೆ. ಮಳೆ ಕೊಯ್ಲು ಬಗ್ಗೆ ಹೇಳುವುದಾದರೆ, ಇವತ್ತು water management ಅನ್ನು ನಾವು ಮಾಡಿಲ್ಲ. Israel ದೇಶದಲ್ಲಿ ಕೇವಲ 3 inch ಮಳೆ ಬೀಳುತ್ತದೆ, Jordan river ನಿಂದ ಇಡೀ ದೇಶಕ್ಕೆ ಕುಡಿಯುವ ನೀರು ಕೊಡುತ್ತಾರೆ, ವ್ಯವಸಾಯಕ್ಕೆ ನೀರು ಕೊಡುತ್ತಾರೆಂದು ಆಗಲೇ ಯಾರೋ ಹೇಳುತ್ತಿದ್ದರು. ಬಹಳ ಸಾರಿ ನಾನು ಒಂದು ವಿಷಯವನ್ನು ಹೇಳಿದ್ದೇನೆ. ಕೊಚ್ಚಿನ್‌ನಿಂದ ಹೋದ ಒಬ್ಬ ಜ್ಯೂ ರೈತನ ಮನೆಗೆ ನಾನು, ಕೃಷಿ ಮಂತ್ರಿಯಾಗಿದ್ದ ಭೈರೇಗೌಡರು ಹೋಗಿದ್ದೆವು. ಅದಕ್ಕೆ ಮೊದಲು ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಕೂಡ ಅವರು ಅವನ ಮನೆಗೆ ಹೋಗಿದ್ದರು. ಆ ಮನುಷ್ಯನನ್ನು, ಅಲ್ಲಿಂದ ಬಂದು ಇಷ್ಟು ಚೆನ್ನಾಗಿ ಹೇಗೆ ನೀವು ಆಗಿದ್ದೀರಿ ಎಂದು ಕೇಳಿದರೆ, ಆ ಮನುಷ್ಯ, 'one inch of land, one drop of water, I will earn one dollar' ಎಂದು ಹೇಳಿದರು. ಹಾಗೆ ವ್ಯವಸ್ಥೆ ಮಾಡಿದರೆ ನಮ್ಮಲ್ಲಿನ 2 ನದಿಗಳು ಸಾಕು. ಕಾವೇರಿ ನದಿ, ಕೃಷ್ಣಾ ನದಿಗಳ ಮೇಲೆ ನಾವು ಬಾಯಿ ಹೊಯ್ದುಕೊಳ್ಳುತ್ತಿದ್ದೇವೆ. 2 ನದಿಗಳಿಂದ ಪ್ರತಿ inchಗೂ ಕೂಡ ಈ ರಾಜ್ಯದಲ್ಲಿ ನೀರು ಕೊಡಬಹುದು. ಈ ಜಲ ಸಂರಕ್ಷಣೆ ಜೊತೆಗೆ water management ನಲ್ಲಿ complete poor ಆಗಿರುವುದರಿಂದ ಇವತ್ತಿಗೂ ಕೂಡ ವ್ಯವಸಾಯದಲ್ಲಿ GDP 2.6 ಇದೆ. ಕಳೆದ ಸಾರಿ 3.6 ಬಂದಿತ್ತು, ಇವತ್ತು 2.6 ಬಂದಿದೆ. ಇವತ್ತು ವ್ಯವಸಾಯದಲ್ಲಿ GDP 10% ಆಗಬೇಕೆಂದು ಹೇಳುವ ಜನ ಇವತ್ತು 4% ಆದರೂ ಹತ್ತಬೇಕೆಂದು ನಾವಿನ್ನೂ ಕೆಳಗೆ ಹೋಗುತ್ತಿದ್ದೇವೆ. ಈ GDP ಯನ್ನು ಹತ್ತಬೇಕಾದರೆ ನೀರನ್ನು ನಾವು water management ಮೂಲಕ ಸರಿಯಾಗಿ ಕೊಟ್ಟರೆ ಆಗುತ್ತದೆನ್ನುವ ಮಾತನ್ನು ನಾನು ಹೇಳುತ್ತೇನೆ. ತಮಿಳುನಾಡಿನಲ್ಲಿ loan ಅನ್ನು ಮಾಫಿ ಮಾಡಿದ್ದಾರೆಂದು ಬಹಳ ಜನರು ಹೇಳುತ್ತಾರೆ. ನಮ್ಮ ಸಹಕಾರ ಮಂತ್ರಿಗಳು ಅಲ್ಲಿ ಹೋಗಿ ನೋಡಬೇಕು. ಅಲ್ಲಿ ಪೂರ್ತಿ ಬಾಗಿಲು ಹಾಕಿಕೊಂಡಿವೆ. Secretary ಗಳಿಗೆ ಸರ್ಕಾರ ಸಂಬಳ ಕೊಡುತ್ತಿದೆ. ನಮ್ಮ ಹಾಗೆ ಅಲ್ಲಿ ಮಾಡಿದ್ದರೆ, ಅವರಿಗೆ ಕಷ್ಟ ಗೊತ್ತಾಗುತ್ತಿತ್ತು. ಎಲ್ಲ ಸಹಕಾರ ಸಂಘಗಳು ಅಲ್ಲಿ ಹಾಳಾಗಿ ಹೋಗಿವೆ. ಕರುಣಾನಿಧಿಯವರು ತಮಿಳುನಾಡಿನಲ್ಲಿ ತಮ್ಮ manifesto ನಲ್ಲಿ announce ಮಾಡಿದ್ದರು. ಇವತ್ತು ಆ ಸಹಕಾರ ಸಂಘಗಳು ಒಂದೂ

ಕೂಡ ಉದ್ಧಾರವಾಗಿಲ್ಲ. ಇದನ್ನು ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ, ಎಲ್ಲಿ ಬರ ಜಿಲ್ಲೆಗಳಿವೆ, ಅವುಗಳ ಕಂದಾಯ ಮಾಫಿ ಮಾಡಬೇಕು. ಕೆರೆಗಳಲ್ಲಿ ಒತ್ತುವರಿಯನ್ನು ನಿಲ್ಲಿಸಬೇಕು. Water management ನಲ್ಲಿ ನೇರವಾಗಿ ಹಿಡಿತವನ್ನಿಟ್ಟುಕೊಳ್ಳಬೇಕು. ಇದರ ಜೊತೆಗೆ, ಮಳೆ ನೀರು ಕೊಯ್ಲುಗಳ ವ್ಯವಸ್ಥೆ ಮಾಡಬೇಕು. ನಾನು 3–4 ವರ್ಷಗಳಿಂದ IFFCO ಸಂಸ್ಥೆಯ ಅಧ್ಯಕ್ಷನಾಗಿದ್ದೆ. ಆಗ ಮಳೆ ಬಂದಾಗ bore–well ಗೆ ನೇರವಾಗಿ charge ಮಾಡುವಂಥ ವ್ಯವಸ್ಥೆಯನ್ನು ನಾನು ಮಾಡಿದ್ದೆ. ರೈತರು ಸುಮಾರು 3 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಾಕು, ಉಳಿದ ಹಣವನ್ನು ನಮ್ಮ ಸಂಸ್ಥೆಯವರು ಕೊಟ್ಟು ಮಾಡಿದ್ದಾರೆ. ಕೋಲಾರದಲ್ಲಿ ಬಂದು ನೋಡಿ. ಆ bore–well ಗಳಲ್ಲಿ 24 ಗಂಟೆ ಇವತ್ತು ನೀರು ಬರುತ್ತಿದೆ. ಇದನ್ನು ಕುಡಿಯುವ ನೀರಿಗೂ ಕೂಡ ಮಾಡಬೇಕೆನ್ನುವಂಥ ಮಾತನ್ನು ನಾನು ಹೇಳುತ್ತೇನೆ. ನಾನಿನ್ನೂ ಬಹಳ ಮಾತನಾಡಬೇಕೆಂಬ ಆಸೆ ಇದ್ದರೂ ಕೂಡ ಬೇಗ ಮುಗಿಸುತ್ತೇನೆ. ನಾವು ರೈತರ ಪರವೇ ಇದ್ದೇವೆ. ರೈತನ ಎಲ್ಲಾ ಸಾಲವನ್ನು ಮನ್ನಾ ಮಾಡಿದರೆ ಸ್ವಾಗತ ಮಾಡುವುದರಲ್ಲಿ ನಾನು ಮೊದಲನೆಯವನು. ಮಧ್ಯದಲ್ಲಿ 25, 50 ಸಾವಿರ ರೂಪಾಯಿ ಮನ್ನಾ ಮಾಡುತ್ತೇನೆಂದು ಇದ್ದರೆ, ನೀವು zero point ನಲ್ಲಿ ರೈತರಿಗೆ ಸಾಲ ಕೊಡಬೇಕು ಎನ್ನುವಂಥ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ, ಇತ್ತೀಚೆಗೆ, ಬೆಂಗಳೂರು ಸುತ್ತಮುತ್ತ ಜಮೀನು 2, 3 ಕೋಟಿ ರೂಪಾಯಿಗಳಿಗೆ ಜನ ಮಾರುತ್ತಿದ್ದಾರೆ. ಈ ವಿಷಯ ನಮ್ಮ ಜಿಲ್ಲೆಗೆ ಬಹಳ ಮುಖ್ಯವಾದುದು, ಅದನ್ನು ಹೇಳುತ್ತೇನೆ. ಇಲ್ಲಿ guided value mostly 5, 15 ಲಕ್ಷ ರೂಪಾಯಿ ಇರಬಹುದು. ಇಲ್ಲಿ 2,3 ಕೋಟಿ ರೂಪಾಯಿಗಳನ್ನು bank ನಲ್ಲಿಡುವುದಕ್ಕೆ ಧೈರ್ಯವಿರುವುದಿಲ್ಲ. ಮನೆಯಲ್ಲಿಟ್ಟು ಕೊಳ್ಳುವುದಕ್ಕೆ ಶಕ್ತಿಯಿಲ್ಲ. ನಮ್ಮ ಮಾನ್ಯ ಮಂತ್ರಿಗಳ ಊರಿನವರೆಗೂ ಕೂಡ ಒಂದು ಎಕರೆಗೆ 30,40,50 ಲಕ್ಷ ರೂಪಾಯಿಗಳಾಗಿತ್ತು. ಈ ತರಹ ರೈತ ಎಲ್ಲಾ ಜಮೀನನ್ನು ಮಾರಿಕೊಂಡರೆ, ನಾಳೆ ಅವನು ಭಿಕ್ಷುಕನಾಗುತ್ತಾನೆ. ಈ ಬಗ್ಗೆ ಕಂದಾಯ ಮಂತ್ರಿಗಳು ಅಧಿಕಾರಿಗಳ ಒಂದು Committee ಮಾಡಿ study ಮಾಡಿಸಿ. ಇವತ್ತು ಬೆಂಗಳೂರು ಸುತ್ತಮುತ್ತ ಮಾರಿದಂಥ ಜಮೀನುದಾರರು ಎಲ್ಲೆಲ್ಲಿ ಜಮೀನು ಕೊಂಡಿದ್ದಾರೆಂಬುದನ್ನು study ಮಾಡಿಸಿ. ಬೇನಾಮಿಯಲ್ಲಿಟ್ಟಿರಬಹುದು ಅಥವಾ ಎಲ್ಲೇ ಇರಬಹುದು. ಕೇವಲ 50,000,

ಲಕ್ಷ ರೂಪಾಯಿ ಇದ್ದದ್ದು ಇವತ್ತು 40, 50 ಲಕ್ಷ ರೂಪಾಯಿ ಆಗಿದೆ. ಒಂದು ಸಾರಿ ಜಮೀನನ್ನು ರೈತ ಮಾರಿದ ಮೇಲೆ ಅವನು ಮಗಳಿಗೆ ಬಂಗಾರದ ಡಾಬು ಮಾಡಿಸುತ್ತಾನೆ, ಮಗನಿಗೆ motorcycle ಕೊಡಿಸುತ್ತಾನೆ. ಅವನು ಮಜಾ ಮಾಡಿ ಹಣವನ್ನು ಉಡೀಸ್ ಮಾಡುತ್ತಾನೆ. ಆಮೇಲೆ, ಅವನು ಭಿಕ್ಷೆ ಬೇಡಬೇಕಾಗುತ್ತದೆ. ಇದು ಬಹಳ ಗಹನವಾದಂಥ ವಿಷಯ. ಮಾನ್ಯ ಕಂದಾಯ ಮಂತ್ರಿಗಳು ಇದರ ಮೇಲೆ ಗಮನಹರಿಸಬೇಕು. ಈ ಬಗ್ಗೆ ಒಂದು Committee ಮಾಡಿ ಸುದೀರ್ಘವಾಗಿ ಎಲ್ಲಿ ಲೋಪಗಳಿವೆ, ಆ ಲೋಪಗಳನ್ನು ಸರಿಪಡಿಸದಿದ್ದರೆ, ಮುಂದಿನ ದಿನಗಳಲ್ಲಿ ಈ ಕಡೆ ಕೋಲಾರ ಜಿಲ್ಲೆ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ ಇವೆಲ್ಲಾ ಜಿಲ್ಲೆಗಳ ರೈತನು ಜಮೀನಿಲ್ಲದೇ ಬೀದಿಗೆ ಬೀಳುವಂಥ ಅವಕಾಶವಿದೆ. ಇದಕ್ಕೆ ನೀವೆಲ್ಲರೂ ಗಮನಹರಿಸಬೇಕು. ಅದರಲ್ಲಿಯೂ ಕಂದಾಯ ಮಂತ್ರಿಗಳು ಇದರ ಮೇಲೆ ಹೆಚ್ಚಿಗೆ ಗಮನಹರಿಸಬೇಕೆಂದು ಹೇಳುತ್ತೇನೆ. ಬರದ ಪರಿಹಾರ ಬಗ್ಗೆ ಮತ್ತು ಕುಡಿಯುವ ನೀರಿನ ವಿಷಯದಲ್ಲಿ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇನ್ನು ಮುಂದಾದರೂ ಕೂಡ ಈ ಬಗ್ಗೆ ಎಚ್ಚರಿಕೆ ವಹಿಸಿ ಒಂದು war–footing ನಲ್ಲಿ ಕುಡಿಯುವ ನೀರಿಗೆ ಆದ್ಯತೆಗಳನ್ನು ಕೊಡಬೇಕೆಂದು ನಿಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿ, ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟ ನಿಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು: ಈಗ ಸರ್ಕಾರದಿಂದ ಉತ್ತರ. ಈಗಾಗಲೇ 1.45 ಗಂಟೆಯಾಗಿದೆ. ಈಗ ಉತ್ತರ ಬೇರೆ ಬರಬೇಕಾಗಿದೆ. ನೀವು ಅವಕಾಶ ಕೇಳಿದಿರಿ ಇಲ್ಲವೆಂದಲ್ಲ. ಈಗ ವಿಷಯದ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಈಗ ತಮಗೂ ಗೊತ್ತಿದೆ. ಈಗ ತಾವು ಸ್ವಲ್ಪ ಸಹಕಾರ ಕೊಟ್ಟರೆ ಸರ್ಕಾರದವರೇನು ಹೇಳುತ್ತಾರೆಂದು ನೋಡೋಣ.

ಶ್ರೀ ಬಿ.ಆರ್. ಪಾಟೀಲ್: ಬೇರೆಯವರಿಗೆಲ್ಲ ಗಂಟೆಗಟ್ಟಲೆ ಅವಕಾಶ ಕೊಟ್ಟಿರಿ.

ಉಪಾಧ್ಯಕ್ಷರು: ಹಾಗಾದರೆ, ಒಂದು ಕೆಲಸ ಮಾಡಿ. ಕೃಷ್ಣಮೂರ್ತಿಯವರೆ, 5 ನಿಮಿಷದಲ್ಲಿ ಮುಗಿಸಿ. ಇವರು ಮಾತನಾಡಿದ ಮೇಲೆ

ಪಾಟೀಲರೆ ತಾವು ಮಾತನಾಡಿ. ಅವರು ಮಾತನಾಡಲಿ. ನಾವು ಏನು ಮಾಡಬೇಕು?

(ಗೊಂದಲ)

ಉಪಾಧ್ಯಕ್ಷರು: ಕೃಷ್ಣಮೂರ್ತಿಯವರೆ, ನಾನು ನಿಮ್ಮನ್ನು ಕರೆದಿದ್ದೇನೆ. 5 ನಿಮಿಷದಲ್ಲಿ ನೀವು ಮಾತನಾಡಿ ಮುಗಿಸಿ. ಆಮೇಲೆ, ಪಾಟೀಲರು ಮಾತನಾಡಲಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಅಧ್ಯಕ್ಷರೇ, ಈಗಾಗಲೇ ಬಹಳ ದೀರ್ಘವಾಗಿ ಬರಗಾಲದ ಬಗ್ಗೆ ಚರ್ಚೆ ನಡೆದಿದೆ. ಅದು ವಾಸ್ತವಾಂಶ. ನಾನು ತಮ್ಮ ಮುಖಾಂತರ ಕಂದಾಯ ಸಚಿವರ ಗಮನ ಸೆಳೆಯುತ್ತಿದ್ದೇನೆ. ಈ ಬರಗಾಲ ಇವತ್ತು ಬಂದಿಲ್ಲ. 15–20 ವರ್ಷಗಳಿಂದ ನಮಗೆ ಬರಗಾಲ ಬಂದಿದೆ. ವಾಸ್ತವವಾಗಿ, ನಾವು ರಾಷ್ಟ್ರೀಯ ಮಳೆಯ ಸೂಚ್ಯಂಕವನ್ನು ತೆಗೆದುಕೊಂಡರೆ ರಾಜಸ್ಥಾನವನ್ನು ಬಿಟ್ಟರೆ ಅತ್ಯಂತ ಕಡಿಮೆ ಮಳೆ ಬೀಳುವ ರಾಜ್ಯ ಯಾವುದೇಂದರೆ ಅದು ಕರ್ನಾಟಕ ರಾಜ್ಯ. ಇವತ್ತು ಸರ್ಕಾರಕ್ಕೆ ನಾನು ಏನು ಒತ್ತಾಯ ಮಾಡುತ್ತೇನೆಂದರೆ, ಒಂದು ಶಾಶ್ವತವಾದಂಥ ಬರ ಪರಿಹಾರ ಮಾಡಲಿಕ್ಕೆ ಕ್ರಮ ಕೈಗೊಳ್ಳಬೇಕು. 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಈಗಾಗಲೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಆಗಸ್ಟ್ – ಸೆಪ್ಟೆಂಬರ್ ತಿಂಗಳಲ್ಲಿ ಘೋಷಣೆ ಮಾಡಿದ್ದಾರೆ. ಕೆಲವು ಕಡೆ ಮಳೆಯಾಗಿದ್ದರೆ ಕೆಲವು ಕಡೆ ಮಳೆಯಾಗಿಲ್ಲ. ಈ ಸಾರಿ ಪ್ರಕೃತಿ ವಿಕೋಪಕ್ಕೆ ನಾವು ಒಳಗಾದೆವು. ಮಾನ್ಯ ಶ್ರೀನಿವಾಸಗೌಡರು ಮತ್ತು ಇತರೇ ನಾಯಕರು ಹೇಳಿದ ಹಾಗೆ ಎಲ್ಲಾ ಆರ್ಥಿಕ ರಂಗದ ಮೇಲೆ ಇದರಿಂದ ಒಂದು ಪರಿಣಾಮ ಉಂಟಾಗುತ್ತದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಇರಬಹುದು, ಜಾನುವಾರಗಳಿಗೆ ಮೇವಿನ ಸಮಸ್ಯೆ ಇರಬಹುದು ಮತ್ತೆ ಬಡವರಿಗೆ ಕೂಲಿ ಕೊಡತಕ್ಕಂಥದು ಇರಬಹುದು. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಏನಾಗಿದೆ ಎಂದರೆ, ಅರ್ಧ ಭಾಗ ಮಲೆನಾಡುಭಾಗಕ್ಕೆ ಸೇರಿದ್ದರೆ ಉಳಿದ ಆರ್ಧ ಭಾಗ ಬಯಲು ಸೀಮೆಗೆ ಸೇರಿದೆ. ಕಡೂರು, ಬೀರೂರು, ತರೀಕೆರೆ ತಾಲ್ಲೂಕುಗಳಿಂದ ಮಲೆನಾಡು ಭಾಗಗಳಿಗೆ ಕೂಲಿಗಾಗಿ ಹೋಗುತ್ತಾರೆ. ಅಲ್ಲಿ ಕಾಫಿ ಬೆಳೆಗಾರರು 120 ರಿಂದ 130 ರೂಪಾಯಿಗಳವರೆಗೆ ಕೂಲಿ ಕೊಡುತ್ತಿದ್ದಾರೆ. ಆದರೆ, ನಮ್ಮಲ್ಲಿ 60 ಅಥವಾ 58 ರೂಪಾಯಿ ಅಥವಾ 40% ಅಕ್ಕಿ , 60% ಹಣವನ್ನು ಕೊಡುವಂಥ ಒಂದು

ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇನ್ನು ಕುಡಿಯುವ ನೀರಿನ ಸಮಸ್ಯೆ ಕೂಡ ಬಹಳ ಅಗಾಧವಾಗಿದೆ. ಇದಕ್ಕಾಗಿ ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಅಕ್ಟೋಬರ್ ತಿಂಗಳಲ್ಲಿ ಕೊಟ್ಟಿದ್ದಾರೆ. ಅಕ್ಟೋಬರ್ ತಿಂಗಳಲ್ಲಿ ಹಣ ಕೊಟ್ಟಿದ್ದರೂ ಕೂಡ ಇನ್ನು ಕಾರ್ಯಗತ ಏಕೆ ಆಗುತ್ತಿಲ್ಲ? ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿರತಕ್ಕಂಥ ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಸಹ ಇಲ್ಲಿಯೇ ಇದ್ದಾರೆ. ಅದ್ದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಕ್ರಿಯಾ ಯೋಜನೆಯನ್ನು ಅಧಿಕಾರಿಗಳು ಮಾಡಿಕೊಟ್ಟಿದ್ದಾರೆ. ಅಧಿಕಾರಿಗಳು ಇದನ್ನು ಮಾಡಿಕೊಟ್ಟಿದ್ದರೂ ಕೂಡ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿಗಳಿಗೆ ಏನು ಆದೇಶ ನೀಡಿದ್ದಾರೆಂದರೆ, ತಾಲ್ಲೂಕು ಮಟ್ಟದಲ್ಲಿ ಕ್ರಿಯಾ ಯೋಜನೆ ಮಾಡಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿದ್ದಾರೆ. ಆದರೆ, ಇದುವರೆಗೂ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಆಗಿಲ್ಲ. ಇಲ್ಲಿ ಜನಪ್ರತಿನಿಧಿಗಳದು ಮತ್ತು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರದು ಕೂಡ ಯಾವುದೇ ತಪ್ಪಿಲ್ಲ. ಆದರೆ, ಫೆಬ್ರವರಿ ತಿಂಗಳಾದರು ಹಣವನ್ನು ಖರ್ಚು ಮಾಡಿಲ್ಲದಿದ್ದರೆ ಹೇಗೆ? ಕರ್ನಾಟಕ ಅಭಿವೃದ್ಧಿ ಸಭೆಯಲ್ಲಿ ನಾನು ಒಂದು ವಿಷಯದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರ ಗಮನವನ್ನು ಸೆಳೆದೆ. ಅದೇನೆಂದರೆ, ಕಂದಾಯ ಇಲಾಖೆಯಿಂದ ಜಿಲ್ಲಾಧಿಕಾರಿಯವರಿಗೆ ಕೊಟ್ಟಿರುವ ಒಂದು ಕೋಟಿ ರೂಪಾಯಿಗಳಲ್ಲಿ ಕುಡಿಯುವ ನೀರಿಗೆ ಅವಕಾಶವನ್ನು ಮಾಡಿಕೊಡಿ ಎಂದು ಕೇಳಿದೆ. ಅದಕ್ಕೆ ಜಿಲ್ಲಾಧಿಕಾರಿಗಳು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಮುಂದೆ ಏನು ಹೇಳಿದರೆಂದರೆ, ಪ್ರಕೃತಿ ವಿಕೋಪದಡಿಯಲ್ಲಿ ಹ್ಯಾಂಡ್ ಪಂಪ್ ಹಾಕಬಹುದೇ ಹೊರತು ಬೇರೆ ರೀತಿಯಾದ ಪೈಪ್ ಲೈನ್ ಹಾಕುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ವಾಸ್ತವವಾಗಿ ಸರ್ಕಾರ ಈಗಾಗಲೇ ಗ್ರಾಮೀಣಾಭಿವೃದ್ಧಿಯಲ್ಲಿ ಬೇಕಾದಷ್ಟು ಯೋಜನೆಗಳನ್ನು ರೂಪಿಸಿದ್ದು, ಕಿರುನೀರು ಸರಬರಾಜು ಮತ್ತು ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗೆ ನಮ್ಮ ಜಿಲ್ಲೆಯ ಜಿಲ್ಲಾಪಂಚಾಯತ್‌ನಲ್ಲಿ 8 ಕೋಟಿ ರೂಪಾಯಿಗಳಷ್ಟಿದೆ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಿಂದ ಈ ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತಿನ ದಿವಸ ಗ್ರಾಮ ಪಂಚಾಯತ್‌ಗಳಿಗೆ ಅಧಿಕಾರ ಕೊಟ್ಟಿರುವುದರಿಂದ ಟೆಂಡರ್‌ನ್ನು ಕೂಡ ಗ್ರಾಮ ಪಂಚಾಯತ್‌ನವರೇ

ಕರೆಯಬೇಕೆಂಬ ವ್ಯವಸ್ಥೆಯಿಂದ ಏನಾಗಿದೆ ಎಂದರೆ, ಶೇಕಡ 75% ಹಣ ಕೂಡ ಖರ್ಚು ಮಾಡದಿರುವುದರಿಂದ ಕಳೆದ ವರ್ಷದ ಕೆಲಸವನ್ನು ಈ ವರ್ಷ ಮಾಡುವುದಕ್ಕೆ ಆಗಿಲ್ಲ. ಇವತ್ತು ಸರ್ಕಾರ ಏನೇ ಹಣ ಕೊಟ್ಟರೂ ಕೂಡ ಅದು ಕೇವಲ ಪತ್ರಿಕಾ ಹೇಳಿಕೆಯಾಗಿದೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲವೆಂದು ತಮ್ಮ ಮುಖಾಂತರ ನಾನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಕಾರ್‌ಜೋಳ್‌ರವರು ಕುಡಿಯುವ ನೀರಿನ ಮಿನಿಸ್ಟರ್ ಆಗಿದ್ದಂಥ ಸಂದರ್ಭದಲ್ಲಿ ಟಾಸ್ಕ್ ಫೋರ್ಸ್‌ನ್ನು ಮಾಡಿದ್ದರು. ಹೋದ ವರ್ಷ ಬರಗಾಲವನ್ನು ನಿವಾರಣೆಮಾಡುವುದಕ್ಕೆ ನಾವೂ ಕೂಡ ಕಾರ್ಯಕ್ರಮಗಳನ್ನು ಕೈಗೊಂಡು ಹೆಚ್ಚು ಕಡಿಮೆ ನಮ್ಮ ಜಿಲ್ಲೆಯಲ್ಲಿ 4.5 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಿದ್ದೇವೆ. ಮಾನ್ಯ ಸಚಿವರು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಕಮಿಟಿ ಮಾಡಿ ತುರ್ತು ಕ್ರಮವನ್ನು ಕೈಗೊಳ್ಳಬೇಕೆಂಬ ಆದೇಶವನ್ನು ನೀಡಿದ್ದರಿಂದ ನಾವು ಧೈರ್ಯದಿಂದ ಕೆಲಸ ಮಾಡುವುದಕ್ಕೆ ನಮಗೆ ಸಾಧ್ಯವಾಯಿತು. ಆದರೆ, ಕಳೆದ ವರ್ಷದ ಬಾಕಿಯನ್ನು ನಾವು ಇನ್ನು ಕೊಡುವುದಕ್ಕೆ ಆಗಲಿಲ್ಲ. ನನ್ನ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುಕಡಿಮೆ ಸುಮಾರು 48 ಲಕ್ಷ ರೂಪಾಯಿಗಳಷ್ಟು ಬಾಕಿ ಇದೆ. ನಾವು ಈಗಾಗಲೇ ಫೆಬ್ರವರಿ ತಿಂಗಳಿಗೆ ಬಂದಿದ್ದೇವೆ. ಆದರೂ ಕೂಡ ಇನ್ನು ಬಾಕಿ ಹಣ ಕೊಟ್ಟಿಲ್ಲ. ಇವತ್ತಿನ ದಿವಸ ಮೆಸ್ಕಾಂ ಪರಿಸ್ಥಿತಿ ಏನಾಗಿದೆಂದರೆ, ಒಂದು ದಿವಸಕ್ಕೆ 16 ಗಂಟೆಗಳ ಕಾಲ ಸಿಂಗಲ್ ಫೇಜ್ ಕರೆಂಟ್ ಕೊಡುತ್ತಿದ್ದಾರೆ. ಆದರೆ, 2 ಮತ್ತು 3 ಫೇಜ್ ಕರೆಂಟ್‌ನ್ನು ಕೇವಲ ನಾಲ್ಕರಿಂದ ಐದು ಗಂಟೆಗಳವರೆಗೆ ಕೊಡುತ್ತಿದ್ದಾರೆ. ಒಂದು ಕಡೆ ಕರೆಂಟ್‌ನ ತೊಂದರೆಯ ಜೊತೆಗೆ ಇವತ್ತಿನ ದಿವಸ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಫೆಬ್ರವರಿ ಮತ್ತು ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಜಾತ್ರೆ, ಮದುವೆ ಮತ್ತು ಧಾರ್ಮಿಕ ಸಮಾರಂಭಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಸುಮಾರು 10 ರಿಂದ 15 ಸಾವಿರ ಜನ ಸೇರುತ್ತಾರೆ. ಆದರೆ, ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ಅಗಾಧವಾಗಿದೆ. ಆದ್ದರಿಂದ ಜಿಲ್ಲಾಪಂಚಾಯತ್ ಮುಖಾಂತರ ಟಾಸ್ಕ್ ಫೋರ್ಸ್‌ಗೆ ಹಣ ಕೊಡಬೇಕೆಂದು ಮಾನ್ಯ ಉದಾಸಿಯವರು ಒಂದು ಆದೇಶವನ್ನು ಕೊಟ್ಟಿದ್ದಾರೆ. ಆದರೆ, ಟಾಸ್ಕ್ ಫೋರ್ಸ್ ಮೂಲಕ ಮಾಡಿರುವಂಥ

ಕಾಮಗಾರಿಗಳಿಗೆ ಜಿಲ್ಲಾಪಂಚಾಯತ್ ಮೂಲಕ ಹಣವನ್ನು ಕೊಡತಕ್ಕಂಥ ವ್ಯವಸ್ಥೆ ಆಗುತ್ತಿಲ್ಲ. ಈ ವಿಷಯವನ್ನು ನಾನೂ ಈಗಾಗಲೇ ಗಾಮೀಣಾಭಿವೃದ್ಧಿ ಇಲಾಖೆಯ ಸಚಿವರ ಗಮನಕ್ಕೂ ಕೂಡ ತಂದಿದ್ದೇನೆ. ನಾವೂ ಬರಗಾಲವನ್ನು ನಿವಾರಣೆ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಆದರೆ,ಇವತ್ತಿನ ದಿವಸ ಬರಗಾಲದಿಂದ ರೈತರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಂಥ ರೈತ ಕುಟುಂಬಕ್ಕೆ ಸರ್ಕಾರ ಏನಾದರೂ ಪರಿಹಾರ ಕೊಡಬೇಕಾಗುತ್ತದೆ. ಈವತ್ತಿನ ದಿವಸ ರೈತನಿಗೆ ಒಂದು ಹೊತ್ತಿನ ಊಟ ಮಾಡಲಿಕ್ಕೂ ಆಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಬರವನ್ನು ನಿವಾರಣೆ ಮಾಡುವುದಕ್ಕೋಸ್ಕರ ಒಂದು ಶಾಶ್ವತವಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈಗಾಗಲೇ ಭದ್ರ ಮೇಲ್ದಂಡೆ ಯೋಜನೆಯನ್ನು ಈಗೇನು ಅನುಷ್ಠಾನಕ್ಕೆ ತಂದಿದ್ದಾರೆ ಅದರ ಬಗ್ಗೆ ನೀರಾವರಿ ತಜ್ಞರಿಂದ ತನಿಖೆ ಮಾಡಿಸಿ ಅದರ ಸಾಮರ್ಥ್ಯವನ್ನು ಹೆಚ್ಚಿಸಿ ಇನ್ನೂ ಹೆಚ್ಚಿನ ನೀರಾವರಿ ಅವಕಾಶವನ್ನು ಕಲ್ಪಿಸಬಹುದೆಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟುಪಡುತ್ತೇನೆ. ಇವತ್ತಿನ ದಿವಸ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಈಗಾಗಲೇ ಇರತಕ್ಕಂಥ ಟಾಸ್ಕ್ ಫೋರ್ಸ್‌ಗೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಈ ಹಣವನ್ನು ಗ್ರಾಮೀಣಾಭಿವೃದ್ಧಿ ಅಥವಾ ಕಂದಾಯ ಇಲಾಖೆಯ ಮುಖಾಂತರ ಕೊಡುತ್ತೀರೋ ಅದು ನನಗೆ ಗೊತ್ತಿಲ್ಲ. ಕಂದಾಯ ಇಲಾಖೆ ಮುಖಾಂತರ ಕೊಡುವುದಕ್ಕೆ ಬರುವುದಿಲ್ಲವೆಂದು ನಮ್ಮ ಕೆಡಿಪಿ ಸಭೆಯಲ್ಲಿ ತೀರ್ಮಾನ ತೆಗೆದು ಕೊಂಡಿರುವುದರಿಂದ ಇದರ ಬಗ್ಗೆ ನಮ್ಮ ಉಸ್ತುವಾರಿ ಸಚಿವರ ಗಮನಕ್ಕೆ ತರುವುದೇನೆಂದರೆ ಸದರಿ ವಿಷಯದ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಿ ಕಳೆದ ವರ್ಷ ಬಾಕಿ ಇರತಕ್ಕಂಥ ಹಣವನ್ನು ಕೊಡುವುದರ ಜೊತೆಗೆ ಈ ವರ್ಷದ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಹೆಚ್ಚು ಹಣ ಕೊಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರಲ್ಲಿ ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ಈಗಾಗಲೇ ಸುಮಾರು ನಾಲ್ಕೈದು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಏಕೆಂದರೆ, ಮುಂಗಾರು ಮಳೆಯಿಂದ ನಮಗೆ ಬೆಳೆ ಬರಲಿಲ್ಲ. ಮತ್ತೆ ಜಾನುವಾರುಗಳನ್ನು

ಸಂತೆಗೆ ತೆಗೆದುಕೊಂಡು ಹೋದರು ಅಲ್ಲಿ ಕೊಳ್ಳುವವರೇ ಇಲ್ಲದಿರುವುದರಿಂದ ಅಲ್ಲಿ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿದೆ. ಆದ್ದರಿಂದ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಬಿ.ಆರ್.ಪಾಟೀಲ್‌ರವರೆ, ತಾವು ಮಾತನಾಡಿ. 5 ನಿಮಿಷದೊಳಗೆ ತಮ್ಮ ಮಾತನ್ನು ಮುಗಿಸಬೇಕು.

ಶ್ರೀ ಬಿ.ಆರ್. ಪಾಟೀಲ್: ನಾನು ಮಾತನಾಡುವುದಕ್ಕಿಂತ ಮುಂಚಿತವಾಗಿಯೇ ತಾವು ಈ ರೀತಿಯಾದ ಮಾನಸಿಕ ಇಕ್ಕಟಿಗೆ ಸಿಕ್ಕಿಸಿದರೆ ನಾನು ಮಾತನಾಡುವುದಕ್ಕೆ ಕಷ್ಟವಾಗುತ್ತದೆ.

ಉಪಾಧ್ಯಕ್ಷರು: 5 ನಿಮಿಷ ಟೈಂ ನೋಡಿಕೊಂಡು ಕರೆಕ್ಟ್ ಆಗಿ ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಇದು ನನ್ನ ತಪ್ಪಲ್ಲ. ಇಷ್ಟು ಜನ ಧೀರ್ಘವಾಗಿ ಮಾತನಾಡಿದಾಗ ನಮ್ಮಂಥವರಿಗೆ ಕಡೆಗೆ ಟೈಂ ಸಿಗದಿದ್ದರೆ ಹೇಗೆ?

ಉಪಾಧ್ಯಕ್ಷರು: ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಎಷ್ಟು ಹೊತ್ತು ಬೇಕಾದರೂ ಮಾತನಾಡಬಹುದು.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ನಾವು ವಾಸ್ತವವಾಗಿ ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕಾಗಿದೆ. ಆದರೆ, ತಾವೂ 5 ನಿಮಿಷ ಸಮಯ ನಿಗದಿ ಮಾಡಿದರೆ ಏನಾಗುತ್ತೆ ಹೇಳಿ.

ಉಪಾಧ್ಯಕ್ಷರು: ಅಯಿತು. 10 ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಿ. ಈಗ ಸಮಯ ವೇಸ್ಟ್ ಮಾಡುವುದು ಬೇಡ ತಾವು ಮಾತನಾಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಈಗ ಏನಾಗಿದೆಂದರೆ, ತೆನಾಲಿ ರಾಮಕೃಷ್ಣ ಬೆಕ್ಕಿಗೆ ಬಿಸಿ ಹಾಲಿಟ್ಟಂತಾಗಿದೆ.

ಶ್ರೀ ಬಿ.ಆರ್.ಪಾಟೀಲ್(ಆಳಂದ): ಮಾನ್ಯ ಉಪಾಧ್ಯಕ್ಷರೆ, ಬರಗಾಲದ ವಿಷಯ ಸದನದಲ್ಲಿ ಬಹಳ ಗಂಭೀರವಾಗಿ ಚರ್ಚೆಯಾಗುತ್ತಿದೆ. ಈ ವಿಷಯವನ್ನು ನಾವೂ ಕೂಡ ಬಹಳ ದು:ಖದಿಂದ ಹೇಳಬೇಕಾಗುತ್ತದೆ. ಏಕೆಂದರೆ, ಇದರ ಬಗ್ಗೆ ನಾವು ಎಷ್ಟೋ ಜನ ಬಹಳ ಪ್ರಾಮಾಣಿಕವಾಗಿ ತಲೆಕೆಡಿಸಿಕೊಂಡು ಕಾಳಜಿ ಪೂರಕವಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ಪರಿಹಾರವನ್ನು ಕಂಡು ಹಿಡಿಯಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ

ಎನ್ನತಕ್ಕಂಥದರ ಬಗ್ಗೆ ಆತ್ಮಾವಲೋಕನವನ್ನು ನಮ್ಮಷ್ಟಿಗೆ ನಾವು ಮಾಡಿಕೊಂಡು ನಾವು ಇದರ ಬಗ್ಗೆ ಹೇಳಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರು ಬಹಳ ಧೀರ್ಘವಾಗಿ ನಿನ್ನೆ ದಿವಸ ಈ ಎಲ್ಲಾ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಇಲ್ಲಿ ಹೇಳಬೇಕಾಗಿರತಕ್ಕಂಥ ಒಂದು ವಿಷಯ ಏನೆಂದರೆ, ಇವತ್ತಿನ ದಿವಸ ಬರಗಾಲ ಖಾಯಂ ಆಗಿ ಕೇವಲ ಕರ್ನಾಟಕ ಅಥವಾ ದೇಶಕ್ಕಲ್ಲದೆ ಇಡೀ ಜಗತ್ತಿನಲ್ಲಿಯೇ ಭಯಾನಕವಾಗಿ ಕಾಡತಕ್ಕಂಥ ಒಂದು ದೊಡ್ಡ ಸಮಸ್ಯೆಯಾಗಿದೆ. ಒಂದು ವಾರದಿಂದೀಚೆಗೆ ನ್ಯೂಯಾರ್ಕ್‌ನಲ್ಲಿ ಸುಮಾರು 154 ರಾಷ್ಟ್ರಗಳ ವಿಜ್ಞಾನಿಗಳು ಒಂದು ಜಾಗತಿಕ ಸಮಾವೇಶವನ್ನು ನಡೆಸಿದ್ದಾರೆ. ಇಡೀ ಭೂಮಂಡಲದಲ್ಲಿ ಯಾವ ರೀತಿ ಹವಾಮಾನದ ವೈಪರೀತ್ಯ ಹೆಚ್ಚಾಗಿ ಭೂಮಿ ಬಿಸಿಯಾಗುತ್ತಿದೆ ಎಂದು ಗಂಭೀರವಾದ ಚಿಂತನೆ ಹಾಗೂ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪರಿಹಾರವನ್ನು ಕಂಡುಕೊಳ್ಳುವ ಒಂದು ಚಿಂತನೆ ಜಾಗತಿಕ ಮಟ್ಟದಲ್ಲಿ ನಡೆದಿದೆ ಎನ್ನುವ ವಿಷಯವನ್ನು ಪತ್ರಿಕೆಯಲ್ಲಿ ಓದಿದ್ದೇವೆ. ಇವತ್ತು ಬರ ಎಲ್ಲಿ ಇರುತ್ತದೆ ಅಲ್ಲಿ ಬಡತನ ಕೂಡ ಹೆಚ್ಚಿಗೆ ಇರುತ್ತದೆ ಎನ್ನುವುದನ್ನು ಅನುಭವದಿಂದ ಹಾಗೂ ಅಧ್ಯಯನದಿಂದ ಕಂಡುಕೊಂಡಿದ್ದೇವೆ. ಬರಕ್ಕೂ ಬಡತನಕ್ಕೂ ನೇರವಾದ ಸಂಬಂಧವಿದೆ. ಬರ ಒಂದು ಶಾಪವಾಗಿ ಇಂದು ಪರಿಣಮಿಸಿದೆ. ಇದರಿಂದ, ನಾವು ಮುಕ್ತರಾಗುವ ಅವಶ್ಯಕತೆ ಇದೆ. ಅದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕು. ನಾವು ಸದನದ ಹೊರಗಡೆಯೂ ಹಾಗೂ ಅದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕು. ನಮ್ಮ ದಿನನಿತ್ಯದ ಜೀವನದಲ್ಲಿಯೂ ಕೂಡ ಈ ಪರಿಸರವನ್ನು ಹೇಗೆ ಉಳಿಸಿಕೊಳ್ಳಬೇಕು, ಇದನ್ನು ಹೇಗೆ ನಿಭಾಯಿಸಬೇಕು, ಇದರ ಬಗ್ಗೆ ಸಂಬಂಧಪಟ್ಟಂತಹ ತಂತ್ರಜ್ಞರನ್ನು, ವಿಜ್ಞಾನಿಗಳನ್ನು, ಪರಿಸರವಾದಿಗಳನ್ನು ನಾವು ಕರೆದು ಚರ್ಚೆ ಮಾಡಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದರೆ ಮಾತ್ರ ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಸುಮಾರು 30 ವರ್ಷಗಳಿಂದ ಈ ಬರಗಾಲದ ಬಗ್ಗೆ ಮಾತನಾಡುತ್ತಿದ್ದೇವೆ. ನೀರಿನ ಸಮಸ್ಯೆ, ದಿನನಿತ್ಯವು ಹೆಚ್ಚಿಗೆ ಆಗಿ ಇವತ್ತು ಭೂಮಿಯಲ್ಲಿ ಅಂತರ್ಜಲ ದಿನದಿಂದ ದಿನಕ್ಕೆ ಕುಸಿಯುತ್ತಾ ಹೋಗುತ್ತಿದೆ. ಅದು ಮೇಲೆ ಬರುವುದಕ್ಕೆ ಸಾಧ್ಯವೇ ಆಗಿಲ್ಲ. ದೇಶದ ಸುಮಾರು 7 ರಾಜ್ಯಗಳಲ್ಲಿ ಕರ್ನಾಟಕವು ಕೂಡ

ಒಂದು ಅಂತರ್‌ಜಲ ಅತಿ ಹೆಚ್ಚು ಕುಸಿದಿರುವಂತಹ ರಾಜ್ಯದಲ್ಲಿ ಒಂದಾಗಿದೆ ಎನ್ನುವುದನ್ನು ಕೂಡ ನಾವು ಇಲ್ಲಿ ಮರೆಯಬಾರದು. ಆದರೆ ಅಭಿವೃದ್ಧಿ ಹೊಂದದ ದೇಶಗಳಲ್ಲಿ under development countries ಎಂದು ಏನು ಕರೆಯುತ್ತೇವೆ. ನಾವು ಇದರ ಬಗ್ಗೆ ಹೆಚ್ಚಿಗೆ ತಲೆಯನ್ನು ಕೆಡಿಸಿಕೊಂಡು ಇದಕ್ಕೆ ಒಂದು ದಾರಿಯನ್ನು ಕಂಡುಹಿಡಿಯುವಂತಹ ಒಂದು ಪ್ರಯತ್ನವನ್ನು ರಾಷ್ಟ್ರಸರ್ಕಾರ ಮತ್ತು ರಾಜ್ಯಸರ್ಕಾರ ಈ ದಿಕ್ಕಿನಲ್ಲಿ ನಾವು ಹೋಗದೇ ಇದ್ದರೆ ಮುಂದೆ ಪರಿಸ್ಥಿತಿ ಗಂಭೀರವಾಗುತ್ತದೆ. ನಾನು ಯಾವ ಪಂಚಾಂಗದಲ್ಲಿ, ನಕ್ಷತ್ರದಲ್ಲಿ, ನನಗೆ ನಂಬಿಕೆ ಹಾಗೂ ವಿಶ್ವಾಸವಿಲ್ಲ. ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಇದೇ ಪರಿಸ್ಥಿತಿಯು ಮುಂದುವರೆದರೆ ಮುಂದಿನ ಹತ್ತು ವರ್ಷಗಳಲ್ಲಿ ನಮಗೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ ಎಂಬ ಭಯಾನಕವಾದಂತಹ ವಾತಾವರಣವನ್ನು ನಾವು ಎದುರಿಸುತ್ತಿದ್ದೇವೆ. ಈ ಒಂದು ಎಚ್ಚರಿಕೆಯ ಗಂಟೆಯನ್ನು ನಾವು ಕೇಳಿಕೊಂಡು ಬರಪರಿಹಾರದ ಬಗ್ಗೆ ಒಂದು ಶಾಶ್ವತವಾದ ಉತ್ತರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಾವು ಶಾಸನ ಸಭೆಯಲ್ಲಿ ಕುಳಿತುಕೊಂಡು ಮಾತನಾಡುತ್ತೇವೆ. ಡಾ.ರಾಮಮನೋಹರ ಲೋಹಿಯಾರವರು ಇವತ್ತು ರಾಜಕಾರಣಿಗಳ ಬಗ್ಗೆ ಒಂದು ವ್ಯಾಖ್ಯಾನವನ್ನು ಮಾಡಿದರು. ಒಬ್ಬ ರಾಜಕಾರಣಿ ಚುನಾವಣೆ ಬಂದಾಗ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದು ಜನರ ಸೇವೆಯನ್ನು ಮಾಡಬೇಕು. ಸಾರ್ವಜನಿಕ ಜೀವನದಲ್ಲಿದ್ದು ರಚನಾತ್ಮಕವಾದ ಕಾರ್ಯಗಳನ್ನು ಮಾಡಿ ಜವಾಬ್ದಾರಿಯನ್ನು ನಿರ್ವಹಿಸಬೇಕು. ಎಲ್ಲಿ ಅನ್ಯಾಯವಾಗುತ್ತಿದೆ, ಆ ಅನ್ಯಾಯದ ವಿರುದ್ಧ ಹೋರಾಟವನ್ನು ಮಾಡಿ ಜೈಲಿಗೆ ಹೋಗಬೇಕು, ಈ ಮೂರು ಮಂತ್ರಗಳನ್ನು ಡಾ.ಮನೋಹರ ಲೋಹಿಯಾರವರು ಇವತ್ತು ದೇಶದಲ್ಲಿ ರಾಜಕಾರಣವನ್ನು ಮಾಡುವವರಿಗೆ ಹೇಳಿದರು. ಆದರೆ ದುರ್ದೈವದಿಂದ ಸದನದಲ್ಲಿ ಮಾತ್ರ ಕ್ರಾಂತಿಕಾರಕ ಮಾತುಗಳನ್ನು ಹೇಳುತ್ತೇವೆಯೇ ಹೊರತಾಗಿ ನಾವು ನಮ್ಮ ಇಷ್ಟಕ್ಕೆ ನಮ್ಮನ್ನು ತೊಡಗಿಸಿಕೊಂಡು ಯಾವ ತಗರಹ ನಾವು ರಕ್ಷಣಾತ್ಮಕವಾದ ಕಾರ್ಯಗಳನ್ನು ಮಾಡಿ ಇಂತಹ ಒಂದು ಗಂಭೀರವಾದ ಸಮಸ್ಯೆಗೆ ಪರಿಹಾರವನ್ನು ಮಾಡಬೇಕೆಂದು ಬಹುತೇಕವಾಗಿ ಮರೆತಿದ್ದೇವೆ. ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಅದರ ವಿರುದ್ಧ ಹೋರಾಟವನ್ನು ಮಾಡಿ ಜೈಲಿಗೆ

ಹೋಗುವುದು ಇತ್ತೀಚೆಗೆ ಸಂಪೂರ್ಣವಾಗಿ ಮರೆತಿದ್ದೇವೆ. ಆ ಕಾರಣಕ್ಕಾಗಿಯೇ ಇವತ್ತು ಈ ಸಮಾಜದಲ್ಲಿ ಅನೇಕ ಲೋಪದೋಷಗಳನ್ನು ನಾವು ನೋಡುತ್ತಿದ್ದೇವೆ. ಇವತ್ತು ಬರ ಎಂದು ಸಮಸ್ಯೆ ಬಂದಾಗ, ಬುದ್ಧಿಗೂ ಸಹ ಬರ ಬಂದಿದೆ ಎಂದು ನಾವು ಮರೆಯಬಾರದು. ಬುದ್ಧಿಗೂ ಕೂಡ ಬರ ಬಂದಿದೆ. ಎಷ್ಟು ಪ್ರಾಮಾಣಿಕವಾಗಿ ಕಷ್ಟಪಟ್ಟು, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಮತ್ತು ಸಾರ್ವಜನಿಕರು ಮಾಡಬೇಕಾದಂತಹ ಕೆಲಸವನ್ನು ನಾವು ಇವತ್ತು ಮಾಡುತ್ತಿದ್ದೇವೆ ಎಂದು ನಾವು ಇವತ್ತು ಚಿಂತನೆ ಮಾಡಬೇಕಾಗಿದೆ. ಇವತ್ತು ಏನು ಅಂತರ್‌ಜಲ ಕುಸಿಯುತ್ತಿದೆ, ಈ ಅಂತರ್‌ಜಲವನ್ನು ಹೆಚ್ಚಿಸುವುದಕ್ಕೆ ಯಾವ ತರಹ ಮಹಾರಾಷ್ಟ್ರದವರು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಿದರು. ಅದೇ ತರಹ ಆಂಧ್ರಪ್ರದೇಶದಲ್ಲಿಯೂ ಕೂಡ ಪ್ರಾಮಾಣಿಕವಾದ ಪ್ರಯತ್ನಗಳು ನಡೆಯುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿಯೂ ಕೂಡ ಪ್ರಾಮಾಣಿಕವಾದ ಪ್ರಯತ್ನಗಳು ನಡೆಯುತ್ತಿದೆ. ಆದರೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ, ಕರ್ನಾಟಕದಲ್ಲಿ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸರ್ಕಾರ ಯಾವುದೇ ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡಿಲ್ಲವೆಂದು ಇವತ್ತು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಅಣ್ಣಾ ಹಜಾರೆ, ಇವತ್ತು ಈ ದೇಶದ ಒಬ್ಬ ಸಾಮಾಜಿಕ ಕಾರ್ಯಕರ್ತೆ. ಓಂದು ಅದ್ಭುತವಾದ ಸಾಧನೆಯನ್ನು ಮಾಡಿ ಇವತ್ತು ಅಲ್ಲಿ ಅಂತರ್‌ಜಲವನ್ನು ಹೆಚ್ಚಿಗೆ ಮಾಡಿ ಒಂದು ಯಶಸ್ವಿ ಪ್ರಯೋಗವನ್ನು ಮಹಾರಾಷ್ಟ್ರದ ಒಬ್ಬ ಸಾಮಾಜಿಕ ಕಾರ್ಯಕರ್ತ ಮಾಡಿದ್ದಾರೆಂದರೆ, ಇವತ್ತು ಕರ್ನಾಟಕದಲ್ಲಿ ಆ ತರಹ ನಾವು ಏತಕ್ಕೆ ಮಾಡಬಾರದು? ಅವರ ತಂತ್ರಜ್ಞಾನ ಅಮೇರಿಕಾ ಹಾಗೂ ಜಪಾನ್‌ನಿಂದ ತರಲಿಲ್ಲ. ಅಥವಾ world bank ನಿಂದ ಹಣವನ್ನು ತರಲಿಲ್ಲ. ಜನ ಸಮುದಾಯವನ್ನು ಕೂಡಿಸಿ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ಯಾವ ಅಣ್ಣಾ ಹಜಾರೆ ತನ್ನ ಊರಿನ 900 ಎಕರೆಯಲ್ಲಿ 700 ಎಕರೆ ಭೂಮಿಗೆ ನೀರನ್ನು ಕೊಡಿಸುವಂತಹ ಕೆಲಸವನ್ನು ಮಳೆಯ ಆಧಾರದಿಂದ ಮಾಡಿದ್ದಾರಲ್ಲಾ, ಆ ಪ್ರಯೋಗ ಇವತ್ತು ಕರ್ನಾಟಕದಲ್ಲಿ ಅಗಬೇಕು. ಅ ನಿಟ್ಟಿನಲ್ಲಿ ಪ್ರಯೋಗವಾಗಬೇಕು. ಅದಕ್ಕಾಗಿ ಇವತ್ತು ಅಂತರ್ಜಲವನ್ನು ಹೆಚ್ಚಿಗೆ ಮಾಡುವುದಕ್ಕೆ ಇವತ್ತು ಸರ್ಕಾರ ಧೀರ್ಘವಾದ ಮತ್ತು ಸಮಗ್ರವಾದಂತಹ

ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ತನ್ಮೂಲಕ ಇವತ್ತು ಕುಡಿಯುವ ನೀರಿನ ಸಮಸ್ಯೆಯ ಜೊತೆಗೆ ಹೈನುಗಾರಿಕೆಯ ಮೇಲೆ ದೊಡ್ಡ ಪರಿಣಾಮ ಬೀರಿದೆ. ಇವತ್ತು ಪಕ್ಷಿಜಗತ್ತು ಸಂಪೂರ್ಣವಾಗಿ ನಾಶವಾಗಿದೆ. ಆರೋಗ್ಯದ ಮೇಲೆ ಏನು ಪರಿಣಾಮ ಬಿದ್ದಿದೆ, ಇದಕ್ಕೆಲ್ಲಾ ಒಂದು ಪರಿಹಾರವನ್ನು ಕಂಡು ಹಿಡಿಯಬೇಕಾದರೆ ಅಂತರ್‌ಜಲವನ್ನು ಹೆಚ್ಚಿಗೆ ಮಾಡುವುದಕ್ಕೆ , ಈ ಬರ ಪರಿಹಾರದ ಮುಖಾಂತರ ನಾವು ಮಾಡದೇ ಹೋದರೆ ಇಂತಹ ಒಂದು ದೊಡ್ಡ ಪಾಪ, ನಾವು ಮಾಡಿದಹಾಗೆ ಆಗುತ್ತದೆಯೇನೋ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಮಾನ್ಯ ಸುರೇಶ್ ಹೆಬ್ಬಿಕರ್‌ರವರು ಈ ಕಾವೇರಿ ವಿವಾದದ ಬಗ್ಗೆ ಒಂದು ಸಲ ಚರ್ಚೆಗೆ ಸೇರಿದಾಗ ಒಂದು ಮಾತನ್ನು ಹೇಳಿದರು. ಇವತ್ತು ನಾವು ಈ Federal stateನಲ್ಲಿ ಅದು ಕರ್ನಾಟಕ, ತಮಿಳುನಾಡು, ಪಾಂಡಿಚೇರಿ, ಕೇರಳ ಆಗಿರಬಹುದು, ನಾವೆಲ್ಲರೂ ಕೂಡ ದಕ್ಷಿಣ ಭಾರತಕ್ಕೆ ಸೇರಿದವರಾಗಿದ್ದೇವೆ. ನಮ್ಮ ಮಧ್ಯೆ ನೀರಿಗಾಗಿ ನಾವು ಹೊಡೆದಾಡುತ್ತಿದ್ದೇವೆ ಹಾಗೂ ಬಡಿದಾಡುತ್ತಿದ್ದೇವೆ. ಇದೊಂದು ದುರ್ದೈವದ ಸಂಗತಿಯಾಗಿದೆ. ಆದರೆ ನಾವು ಮಳೆಯನ್ನು ಹೆಚ್ಚಿಗೆ ಮಾಡಿಕೊಳ್ಳಬೇಕಾಗಿದ್ದರೆ ನಾವು ಪರಿಸರದಲ್ಲಿ ಸಮತೋಲನವನ್ನು ತರಬೇಕೆಂಬ ಮಾತನ್ನು ಯಾರು ಹೇಳುತ್ತಿಲ್ಲ. ಅದಕ್ಕೆ ಅವರು ಸಲಹೆಯನ್ನು ಮಾಡಿದರು. ಇವತ್ತು ಪಶ್ಚಿಮಘಟ್ಟದಲ್ಲಿ ಅರಣ್ಯ ನಾಶವಾಗಿ ಹೋಗುತ್ತಿದೆ. ಕಾವೇರಿ ಏನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅರಣ್ಯ ನಾಶವಾಗಿ ಹೋಗಿದೆ. ಅಲ್ಲಿ ನಾವು ತನ್ಮೂಲಕ ಅರಣ್ಯವನ್ನು ಬೆಳೆಸಬೇಕು. ಮಳೆಯು ಹೆಚ್ಚಿಗೆ ಆದರೆ ಈ ನೀರಿನ ಸಮಸ್ಯೆಯು ಕೂಡ ಬಗೆಹರಿಯುತ್ತದೆ. ಈ ದಿಕ್ಕಿನಲ್ಲಿ ಚಿಂತನೆಯನ್ನು ಮಾಡಬೇಕೆಂದು ಆ ಒಂದು ಪರಿಸರವಾದಿಗಳು ಹೇಳಿದ ಮಾತನ್ನು ಕೂಡ ಇವತ್ತು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಹಾಗಾಗಿ ಬರಗಾಲ ಬಂದಿದೆ, ಸರ್ಕಾರದವರು ಹಣವನ್ನು ಬಿಡುಗಡೆ ಮಾಡಬೇಕು, ಹಾಗೂ ಖರ್ಚು ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರು ಹೇಳಿದಹಾಗೆ ಆ ಹಣ ಎಷ್ಟು ಖರ್ಚಾಗುತ್ತದೆ, ಎಷ್ಟು ಪೋಲಾಗುತ್ತಿದೆ, ಯಾರಿಗೆ ಮುಟ್ಟುತ್ತದೆ, ಯಾರಿಗೆ ಮುಟ್ಟುವುದಿಲ್ಲವೋ ಅದರ ಬಗ್ಗೆ ಗಮನವನ್ನು ಕೊಡುವುದಿಲ್ಲ. ಎಷ್ಟು ದುಡ್ಡು ಬರುತ್ತದೆ, ಎಷ್ಟು ಖರ್ಚಾಯಿತು, ಅದರ ಬಗ್ಗೆ ನಾವು ಕೇಳುತ್ತೇವೆ. ಆದರೆ ಎಷ್ಟು ಪ್ರಾಮಾಣಿಕವಾಗಿ ಅಲ್ಲಿ ಕೆಲಸವಾಗಿದೆ ಎನ್ನುವುದರ ಬಗ್ಗೆ ಯಾರೂ ಕೂಡ

ಗಮನಹರಿಸುವುದಿಲ್ಲ. ನಾನು ಮಾನ್ಯ ಸಚಿವರಾದ ಜಗದೀಶ್ ಶೆಟ್ಟರ್‌ರವರಿಗೆ ಅಭಿನಂದಿಸುತ್ತೇನೆ. ಇದರ ಬಗ್ಗೆ Third party inspectionನ್ನು ಅವರು ಹಾಕಿಕೊಂಡಿದ್ದಾರೆ. ಈ ರೀತಿ ಮಾಡಿದರೆ ಇದರ ಬಗ್ಗೆ ಕಡಿವಾಣವನ್ನು ಹಾಕಬಹುದು. ಇಲ್ಲದಿದ್ದರೆ ದುಡ್ಡು ಸಂಪೂರ್ಣವಾಗಿ ಪೋಲಾಗುತ್ತಿತ್ತು. ನಾನು ಮಾನ್ಯ ಸಚಿವರಾದ ಜಗದೀಶ್‌ಶೆಟ್ಟರ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಏನು ಬರಪರಿಹಾರಕ್ಕೆ ದುಡ್ಡನ್ನು ಕೊಡುತ್ತಿದ್ದೀರಿ, ಯಾವ ಕಾರಣಕ್ಕೋ ನಂಜುಂಡಪ್ಪ ವರದಿಯಲ್ಲಿ ಮತ್ತು ಹೈದರಾಬಾದ್ – ಕರ್ನಾಟಕ ಅಭಿವೃದ್ಧಿ ಮಂಡಳಿಗೆ ದುಡ್ಡನ್ನು ಕೊಟ್ಟಾಗ ಇಂತಿಂಥ sectorಗಳಿಗೆ ಇಷ್ಟಿಷ್ಟು ದುಡ್ಡು ಖರ್ಚು ಮಾಡಬೇಕೆಂದು ತಾವು ಏನು ಹೇಳುತ್ತೀರಿ, ಈ social sector, water shedಗೆ ಮತ್ತು ಬೇರೆ ಬೇರೆ ಕೆಲಸಗಳಿಗೆ ದುಡ್ಡನ್ನು ಖರ್ಚು ಮಾಡುವ ಬಗ್ಗೆ ಏನು ಇತಿಮಿತಿಯನ್ನು ಹಾಕುತ್ತೀರಿ, ಇದೇ ತರಹ ಈ ಬರಗಾಲಕ್ಕೆ ಬಿಡುಗಡೆ ಮಾಡುವಂತಹ ಹಣವನ್ನು ಸಹ ನೀವು ಅಂತರ್‌ಜಲವನ್ನು ಹೆಚ್ಚಿಸುವುದಕ್ಕೆ ಇಂತಿಷ್ಟು ದುಡ್ಡು, ರೋಡ್‌ಗೆ ಇಷ್ಟು ದುಡ್ಡು, ಬೇರೆ ಬೇರೆ ಕೆಲಸಗಳಿಗೆ ಇಷ್ಟು ದುಡ್ಡು ಖರ್ಚು ಮಾಡಬೇಕೆಂದು ನಿಬಂಧನೆಯನ್ನು ಹಾಕಿದರೆ ಈ ಕೆಲಸಗಳು ಕೂಡ ಆಗುವುದಕ್ಕೆ ಸಾಧ್ಯತೆ ಇದೆ. ಆ ಒಂದು ಕೆಲಸವನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾಡಬೇಕೆಂದು ಹೇಳುತ್ತೇನೆ. ಬರಗಾಲಕ್ಕೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಈಗ ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಹಣ ಬರೀ ಗ್ರಾಮೀಣ ಭಾಗಕ್ಕೆ ಖರ್ಚು ಮಾಡಬೇಕೆಂದು ಬಂಧನವನ್ನು ಹಾಕಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ತಾವು ನಮ್ಮ ಪಟ್ಟಣವನ್ನು ಸಹ ನೋಡಿದ್ದೀರಿ, ಇವು ಕೂಡ ದೊಡ್ಡ ಹಳ್ಳಿಗಳೆ ಆಗಿರುತ್ತದೆ. ಇವತ್ತು ಯಾವುದೇ ಕಾರ್ಖಾನೆಗಳು ಪಟ್ಟಣದಲ್ಲಿ ಇಲ್ಲ. ನೇಕಾರಿಕೆ ಇಲ್ಲ, ಬೀಡಿ ಕಾರ್ಮಿಕರು ಇಲ್ಲ, ಅಂತಹ ಕಡೆ ಪಟ್ಟಣದಲ್ಲಿರುವ ಕೂಲಿಕಾರ್ಮಿಕರೆಲ್ಲರೂ ಕೂಡ ಕೃಷಿ ಕಾರ್ಮಿಕರಾಗಿರುತ್ತಾರೆ. ಇವತ್ತು ನೀವು ಅವರಿಗೂ ಕೂಡ ವಂಚನೆ ಮಾಡಿದ್ದೀರಿ. ಅವರು ಎಲ್ಲಿಗೆ ಕೆಲಸಕ್ಕೆ ಹೋಗಬೇಕು? ಏನು ಸುದೈವದಿಂದ, ನಮ್ಮ ಕರ್ನಾಟಕದಲ್ಲಿ 5 ಜಿಲ್ಲೆಗಳು ಈ NREGP scheme ನಲ್ಲಿ ಸೇರಿವೆ. ಈ NREGPನಲ್ಲಿ ಬಂದರೂ ಕೂಡ ಪಟ್ಟಣಪ್ರದೇಶವನ್ನು ಸೇರಿಸಿಲ್ಲ. ಅಲ್ಲಿ ಯಾವುದಕ್ಕೆ ಎಷ್ಟು ಖರ್ಚು ಮಾಡಬೇಕೆಂಬುದರ ಬಗ್ಗೆ ಗ್ರಾಮಪಂಚಾಯಿತಿಯವರು ನಿರ್ಧಾರವನ್ನು

ಮಾಡಬೇಕು. ಹಾಗಾದರೆ ಇವತ್ತು ಪಟ್ಟಣಪ್ರದೇಶಗಳಲ್ಲಿರುವಂತಹ ಬಡ ಕೂಲಿಕಾರರು ಅವರಿಗೆ ಬಹಳ ದೊಡ್ಡ ಸಮಸ್ಯೆ ಉದ್ಭವವಾಗಿದೆ. ನಾವು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡುವಾಗ ಅವರು ಇಲ್ಲ ಬರ ಪರಿಹಾರಕ್ಕೆ ಬಂದಿರುವಂತಹ ಹಣವನ್ನು ಪಟ್ಟಣ ಪ್ರದೇಶಗಳ ಕೂಲಿ ಕೆಲಸ ಮಾಡುವವರಿಗೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಪಟ್ಟಣ ಪ್ರದೇಶದಲ್ಲಿರುವವರಿಗೆ ಜಮೀನುಗಳು ಇವೆ, ಅಲ್ಲಿ ಕೂಲಿ ಮಾಡುವಂತಹ ಜನರು ಇದ್ದಾರೆ, ಅಲ್ಲಿ ಕೃಷಿ ಇದೆ, ಅಲ್ಲಿ ನೀರಿನ ಸಮಸ್ಯೆ ಇದೆ, ಇದರ ಬಗ್ಗೆ ಸರ್ಕಾರದವರೂ ಇವತ್ತಿನವರೆಗೂ ಕೂಡ ಗಮನವನ್ನು ಹರಿಸಿರುವುದಿಲ್ಲ. ನಾನು ಈ ಬಗ್ಗೆ ಸಂಬಂಧಪಟ್ಟಂತಹ ಕಾರ್ಯದರ್ಶಿಯವರ ಕಛೇರಿಗೆ ಹೋಗಿ ಮಾತನಾಡಿದೆ. ನಮಗೆ ಕೈಕಟ್ಟಿದಂತೆ ಆಗಿದೆ, ಮೇಲಿನಿಂದ ನಿರ್ದೇಶನಗಳು ಇಲ್ಲ, ಪಟ್ಟಣ ಪ್ರದೇಶಗಳಿಗೆ ಬರಪರಿಹಾರದ ಹಣವನ್ನು ಖರ್ಚು ಮಾಡುವುದಕ್ಕೆ ಯಾವುದೇ ಅವಕಾಶವಿಲ್ಲ" ಎಂಬ ಮಾತನ್ನು ಅವರು ಹೇಳಿದರು. ಇದರ ಬಗ್ಗೆ ಮಾನ್ಯ ಸಚಿವರಾದ ಜಗದೀಶ್ ಶೆಟ್ಟರ್‌ರವರು ಈಳ ಬಗ್ಗೆ ದಿಟ್ಟವಾದ ಹೆಜ್ಜೆಯನ್ನು ಇಡಬೇಕು. ಏನೆಂದರೆ ಪಟ್ಟಣ ಪ್ರದೇಶದಲ್ಲಿರುವಂತಹ ಸುತ್ತಮುತ್ತಲಿರುವ ಜಮೀನಲ್ಲಿಯೂ ಕೂಡ ಕೂಲಿ ಮಾಡುವುದಕ್ಕೆ, ಬರಪರಿಹಾರದ ಹಣವನ್ನು ಖರ್ಚು ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಡುತ್ತೇವೆ ಎಂದು ಘೋಷಿಸಬೇಕು. ಹಾಗಾಗಿ, ಪಟ್ಟಣದಲ್ಲಿರುವಂತಹ ಕೂಲಿ ಮಾಡುವವರಿಗೆ, ಈ ಬರ ಪರಿಹಾರದ ಮುಖಾಂತರ ಕೂಲಿ ಮಾಡಿ ಅವರಿಗೆ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿ ಮಾನ್ಯ ಸಚಿವರಾದ ಶ್ರೀ ರವೀಂದ್ರನಾಥ್‌ರವರು ಕೂಡ ಇಲ್ಲಿ ಇದ್ದಾರೆ. ಇಲ್ಲಿ ಉದಾಸಿಯವರು ಇಲ್ಲ, ಈಗ KREGS ಎಂದು ಮಾಡಿದ್ದೀರಿ. NREGS ತೆಗೆದು KREGS ಮಾಡಿದ್ದಾರೆ. ಈಗ ಗ್ರಾಮೀಣ ಭಾಗದಲ್ಲಿ KREGS ಮುಖಾಂತರ ಸುಮಾರು 5 ಜಿಲ್ಲೆಗಳಲ್ಲಿ ಕೆಲಸವು ನಡೆದಿದೆ. ತಾವು ಕೂಡ ಅ ಜಿಲ್ಲೆಗೆ ಸೇರಿದವರಾಗಿದ್ದೀರಿ. ಈಗ ಕರ್ನಾಟಕದಲ್ಲಿ ಇದರಲ್ಲಿ 69.50 ಪೈಸೆ ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಕೊಡುತ್ತಿದ್ದೇವೆ. ಆದರೆ ಆಂಧ್ರಸರ್ಕಾರದವರು ಅದಕ್ಕೆ 100 ರೂಪಾಯಿಗಳನ್ನು ಹೆಚ್ಚಿಗೆ ಮಾಡಿ ಕೂಲಿ ಮಾಡಲಿ ಎಂದು ಅವಕಾಶವನ್ನು ಮಾಡಿಕೊಟ್ಟಿದೆ. ಅವರಿಗೆ ಹೆಚ್ಚಿಗೆ ಅನುಕೂಲವನ್ನು ಮಾಡಿಕೊಟ್ಟಿದೆ. ಅದೇ ಪ್ರಕಾರ ಕೇರಳ ಅವರಿಗೆ 120

ರೂಪಾಯಿಗಳ ಕೂಲಿಯನ್ನು ಕೊಡುವ ಬಗ್ಗೆ ಅವಕಾಶವನ್ನು ಮಾಡಿಕೊಟ್ಟಿದೆ. ನಾನು ಇವತ್ತು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ. ಇವತ್ತು ಕೂಲಿ ಮಾಡುವವರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅದು ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ,ಗುಲ್ಬರ್ಗಾ, ಬೀದರ್ ಇರಬಹುದು, ಇವತ್ತು ರೈತರೆ ತಮ್ಮ ಜಮೀನಿನಲ್ಲಿ 80 ರೂಪಾಯಿಗಳನ್ನು ಕೂಲಿ ಮಾಡುವವರಿಗೆ ಕೊಡುತ್ತಿರಬೇಕಾದರೆ, ಹಾಗಾದರೆ 69 ರೂಪಾಯಿಗೆ ಕೂಲಿ ಮಾಡುವುದಕ್ಕೆ ಯಾರು ಬರುತ್ತಾರೆ? ಅದಕ್ಕಾಗಿ ಸರ್ಕಾರದವರು ನೀವು ಏನು ಇವತ್ತು KREGSನಲ್ಲಿ 69.50 ಪೈಸೆ ಮಾಡಿದ್ದೀರಿ, ದಯಮಾಡಿ ಅಂಧ್ರಪ್ರದೇಶದ ಸರ್ಕಾರ ಕೂಲಿ ಕೆಲಸಕ್ಕೆ 100 ರೂಪಾಯಿಗಳನ್ನು ಮಾಡಿದೆ. ಕೇರಳ ಸರ್ಕಾರದವರು 120 ರೂಪಾಯಿಗಳನ್ನು ಮಾಡಿದ್ದಾರೆ. ಕನಿಷ್ಠ ನೀವು ಅಂಧ್ರಪ್ರದೇಶ ಸರ್ಕಾರದಷ್ಟು ಕೂಡ ಕೂಲಿ ಕೊಡುವಂತಹ ವ್ಯವಸ್ಥೆ ಮಾಡಿದರೆ ಈ ಕೂಲಿ ಮಾಡುವಂತಹ ಜನರು ಹೆಚ್ಚಿಗೆ ಬರುವುದಕ್ಕೆ ಸಾಧ್ಯತೆ ಆಗುತ್ತದೆ. ಅಂತಹ ಒಂದು ಕೆಲಸವನ್ನು ಮಾಡಬೇಕೆಂಬ ಮಾತನ್ನು ಹೇಳುತ್ತಾ ಇವತ್ತು ಪಟ್ಟಣ ಪ್ರದೇಶದಲ್ಲಿ ಕೂಲಿ ಮಾಡುವಂತಹ ಜನರಿಗೆ ಈ ಬರ ಪರಿಹಾರದಲ್ಲಿ ಕೆಲಸ ಮಾಡುವಂತಹ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬರಗಾಲ ಘೋಷಿತ ತಾಲ್ಲೂಕುಗಳಲ್ಲಿ ಚಿಕ್ಕೋಡಿ ತಾಲ್ಲೂಕು ಸೇರ್ಪಡೆಯಾಗಿಲ್ಲ. ಚಿಕ್ಕೋಡಿ ತಾಲ್ಲೂಕಿನ ಪೂರ್ವ ಭಾಗವು ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿದೆ. ಕಬ್ಬೂರು,ನಾಗರಮುನ್ನೋಳಿ, ಈ ಭಾಗ ಕೂಡ ಬರಗಾಲಕ್ಕೆ ತುತ್ತಾಗಿದೆ. ಹೋದ ಸಾರಿ ಈ ಬರಗಾಲ ಇದರಲ್ಲಿ ಚಿಕ್ಕೋಡಿ ಸೇರ್ಪಡೆಯಾಗಿತ್ತು. ಈ ಸಾರಿ ಸೇರ್ಪಡೆಯಾಗಿಲ್ಲ. ದಯವಿಟ್ಟು ಮಾನ್ಯ ಸಚಿವರು ಚಿಕ್ಕೋಡಿ ತಾಲ್ಲೂಕನ್ನು ಬರಗಾಲ ಪ್ರದೇಶವೆಂದು ಸಾರಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್.ಪಾಟೀಲ್: ತಾವು ಏನು ಹಣವನ್ನು ಬಿಡುಗಡೆ ಮಾಡುತ್ತೀರಿ, ಜನಸಂಖ್ಯೆಯ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಬೇಕು. ಇಲ್ಲಿ ಕೆಲವು ತಾಲ್ಲೂಕುಗಳಿಗೆ ಅನ್ಯಾಯವಾಗುತ್ತಿದೆ. ಕೆಲವು

ಕ್ಷೇತ್ರಗಳಿಗೆ ಜಾಸ್ತಿ ಹಣ ಸಿಗುತ್ತಿದೆ. Human development ಶುರುವಾಗುವುದು unit ಮೇಲೆ ನೀವು ಜನಸಂಖ್ಯೆಯ ಆಧಾರವನ್ನು ಪರಿಗಣನೆಗೆ ತೆಗೆದುಕೊಳ್ಳದೇ ಬರೀ ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಿದರೆ ಬಹಳ ಕಡೆ ಅನ್ಯಾಯವಾಗುತ್ತಿದೆ. ತಾವು ತಾಲ್ಲೂಕುವಾರು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೀರಿ, ಜನಸಂಖ್ಯೆಯ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಿದರೆ ಅಭಿವೃದ್ಧಿಗೆ ಬಹಳ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು: ಈಗ ಚರ್ಚೆಯು ಮುಗಿಯಿತು. ಮಧ್ಯಾಹ್ನ 3 ಗಂಟೆಗೆ ಸರ್ಕಾರದಿಂದ ಉತ್ತರ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳುತ್ತದೆ)

(ಸದನವು ಮತ್ತೆ 3.20 ಗಂಟೆಗೆ ಸಮಾವೇಶಗೊಂಡಿತು. ಉಪಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಉಪಾಧ್ಯಕ್ಷರು: ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಎಂ. ವಿಶ್ವನಾಥ್: ನಮ್ಮ ಕ್ಷೇತ್ರಗಳು ಬರದ. . . .

ಉಪಾಧ್ಯಕ್ಷರು: ಈಗಾಗಲೇ ಅದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ಹೆಚ್.ಎಂ. ವಿಶ್ವನಾಥ್: ಸ್ವಲ್ಪ ಹೇಳಬೇಕಾಗಿದೆ.ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ರೂಲಿಂಗ್ ಪಾರ್ಟಿಯವರು.

ಶ್ರೀ ಹೆಚ್.ಎಂ. ವಿಶ್ವನಾಥ್: ರೂಲಿಂಗ್ ಪಾರ್ಟಿಯವರಾದರೆ ನಾವೇನು ಮನುಷ್ಯರಲ್ಲವೇ? ನಾವು ಸದಸ್ಯರಲ್ಲವೇ? ನಾವು ಗೆದ್ದು ಬಂದಿಲ್ಲವೇ? ಅಲ್ಲಿ ಜನರ ಸಮಸ್ಯೆ ಇಲ್ಲವೇ?

ಉಪಾಧ್ಯಕ್ಷರು: ಮಾನ್ಯ ವಿಶ್ವನಾಥ್ ಅವರೇ, ಸಚಿವರು ಉತ್ತರವನ್ನು ಕೊಡಲಿ. ಸ್ಪಷ್ಟೀಕರಣ ಕೇಳುವ ಸಂದರ್ಭದಲ್ಲಿ ಬೇಕಾದರೆ ಮಾತನಾಡುವಿರಂತೆ. ಈಗ ಬೇಡ. ಅವರು ಉತ್ತರವನ್ನು ಕೊಟ್ಟುಬಿಡಲಿ. ಸ್ಪಷ್ಟೀಕರಣ ಬೇಕಾದರೆ ನಂತರ ಕೇಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ವಿಶ್ವನಾಥ್ ಅವರನ್ನು ನೋಡಿದರೆ ಅವರು ಬರಗಾಲ ಪ್ರದೇಶದಿಂದ ಬಂದವರಂತೆ ಕಾಣುತ್ತಾರಾ? (ನಗು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರ ಪ್ರಶ್ನೆ ಬೇರೆ. ನಾವು ಎಲ್ಲ ಮುಳುಗಿ ಹೋಗಿಬಿಟ್ಟಿದ್ದೇವೆ. ಅತಿವೃಷ್ಟಿಯಾಗಿದೆ ಎಂದು. ಇದು ಅತಿವೃಷ್ಟಿಗಲ್ಲ. ಇದು ಬರಗಾಲದ ಚರ್ಚೆ. ನಿಮಗೆಲ್ಲಿ ಬರಗಾಲ ಇದೇರಿ?

ಉಪಾಧ್ಯಕ್ಷರು:ವಿಶ್ವನಾಥ್ ಅವರೇ, ನೀವು ಆಮೇಲೆ ಸ್ಪಷ್ಟೀಕರಣವನ್ನು ಕೇಳಿ. ಮಂತ್ರಿಗಳು ಉತ್ತರವನ್ನು ಹೇಳಿಬಿಡಲಿ. ಈಗ ಬೇಡ.

ಶ್ರೀ ಹೆಚ್.ಎಂ. ವಿಶ್ವನಾಥ್: ಇದು ಅನ್ಯಾಯ ಸ್ವಾಮಿ.

ಉಪಾಧ್ಯಕ್ಷರು: ಎರಡು ನಿಮಿಷ ಮಾತ್ರ ಮಾತನಾಡಿ.

ಶ್ರೀ ಹೆಚ್.ಎಂ.ವಿಶ್ವನಾಥ್: ಎರಡೇ ನಿಮಿಷದಲ್ಲಿಯೇ ಮುಗಿಸುತ್ತೇನೆ.

ಉಪಾಧ್ಯಕ್ಷರು: ಅಯಿತು.

ಶ್ರೀ ಮಹಿಮಾ ಜೆ.ಪಟೇಲ್: ಮಾನ್ಯ ಉಪಾಧ್ಯಕ್ಷರೇ, ನಾನು ಹೆಸರನ್ನು ಕಳುಹಿಸಿದ್ದೆ. ಚೀಟಿ ಕಳುಹಿಸಿದ್ದೆ. ಉಳಿದವರೆಲ್ಲರಿಗೂ ಅವಕಾಶವನ್ನು ಕೊಟ್ಟಿರಿ. ನನಗೆ ಕೊಟ್ಟಿಲ್ಲ. ಏಕೆ ಎಂದು ಗೊತ್ತಾಗಲಿಲ್ಲ.

ಶ್ರೀ ಸಿ.ಎಸ್.ನಾಡಗೌಡ: ಈಗಾಗಲೇ ಅವರು Government representative ಆಗಿದ್ದಾರೆ. How can he speak here now?

ಉಪಾಧ್ಯಕ್ಷರು: ಜಗದೀಶ್ ಶೆಟ್ಟರೇ,ತಾವು ಉತ್ತರವನ್ನು ಕೊಟ್ಟುಬಿಡಿ.

ಶ್ರೀ ಮಹಿಮಾ ಜೆ.ಪಟೇಲ್: I am still MLA, I am not a Minister.

ಶ್ರೀ ಹೆಚ್.ಎಂ.ವಿಶ್ವನಾಥ್: ನನಗೆ ಅನುಮತಿಯನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ವಿಶ್ವನಾಥ್ ಅವರೇ, ದಯವಿಟ್ಟು ಕುಳಿತುಕೊಳ್ಳಿ. ಅವರು ಉತ್ತರವನ್ನು ಕೊಟ್ಟಮೇಲೆ ತಾವು ಸ್ಪಷ್ಟೀಕರಣವನ್ನು ಕೇಳಿ. ಒಬ್ಬರು ಎಂದರೆ ಇಲ್ಲಿ ಹತ್ತು ಜನರು ಎದ್ದೇಳುತ್ತಾರೆ. ಇಲ್ಲಿ ಆಗುವುದಿಲ್ಲ. ಕುಳಿತುಕೊಳ್ಳಿ. ಜಗದೀಶ್ ಶೆಟ್ಟರೇ, ತಾವು ಶುರುಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಇವತ್ತು ಬರಗಾಲದ ಬರಸ್ಥಿತಿಯ ಬಗ್ಗೆ ಮತ್ತು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಬಹಳಷ್ಟು ವಿಷಯಗಳು ಈ ಸದನದಲ್ಲಿ ಚರ್ಚೆಯಾಗಿವೆ. ಪ್ರತಿಪಕ್ಷದ ನಾಯಕರಾದ ಮಾನ್ಯ ಧರಂಸಿಂಗ್ ಅವರು, ಮಲ್ಲಿಕಾರ್ಜುನ ಖರ್ಗೆಯವರು, ರಮೇಶ್‌ಕುಮಾರ್ ರವರು, ಆರ್.ವಿ.ದೇಶ್‌ಪಾಂಡೆಯವರು, ಮಾಧುಸ್ವಾಮಿಯವರು, ಸಿದ್ದರಾಮಯ್ಯನವರು, ಶ್ರೀರಾಮರೆಡ್ಡಿಯವರು, ರಾಜೇಂದ್ರನ್ ಅವರು, ಜಯಪ್ರಕಾಶ್

ಹೆಗ್ಡೆಯವರು, ಪಾಟೀಲರು, ನರೇಂದ್ರ ಬಾಬು ಅವರು, ಕೃಷ್ಣ ಮೂರ್ತಿಯವರು, ಬಿ.ಆರ್.ಪಾಟೀಲರು, ಈ ರೀತಿ ಸಾಕಷ್ಟು ಹಿರಿಯ ಸದಸ್ಯರುಗಳು ಮತ್ತು ಇನ್ನಿತರ ಶಾಸಕರುಗಳು ಈ ಒಂದು ಬರಗಾಲ ಪರಿಸ್ಥಿತಿಯ ಬಗ್ಗೆ, ಗಂಭೀರತೆಯ ಬಗ್ಗೆ, ಸರ್ಕಾರ ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದೆ ಎನ್ನುವ ಬಗ್ಗೆ, ಏನೇನು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಬಗ್ಗೆ, ಬಹಳಷ್ಟು ವಿಷಯಗಳನ್ನು ಇವತ್ತು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ 128 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲ ಇದ್ದು ಅದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಮತ್ತು ಆ ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ನಾವು ಈಗಾಗಲೇ ಘೋಷಣೆ ಮಾಡಿದ್ದೇವೆ. ಇದರ ಬಗ್ಗೆ ಹಿರಿಯ ಸದಸ್ಯರು ಮತ್ತು ಹಿರಿಯ ಅನುಭವಿಗಳು ಸಾಕಷ್ಟು ವಿಚಾರಗಳನ್ನು ಈ ಒಂದು ಸದನದ ಗಮನಕ್ಕೆ ತರಲಿಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ಈ ಒಂದು ವಿಷಯದಲ್ಲಿ ಇದು ಬರಗಾಲದ ವಿಷಯ, ಜನತೆಯ ವಿಷಯ, ಕರ್ನಾಟಕ ರಾಜ್ಯದ ವಿಷಯ, ಮತ್ತು ಯಾರು ಇವತ್ತು ಕೈಗೆ ಕೆಲಸ ಇಲ್ಲ, ಅಂಥವರ ಕೈಗೆ ಕೆಲಸವನ್ನು ಕೊಡಬೇಕೆನ್ನುವ ದೃಷ್ಟಿಕೋನ, ಇದರಲ್ಲಿ ಯಾವುದೇ ಒಂದು ರಾಜಕಾರಣ ಮಾಡತಕ್ಕದ್ದು ಏನೂ ಇಲ್ಲ. ಹೀಗಾಗಿ ಇದರ ಬಗ್ಗೆ ಎಲ್ಲರೂ ಚಿಂತನೆಯನ್ನು ಮಾಡಬೇಕು. ಮತ್ತು ಎಲ್ಲಿಯಾದರೂ ಸರ್ಕಾರ ತಪ್ಪಿದರೆ ಅದನ್ನು ಸರಿ ಮಾಡುವ ಬಗ್ಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮತ್ತು ಇಲ್ಲಿಯವರೆಗೆ ಹಣ ಎಷ್ಟು ಬಿಡುಗಡೆಯಾಗಿದೆ, ಹಣ ಎಷ್ಟು ಖರ್ಚು ಮಾಡಿದ್ದೀರಿ, ಏಕೆ ಹಣ ಖರ್ಚಾಗಿಲ್ಲ, ಮತ್ತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ, ಕೇಂದ್ರ ಸರ್ಕಾರದಿಂದ ಬಂದ ನೆರವನ್ನು ಸಹಿತ ನೀವು ಉಪಯೋಗ ಮಾಡಿಕೊಂಡಿಲ್ಲ, ಇದರ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಇವತ್ತು ಹಿರಿಯ ಸದಸ್ಯರು ನಮ್ಮ ಮುಂದೆ ಇಟ್ಟಿದ್ದಾರೆ. ಇದಕ್ಕಾಗಿ ಹಲವಾರು ವಿಷಯಗಳನ್ನು ಇವತ್ತು ನಾನು ಈ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಈ ಬರಗಾಲ ಈ ವರ್ಷ ಬಂದಿದ್ದಲ್ಲ. ಹಿಂದಿನ ಬೇರೆ ಬೇರೆ ಸರ್ಕಾರಗಳು ಇದ್ದ ಸಂದರ್ಭದಲ್ಲಿ ಬೇರೆ ಬೇರೆ ಪಾರ್ಟಿಗಳು ಇದ್ದ ಸಂದರ್ಭದಲ್ಲೂ ಈ ಬರಗಾಲ ಬಂದಿದೆ. ಆದುದರಿಂದ ಇದು ಹೊಸದಲ್ಲ. ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ, ಸತತವಾಗಿ ಮೂರು ವರ್ಷಗಳ ಕಾಲ ಬರಗಾಲ ಬಂದಿದ್ದು ನಮ್ಮ ನೆನಪಿನಲ್ಲಿದೆ. ಹೀಗಾಗಿ ಬರಗಾಲ

ಎನ್ನುವಂಥದ್ದು ಒಂದು ನೈಸರ್ಗಿಕ ವಿಕೋಪ. ಇವತ್ತು ರಾಜಸ್ತಾನ ಮತ್ತು ಬಯಲುಪ್ರದೇಶ ಏನು ಇದೆ, ರಾಜಸ್ತಾನ ನಂತರ ಕರ್ನಾಟಕವೇ ಅತೀ ಹೆಚ್ಚು ಈ ಒಂದು ಬಯಲುಪ್ರದೇಶ ಇರುವಂಥ ನಾಡು ಎಂದರೆ ಕರ್ನಾಟಕ ರಾಜ್ಯ. ಹೀಗಾಗಿ ಇವತ್ತು ಹಲವಾರು ಬಾರಿ ಈ ಬರಗಾಲ ಪರಿಸ್ಥಿತಿಯನ್ನು ನಾವು ಎದುರಿಸಿದ್ದೇವೆ. ಅದರಲ್ಲಿ ಈ ವರ್ಷ ಬಹಳ ವಿಚಿತ್ರವಾದುದು ಎಂದರೆ ಒಂದು ಕಡೆ ನೆರೆ ಹಾವಳಿ. ಮತ್ತೊಂದು ಕಡೆ ಬರ. ಈ ಪ್ರಕೃತಿ ವಿಕೋಪಗಳನ್ನು ನಾವು ಈ ವರ್ಷ ಎದುರಿಸಿದ್ದೇವೆ. ಕಳೆದ ವರ್ಷ ಮಾನ್ಯ ಧರಂಸಿಂಗ್ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆ ಒಂದು ನೆರೆ ಹಾವಳಿಯಿಂದ ಕರ್ನಾಟಕ ರಾಜ್ಯ ಹಲವಾರು ಜಿಲ್ಲೆಗಳಲ್ಲಿ ಜನರು ತೊಂದರೆಗೊಳಗಾಗಿದ್ದನ್ನು ನಾವು ನೋಡಿದ್ದೇವೆ. ಅದರಲ್ಲಿ ನೆರೆ ಹಾವಳಿ ಪ್ರಮುಖವಾಗಿ ಬೆಳಗಾಂ ಜಿಲ್ಲೆ ಇರಬಹುದು, ಬಾಗಲಕೋಟೆ ಜಿಲ್ಲೆ ಇರಬಹುದು, ಬಿಜಾಪುರ್, ಬೀದರ್, ರಾಯಚೂರು, ಕೊಪ್ಪಳ್, ಈ ರೀತಿ ಹಲವಾರು ಜಿಲ್ಲೆಗಳಲ್ಲಿ ಇವತ್ತು ನೆರೆ ಹಾವಳಿ, ಅದರಲ್ಲಿ ರಾಯಚೂರು ಮತ್ತು ಗುಲ್ಬರ್ಗಾ ಡಿಸ್ಟ್ರಿಕ್ಟ್‌ಗಳು, ಬೆಳಗಾಂ ಮತ್ತು ಬಾಗಲಕೋಟೆ, ಇಲ್ಲಿ ಈ ಒಂದು ರಾಜ್ಯದಲ್ಲಿ ಜಾಸ್ತಿ ಮಳೆಯಾಗಿ ಅಲ್ಲಿ ನೆರೆ ಹಾವಳಿ ಬರಲಿಲ್ಲ. ಇವತ್ತು ಕೃಷ್ಣಾ ನದಿಗೆ, ಭೀಮಾ ನದಿಗೆ ಮಹಾರಾಷ್ಟ್ರ ಪ್ರದೇಶಗಳಲ್ಲಿ ಹೆಚ್ಚುವರಿ ಮಳೆಯಾಗಿದ್ದರಿಂದ ಹೆಚ್ಚುವರಿ ನೀರು ಕೃಷ್ಣಾ ನದಿಗೆ ಮತ್ತು ಭೀಮಾ ನದಿಗೆ ಬಂದಿದ್ದರಿಂದ ಆಯಾ ಜಿಲ್ಲೆಗಳಲ್ಲಿ ನೆರೆ ಹಾವಳಿ ಬಂದಿದ್ದನ್ನು ನಾವು ನೋಡಿದ್ದೇವೆ. ಕಳೆದ ವರ್ಷವೂ ಹಾಗೆ ಇತ್ತು. ಈ ವರ್ಷವೂ ಹಾಗೆ ಅಯಿತು. ಇದಕ್ಕಾಗಿ ಇವತ್ತು ಹಿಂದಿನ ವರ್ಷ ಅವತ್ತಿನ ಸರ್ಕಾರವೇನು ಹಣವನ್ನು ಬಿಡುಗಡೆ ಮಾಡಿತ್ತು, ಏನು ಖರ್ಚಾಯಿತು, ಅದು ಇವತ್ತು ಸದನದ ಮುಂದಿದೆ. ಈ ವರ್ಷ ಏನು ಖರ್ಚಾಗಿದೆ, ಅದನ್ನು ನಾನು ಸದನದ ಮುಂದೆ ಮಂಡಿಸುತ್ತೇನೆ. ಹೀಗಾಗಿ ಮಾನ್ಯ ಶಿವರಾಜ್ ಪಾಟೀಲರು ಕೇಂದ್ರದ ಗೃಹ ಸಚಿವರು ಅವರು ನಮ್ಮ ರಾಜ್ಯದಲ್ಲಿ ಸಮೀಕ್ಷೆಗೆ ಬಂದಿದ್ದರು. ಆವತ್ತು ಪ್ರತಿ ಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್ ಅವರು ಇದ್ದರು. ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಇದ್ದರು. ಮಾನ್ಯ ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು, ಕೂಡ ಇದ್ದರು. ನಾನೂ ಹೋಗಿದ್ದೆ. ಆ ಸಂದರ್ಭದಲ್ಲಿ ವಿಮಾನ ಮುಖಾಂತರ aerial survey ಯನ್ನು ಮಾಡಿದರು. ಆವತ್ತು ಎರಡನ್ನೂ ನೋಡಿದೆವು. ಒಂದು ಕಡೆ ನೆರೆ ಹಾವಳಿ.

ಮತ್ತೊಂದು ಕಡೆ drought. ಈ ಎರಡೂ ವಿಷಯಗಳ ಬಗ್ಗೆ ಆವತ್ತು ಅವರು ಸಮೀಕ್ಷೆಯನ್ನು ಮಾಡಿದರು. ಆವತ್ತೇ ಇಲ್ಲಿ Conference Hall ನಲ್ಲಿ Meeting ಕೂಡ ನಡೆಯಿತು. ಸರ್ಕಾರದ ಅಧಿಕಾರಿಗಳು ಮತ್ತು ಇನ್ನಿತರರು ಎಲ್ಲರೂ ಬಂದಂಥ ಸಂದರ್ಭದಲ್ಲಿ ಆವತ್ತು ಮಾನ್ಯ ಶಿವರಾಜ ಪಾಟೀಲರು ಆ ನೆರೆ ಹಾವಳಿ ಮತ್ತು drought ಈ ಎರಡೂ ವಿಷಯಕ್ಕೆ ಸಂಬಂಧಪಟ್ಟಂತೆ 250 ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಘೋಷಣೆಯನ್ನು ಮಾಡಿದರು. ನಂತರ ಹಣವನ್ನು ಬಿಡುಗಡೆಯೂ ಮಾಡಿದರು. ಹೀಗಾಗಿ ಇವತ್ತು ಎರಡೂ ಸನ್ನಿವೇಶಗಳನ್ನು ಇಲ್ಲಿ ಕರ್ನಾಟಕದಲ್ಲಿ ಎದುರಿಸಿದ್ದೇವೆ. ಒಂದು ಕಡೆ ನೆರೆ ಹಾವಳಿ, ಮತ್ತೊಂದು ಕಡೆ ಬರಗಾಲ. ನಾನು ರಾಯಚೂರು ಮತ್ತು ಗುಲ್ಬರ್ಗಾ ಮತ್ತು ಬೆಳಗಾಂನಲ್ಲಿ Review meeting ಮಾಡುವ ಸಂದರ್ಭದಲ್ಲಿ ಒಂದು ಕಡೆ ನೆರೆಹಾವಳಿಗೆ ಅಲ್ಲೇನು ಗ್ರಾಮಗಳು ಕೊಚ್ಚಿಕೊಂಡು ಹೋಗಿದ್ದಾವೆ,ಗ್ರಾಮದ ಕೆಲವೊಂದು ಭಾಗವನ್ನು ಸ್ಥಳಾಂತರ ಮಾಡಬೇಕು, ಅದಕ್ಕಾಗಿ alternative land ಹುಡುಕಬೇಕು ಎನ್ನುವಂಥದ್ದು ಒಂದು ಕಡೆಯಾದರೆ ಅದೇ ಒಂದು ತಾಲ್ಲೂಕಿನಲ್ಲಿ ಅಕ್ಕಪಕ್ಕ ಇರುವ ತಾಲ್ಲೂಕುಗಳಲ್ಲಿ ಬರಗಾಲದ ಬವಣೆ. ಹೀಗಾಗಿ ಈ ಎರಡೂ ಬವಣೆಯನ್ನು ಇವತ್ತು ಕರ್ನಾಟಕದ ಜನತೆ ಅನುಭವಿಸುತ್ತಿದ್ದಾರೆ. ಹೀಗಾಗಿ ನಾವು flood ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಮತ್ತು ಬರಗಾಲಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಅದೆಲ್ಲಾ ವಿವರಗಳನ್ನು ಈ ಸದನದಲ್ಲಿ ಮಂಡನೆ ಮಾಡುತ್ತಿದ್ದೇನೆ. ಹೀಗಾಗಿ ಇವತ್ತು ಸರ್ಕಾರದ ಬಗ್ಗೆ ನಮ್ಮ ಹಿರಿಯ ಸದಸ್ಯರು ಮಾತನಾಡುತ್ತಾ, ಸರ್ಕಾರ utterly fail ಆಗಿದೆ ಎನ್ನುವ ಮಾತನ್ನು ಹೇಳಿದರು. ಬರಗಾಲ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಸರ್ಕಾರ ವಿಫಲತೆ ಹೊಂದಿದೆ, ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲವೆನ್ನುವ ಮಾತನ್ನು ಹೇಳಿದರು. ಅವರವರ ಅಭಿಪ್ರಾಯವನ್ನು ಹೇಳಿದ್ದಾರೆ. ಏಕೆಂದರೆ ಇವತ್ತು ಪ್ರತಿ ಪಕ್ಷ ಅವರು ಟೀಕೆಯನ್ನು ಮಾಡುವುದಕ್ಕೆ ಇರುವುದು, ಅದನ್ನು ನಾವು ಸ್ವಾಗತವನ್ನು ಮಾಡಬೇಕಾಗುತ್ತದೆ. ಒಂದು ಕ್ರೀಡಾ ಮನೋಭಾವದಿಂದ ಅದನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಪ್ರತಿಪಕ್ಷದವರು ಯಾವ ರೀತಿ ಟೀಕೆಯನ್ನು ಮಾಡುತ್ತಾರೆ, ಅದರ ಮೇಲೆ ಹೆಚ್ಚು ಕೆಲಸವನ್ನು ಮಾಡಲು ನಮಗೆ ಅನುಕೂಲವಾಗುತ್ತದೆ. ನಾವು ಎಲ್ಲಿಯಾದರೂ ತಪ್ಪುಗಳನ್ನು ಮಾಡಿದಾಗ ಅದನ್ನು ಅವರು ಹೇಳಿದಾಗ ಅದನ್ನು ಸರಿ ಮಾಡಲು

ನಮಗೆ ಅನುಕೂಲವಾಗುತ್ತದೆ. ಬಹುಶ: ಪ್ರತಿಪಕ್ಷದವರು ಈ ರೀತಿ ಸಲಹೆ ಸೂಚನೆಗಳನ್ನು ಕೊಡದಿದ್ದರೆ ಬಹುಶ: ಇನ್ನು ಹೆಚ್ಚು ನಿರ್ಲಕ್ಷ್ಯ ಆಗುವುದಕ್ಕೆ ಸಾಧ್ಯ ಇದೆ. ಹೀಗಾಗಿ ಇವತ್ತು ಅವರೇನು ಟೀಕೆಗಳನ್ನು ಮಾಡಿದ್ದಾರೆ, ಯಾವುದನ್ನು ಇವತ್ತು ನಿರ್ಲಕ್ಷ್ಯವೆಂದಿದ್ದಾರೆ, ಅದರ ಬಗ್ಗೆ ಗಮನ ಹರಿಸಬೇಕು. ಅದನ್ನು ಸರಿ ಮಾಡುವ ಕೆಲಸವನ್ನು ನಾವು ಮಾಡಬೇಕೇ ಹೊರತು ಅವರನ್ನು ಟೀಕೆ ಮಾಡಬಾರದು, ಟೀಕೆ ಸರಿಯಲ್ಲ ಎನ್ನುವಂಥ ಮಾತನ್ನು ನಾನು ಹೇಳುವುದಿಲ್ಲ. ಬರಗಾಲ ಬಂದ ಮೇಲೆ ನೆರೆ ಹಾವಳಿ ಬಂದ ಸಂದರ್ಭದಲ್ಲಿ ಏನೇನು ತಕ್ಷಣದ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ, ಉಪ ಕ್ರಮಗಳನ್ನು ನಾವೇನು ತೆಗೆದುಕೊಂಡಿದ್ದೇವೆ, ಬಹುಶ: ಯಾವುದೇ ಹಿಂದಿನ ಸರ್ಕಾರಗಳು ಕೈಗೊಂಡಂಥ ಕಾಮಗಾರಿಗಳಿಗಿಂತಲೂ ಹೆಚ್ಚು ಕ್ರಿಯಾಶೀಲವಾಗಿ ಇವತ್ತಿನ ಸರ್ಕಾರ ಮಾಡಿದೆ. ಈ ಒಂದು ಬರದ ಹಿನ್ನೆಲೆಯಲ್ಲಿ ಏನು ಒಂದು active ಆಗಿ ಯುದ್ಧೋಪಾದಿಯಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕಾಗಿತ್ತೋ ಅವೆಲ್ಲವನ್ನೂ ನಾವು ಮಾಡಿದ್ದೇವೆ. ಇವತ್ತು ಪ್ರತಿಯೊಂದು ಜಿಲ್ಲೆಯಲ್ಲೇನು requirement ಇದೆ, ಇವತ್ತು ಕೈಗೆ ಕೆಲಸವನ್ನು ಕೊಡಬೇಕು. ಒಂದು ಕಡೆ ಉದ್ಯೋಗ ಖಾತರಿಯ ಹಣ ಬಂದಿದೆ. ಮತ್ತೊಂದು ಕಡೆ ಬರಗಾಲದ ಹಣ. ಹೀಗಾಗಿ co-ordination ಮಾಡಿಕೊಂಡು ಕಾಮಗಾರಿಯನ್ನು ಮಾಡಬೇಕಾಗಿದೆ. ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕಾಗಿದೆ. ಇವತ್ತಿನ ವಸ್ತುಸ್ಥಿತಿಯನ್ನು ನೋಡಿದಾಗ ಪ್ರತಿಯೊಂದು ಜಿಲ್ಲೆಯಲ್ಲಿ ಬರಗಾಲದ ಕಾಮಗಾರಿಗಳು ನಡೆಯುತ್ತಿರುವುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂತು ಎಂದು ತಮ್ಮ ಗಮನಕ್ಕೆ ತರಬೇಕಾಗಿದೆ. ಏಕೆಂದರೆ, ಹಿರಿಯ ಸದಸ್ಯರು ಇದರ ಬಗ್ಗೆ ಎರಡು ವರ್ಷದ ಹಣವನ್ನು calculation ಮಾಡಿ 700 ಕೋಟಿಗಿಂತ ಹೆಚ್ಚು ಹಣ ಬಂತು, ಅದನ್ನು ಖರ್ಚೆ ಮಾಡಲಿಲ್ಲ, 785 ಕೋಟಿ ಹಣ ಬಂತು, ಅದನ್ನು ಸರಿಯಾಗಿ ಎಲ್ಲರಿಗೂ ಕಳುಹಿಸಲಿಲ್ಲ ಎನ್ನುವುದನ್ನು ಹೇಳಿದ್ದಾರೆ. ಆದರೆ, ಇದು ಒಂದು ವರ್ಷದ್ದಲ್ಲ. ಎರಡು ವರ್ಷದ್ದು. 2005-06 ಮತ್ತು 2006-07ನೇ ಸಾಲಿನದ್ದು.

ಶ್ರೀ ಸಿದ್ದರಾಮಯ್ಯ: 2005-06ಕ್ಕೇ 445 ಕೋಟಿ, 2006-07ಕ್ಕೇ 340 ಕೋಟಿಯೆಂದು ಹೇಳಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: 2005–06ನೇ ಸಾಲಿನಲ್ಲಿ ನಮಗೆ ಬರಬೇಕಾಗಿದ್ದ C.R.F ಹಣ 114 ಕೋಟಿ 66 ಲಕ್ಷ. ಅದರಲ್ಲಿ ರಾಜ್ಯ ಸರ್ಕಾರ 149 ಕೋಟಿ 60 ಲಕ್ಷ ಕೊಟ್ಟಿದೆ. Central share 86 ಕೋಟಿ. ಆವತ್ತು 2005–06ಕ್ಕೇ total 235 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು. ಅನಂತರ flood ಸಲುವಾಗಿ ಮಾನ್ಯ ಧರ್ಮ್‌ಸಿಂಗ್ ರವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ 358 ಕೋಟಿ 85 ಲಕ್ಷ ಹಣವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿತ್ತು. ಒಟ್ಟು ಬಿಡುಗಡೆಯಾಗಿದ್ದು, C.R.F ಮತ್ತು N.C.C.F.ನಿಂದ 594 ಕೋಟಿ 45 ಲಕ್ಷ. ಈ ಸಾಲಿನಲ್ಲಿ, ಅಂದರೆ 2006–07ನೇ ಸಾಲಿನಲ್ಲಿ ಒಟ್ಟು annual allocation 120 ಕೋಟಿ 38 ಲಕ್ಷ. ಅದರಲ್ಲಿ ರಾಜ್ಯ ಸರ್ಕಾರದ ಶೇರು 30 ಕೋಟಿ 10 ಲಕ್ಷ. ಕೇಂದ್ರ ಸರ್ಕಾರದ ಶೇರು 90 ಕೋಟಿ 28 ಲಕ್ಷ. ರಾಜ್ಯ ಸರ್ಕಾರ ಈ ಶೇರ್‌ನಲ್ಲಿ 30 ಕೋಟಿಯನ್ನೇನು ಕೊಡಬೇಕಾಗಿತ್ತು. ಅದರಲ್ಲಿ 153 ಕೋಟಿ 10 ಲಕ್ಷ ಕೊಟ್ಟಿದೆ. ಕೇಂದ್ರ ಸರ್ಕಾರ ಆ 90 ಕೋಟಿಯಲ್ಲಿ 113 ಕೋಟಿ 98 ಲಕ್ಷವನ್ನು ಕೊಟ್ಟಿದೆ. ರಾಜ್ಯ ಸರ್ಕಾರ 153 ಕೋಟಿ 10 ಲಕ್ಷ, ಕೇಂದ್ರ ಸರ್ಕಾರ 113 ಕೋಟಿ 98 ಲಕ್ಷ ಕೊಟ್ಟಿದೆ. ಅಂದರೆ C.R.F ನಿಂದ ಒಟ್ಟು 267.08 ಕೋಟಿ ಖರ್ಚುಮಾಡಿದ್ದೇವೆ. ಇದರ ಜೊತೆಗೆ ಮಾನ್ಯ ಶಿವರಾಜ್ ಪಾಟೀಲರು ಇಲ್ಲಿ ಸಮೀಕ್ಷೆಗೆ ಬಂದಂಥ ಕಾಲದಲ್ಲಿ ಏನು ಸಭೆಯನ್ನು ಮಾಡಿದ್ದೇವೆ ಆ ಸಂದರ್ಭದಲ್ಲಿ flood ಮತ್ತು droughtಗೆ 226 ಕೋಟಿ 36 ಲಕ್ಷ, ಅಂದರೆ ಅದರಲ್ಲಿ C.R.F. share ಒಂದಿಷ್ಟು ಹಣವನ್ನು ಕೂಡಿಸಿ ಆವತ್ತು total ಹಣ announce ಮಾಡಿದ್ದು 250 ಕೋಟಿ. ಹೀಗಾಗಿ N.C.C.Fನಿಂದ ನಮಗೆ ನಿಚ್ಚಳವಾಗಿ ಬಂದಿದ್ದು 226 ಕೋಟಿ 30 ಲಕ್ಷ. ನಾವು ಈಗಾಗಲೇ total ಹಣವನ್ನು release ಮಾಡಿದ್ದು 226 ಕೋಟಿ 30 ಲಕ್ಷ. Drought and flood ಎರಡೂ ಉದ್ದೇಶಕ್ಕಾಗಿ ಹಣವನ್ನು ಬಿಡುಗಡೆ ಮಾಡಿದ್ದು 493 ಕೋಟಿ 38 ಲಕ್ಷ. ಅಂದರೆ comparing two years, ಯಾವಾಗ ಕೇಂದ್ರದಿಂದ ಕೇವಲ flood ಸಲುವಾಗಿ 358 ಕೋಟಿ ಹಣ ಬಂದಿತ್ತು, ಇಲ್ಲಿ flood ಮತ್ತು drought ಎರಡೂ ಉದ್ದೇಶಕ್ಕಾಗಿ 226 ಕೋಟಿ N.C.C.F ನಿಂದ ಬಂದಿದೆ. ಇದು ಬಹಳ ಗಮನಹರಿಸುವಂಥದ್ದು. ಅಂದರೆ last time ಇಡೀ ವರ್ಷದಲ್ಲಿ 594 ಕೋಟಿ ಹಣ ಬಿಡುಗಡೆ ಮಾಡಿ ಖರ್ಚು ಮಾಡಿದ್ದು. ಈ ಸಲ 493 ಕೋಟಿ 38 ಲಕ್ಷ ಹಣವನ್ನು ನಾವು

ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಈಗ ಖರ್ಚಾದಂಥ ಹಣ 356 ಕೋಟಿ 56 ಲಕ್ಷ. ಹಿರಿಯ ಸದಸ್ಯರೆಲ್ಲರು ಡಿ.ಸಿ. ಹತ್ತಿರ ಇರುವ ಪಿ.ಡಿ. ಅಕೌಂಟ್ನಲ್ಲಿ 150 ಕೋಟಿ ಇದೆಯೆಂದು ಹೇಳಿದರು. ಆ ಹಣ ಇದೆ. ಈಗ ಅದರಲ್ಲಿ ಸ್ವಲ್ಪ ಖರ್ಚಾಗಿದೆ. ಆ ಹಣ ಇದೆಯೆಂದು ಒಪ್ಪಿಕೊಳ್ಳುತ್ತೇನೆ. ಅದನ್ನು deny ಮಾಡುವುದಿಲ್ಲ. ಆ ಹಣ ಡಿ.ಸಿ.ಯವರ ಪಿ.ಡಿ. ಅಕೌಂಟ್ನಲ್ಲಿದೆ. Definite ಆಗಿ ಇದೆ. ಅದರಲ್ಲಿ ಈಗ ಮತ್ತೆ ಖರ್ಚಾಗುತ್ತಾ ಬಂದಿದೆ. ಒಂದೇ ದಿವಸದಲ್ಲಿ ಇದೆಲ್ಲವನ್ನು ಖರ್ಚು ಮಾಡಲು ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: 27.1.2007ನೇ ಇಸವಿಗೆ, ಆವೊತ್ತಿಗೆ ಡಿ.ಸಿ.ಗಳ ಪಿ.ಡಿ. ಅಕೌಂಟ್ನಲ್ಲಿ 136 ಕೋಟಿ ಇದೆ. ಅದಾದ ಮೇಲೆ ಡಿ.ಸಿ. ಗಳು ಒಂದು ರೂಪಾಯಿಯನ್ನು ಯಾರಿಗೂ ಬಿಡುಗಡೆ ಮಾಡಿಲ್ಲ. ಅದು ಸರಿಯೇ?

ಶ್ರೀ ಜಗದೀಶ್ ಶೆಟ್ಟರ್: Release ಮಾಡಿದ್ದಾರೆ. ಹಣ ಇತ್ತು.

ಶ್ರೀ ಸಿದ್ದರಾಮಯ್ಯ: ಇಲ್ಲ. Release ಮಾಡಿದ್ದಾರೆಯೇ ಹೇಳಿ. 27.1.2007 ಆದ ಮೇಲೆ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ? ಮೈಸೂರು ಜಿಲ್ಲೆಗೆ ಎಷ್ಟು ಮಾಡಿದ್ದಾರೆ ಹೇಳಿ?

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ 136 ಕೋಟಿ ಇತ್ತು ಎಂಬುದನ್ನು ಒಪ್ಪಿಕೊಳ್ಳುತ್ತಿದ್ದೇನೆ. 356 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ನಾನು ಹೇಳಿದ್ದೇನೆ. Release ಮಾಡಿದ್ದು 493 ಕೋಟಿ. ಡಿ.ಸಿ.ಯವರ ಹತ್ತಿರ ಏಕೆ ಹಣವನ್ನು ಇಡಬೇಕೆಂದರೆ, ಇಲ್ಲಿ ಕಾಮಗಾರಿ ಪ್ರಾರಂಭವಾಗಿರುತ್ತದೆ ಅದು progress ನಲ್ಲಿರುತ್ತವೆ. ಅದಕ್ಕೆ ತಕ್ಷಣ ಹಣವನ್ನು release ಮಾಡಬೇಕಲ್ಲ. They are going to pay every day. ಅದನ್ನು ನಾವೇ ರಾಜ್ಯದಲ್ಲಿ ಇಟ್ಟುಕೊಂಡು ಪ್ರತಿಯೊಂದಕ್ಕೂ ಖರ್ಚು ಮಾಡುವುದಿಲ್ಲ. ಕಳುಹಿಸಿದ್ದ ಹಣವನ್ನು ನಾವು ಅವರ ಮೂಲಕ ಖರ್ಚು ಮಾಡುವಂಥದ್ದು. ಹಾಗಾಗಿ ಡಿ.ಸಿ.ಯವರ account ನಲ್ಲಿ ಹಣ ಇದ್ದೇ ಇರುತ್ತದೆ. ಈ ರೀತಿ ನಾವು ಹಣವನ್ನು ಖರ್ಚುಮಾಡಿದ್ದೇವೆ. ಕೇಂದ್ರ ಸರ್ಕಾರ ಏನು ಹಣವನ್ನು ಕೊಟ್ಟಿದೆ ಅದನ್ನು ಸಂಪೂರ್ಣವಾಗಿ ಖರ್ಚುಮಾಡಿದ್ದೇವೆ. ರಾಜ್ಯ ಸರ್ಕಾರ ತನ್ನ account ನಿಂದ bear ಮಾಡಿದೆ. Drought ಸಲುವಾಗಿ ಈಗಾಗಲೇ 100 ಕೋಟಿ ರೂ.ಗಳ ಹಣವನ್ನು ನಮ್ಮ F.D. ಯಿಂದ release ಮಾಡಿದ್ದೇವೆ. ಇನ್ನು 28 ತಾಲ್ಲೂಕುಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಹಿರಿಯ

ಸದಸ್ಯರು ಹೇಳಿದರು. ಇನ್ನು 28 ತಾಲ್ಲೂಕುಗಳನ್ನು ನೀವು ಬಿಟ್ಟಿದ್ದೀರೆಂದು ಹೇಳಿದರು. ಅದೂ order ಆಗಿದೆ. ಏನು 28 ತಾಲ್ಲೂಕುಗಳು ಬಿಟ್ಟುಹೋಗಿದೆ ಎಂದು ಹೇಳಿದ್ದಾರೆ, ಆ 28 ಕೋಟಿ ಹಣವನ್ನು ಇವತ್ತು ಸಾಯಂಕಾಲದೊಳಗೆ ಅಥವಾ ನಾಳೆ ಬೆಳಿಗ್ಗೆ ಕಳುಹಿಸಿಕೊಡುತ್ತೇವೆ. ನಾವು ಆ 28 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಆ ಹಣ ನಾಳೆಯೊಳಗೆ ಎಲ್ಲಾ ಡಿ.ಸಿ.ಯವರ ಹತ್ತಿರ ಇರುತ್ತದೆ.

ಶ್ರೀ ಸಿದ್ದರಾಮಯ್ಯ: Last release ಮಾಡಿದ್ದು ಯಾವ ತಾರೀಖು ಹೇಳಿ ನೋಡೋಣ? ಇದನ್ನು ಬಿಡುಗಡೆ ಮಾಡಬೇಕು, F.D. ಯಿಂದ orders ಹೋಗುತ್ತದೆ ಅದು ಇವತ್ತು ಆಗಿರುವುದು. What is the last release? ಆ 28 ತಾಲ್ಲೂಕುಗಳಿಗೆ ನೀವು last ಯಾವಾಗ release ಮಾಡಿದಿರಿ? They are also coming under these 128 taluks.

ಶ್ರೀ ಜಗದೀಶ್ ಶೆಟ್ಟರ್: ಅದು 128 ತಾಲ್ಲೂಕಿನಲ್ಲೇ ಬರುತ್ತವೆ.

ಶ್ರೀ ಸಿದ್ದರಾಮಯ್ಯ: ಅದಕ್ಕೆ Last release ಯಾವತ್ತು ಮಾಡಿದಿರಿ ಹೇಳಿ ನೋಡೋಣ? ಆವತ್ತಿನಿಂದ ಇವತ್ತಿನವರೆಗೆ ಅವರ ಹತ್ತಿರ ಖರ್ಚುಮಾಡುವುದಕ್ಕೆ ದುಡ್ಡು ಇತ್ತೋ ಇಲ್ಲವೋ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ನಿನ್ನೆ ಸ್ಪಷ್ಟವಾಗಿ ಹೇಳಿದ್ದೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಅವರುಗಳ ಪ್ರಶ್ನೆಗೆ ಸ್ಪಷ್ಟೀಕರಣ ನೀಡುತ್ತಿದ್ದೇನೆ. ಅವರುಗಳೆಲ್ಲಾ ಮಾತನಾಡುವಾಗ ನಾನು ಏನೂ question ಮಾಡಲಿಲ್ಲ. ನೀವು ಅನಂತರ clarification ಕೇಳಿ.

ಶ್ರೀ ಸಿದ್ದರಾಮಯ್ಯ: ನಿಮಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: Definitely. ನೀವು ಅನಂತರ clarification ಕೇಳಿ. ಮೊದಲು ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಜಗದೀಶ್ ಶೆಟ್ಟರ್ ರವರೇ ನಿಮಗೆ disturb ಮಾಡಬೇಕೆಂದಲ್ಲ. ಇದನ್ನು ಹೇಳದೇ ಬಿಟ್ಟುಬಿಡುತ್ತೀರೆಂದು ಹೇಳಿದೆ. ನಿಮಗೆ ಅನುಕೂಲವಾಗಲಿ ಎಂದು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್: ಯಾವುದನ್ನೂ ಬಿಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಜೂನ್ 30ನೇ ತಾರೀಖು ಎಷ್ಟು ಬಿಡುಗಡೆ ಮಾಡಿದ್ದೀರೆಂದು ಲೆಕ್ಕ ಹಾಕಿ.

ಶ್ರೀ ಜಗದೀಶ್ ಶೆಟ್ಟರ್: ಈ 28 ತಾಲ್ಲೂಕುಗಳ second instalmentನ್ನು ಇವತ್ತು release ಮಾಡಿದ್ದೇವೆ. ಅದು ಮೂರ್ನಾಕು ತಿಂಗಳ ಹಿಂದೆಯೇ release ಮಾಡಿರುವಂಥದ್ದು. ಈ 128 ತಾಲ್ಲೂಕಿಗೆ action plan ತೆಗೆದುಕೊಳ್ಳಬೇಕು. ಇವತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ task force committee ಎಂದು ಇದೆ. ಆ task force committಯವರೇನು action plan ಕಳುಹಿಸಿಕೊಡುತ್ತಾರೆ ಅದನ್ನು approval ಮಾಡುವಂಥದ್ದು.

ಶ್ರೀ ಸಿದ್ದರಾಮಯ್ಯ: M.L.A.ಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಕಾಲದಲ್ಲೂ ಸಮಿತಿ ಇರುತ್ತದೆ. ಬರಗಾಲ ಬಂದಾಗ ಇದ್ದೇ ಇರುತ್ತದೆ. ಅದರ ಸಭೆಯನ್ನು ಮಾಡಿದ್ದಾರೆಯೇ? ಎಲ್ಲಿ ಸಭೆ ಮಾಡಿದ್ದಾರೆ? ಏನೇನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ? ಯಾವ ರೀತಿ ತೆಗೆದುಕೊಂಡಿದ್ದಾರೆ? ಎಷ್ಟೆಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದಾರೆ? ಎಷ್ಟೆಷ್ಟು ಮಾಡಿದ್ದಾರೆ ಎಂಬ ಬಗ್ಗೆ ಸ್ವಲ್ಪ ಹೇಳಿ. ಉದ್ಯೋಗ ಸೃಷ್ಟಿ ಮಾಡಲು ಎಷ್ಟು ಕೊಟ್ಟಿದ್ದಾರೆ ಹೇಳಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಇವತ್ತು release ಮಾಡಿದ್ದಾರೆಂದು ಹೇಳಿದಿರಲ್ಲಾ, last release ಮಾಡಿದ್ದು ಯಾವಾಗ ಎಂದು ಕೇಳುತ್ತಿರುವುದಷ್ಟೇ?

ಶ್ರೀ ಜಗದೀಶ್ ಶೆಟ್ಟರ್: October, November ನಲ್ಲಿ release ಮಾಡಿದ್ದು.

ಶ್ರೀ ಅಮರೇಗೌಡ ಬಯ್ಯಾಪುರ್: ನಮ್ಮ ಕಡೆ release ಮಾಡಿದ್ದಾರೆ.

ಶ್ರೀ ಬಿ.ಶಿವರಾಂ: ಉಸ್ತುವಾರಿ ಸಚಿವರು ಮಾಡಿಕೊಂಡರೆ ಆಗು ಹೋಯಿತಲ್ಲಾ!

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: Drought ಇದೆಯೆಂದು ನೀವು ತೀರ್ಮಾನಕ್ಕೆ ಬಂದಿದ್ದು ಜೂನ್ endಗೆ. First release ಮಾಡಿರತಕ್ಕದ್ದು Octoberಗೆ.

ಶ್ರೀ ಜಗದೀಶ್ ಶೆಟ್ಟರ್: Release ಮಾಡಿದ್ದು Octoberನಲ್ಲೇ. ನಾನು ಮೊದಲು ಉತ್ತರವನ್ನು complete ಮಾಡುತ್ತೇನೆ. ಈಗ ನಾವೇನು amountನ್ನು release ಮಾಡಿದ್ದೇವೆ ಅದರಲ್ಲಿ, Drinking water purposeಗೆ 13 ಕೋಟಿ 50 ಲಕ್ಷ realize ಮಾಡಿದ್ದೇವೆ. Employment generation ಸಲುವಾಗಿ

234 ಕೋಟಿ, Flood relief ನ ಸಲುವಾಗಿ 159 ಕೋಟಿ 50 ಲಕ್ಷ, ಫಾಡರ್ ಸಲುವಾಗಿ ಒಂದೂವರೆ ಕೋಟಿ ಹಣ release ಮಾಡಿದ್ದೇವೆ. ಬೆಳೆ ನಾಶವಾದ ಬಗ್ಗೆ 34 ಕೋಟಿ 5 ಲಕ್ಷ ಹಣವನ್ನು release ಮಾಡಿದ್ದೇವೆ. Equipmentsನ್ನು purchase ಮಾಡುವುದಕ್ಕೆ 50 ಲಕ್ಷ ಬಿಡುಗಡೆ ಮಾಡಿದ್ದೇವೆ. Shifting of the villagesಗೆ, ಈ ಸಲ 90 villageಗಳನ್ನು ಬೇರೆ ಕಡೆಗೆ shift ಮಾಡಿದ್ದೇವೆ. ನಿನ್ನೆ ಇದರ ಬಗ್ಗೆ ಹಿರಿಯ ಕೆಲವು ಸದಸ್ಯರು ಪ್ರಶ್ನೆ ಮಾಡಿದರು. ಪ್ರತೀ ಸಲ ಪ್ರವಾಹ ಬರುತ್ತದೆ. ಪ್ರತೀ ಸಲ ಎಲ್ಲಿ ಪ್ರವಾಹ ಪೀಡಿತವಾಗುತ್ತದೆ ಎಂಬ ಬಗ್ಗೆ identify ಮಾಡಿದ್ದಿರಿ. ಅದನ್ನು shift ಮಾಡುವುದಕ್ಕೆ ಏನು ಮಾಡಿದ್ದೀರಿ ಎಂದು ಕೇಳಿದ್ದರು. ಇಂತಹ ಒಟ್ಟು 90 villages ಅನ್ನು ನಾವು identify ಮಾಡಿದ್ದೇವೆ. ಅದಕ್ಕಾಗಿ ಬೇರೆ land ಅನ್ನು identify ಮಾಡಿ ಎಲ್ಲಿ ಸಾಧ್ಯವಿದೆಯೋ, ಅಲ್ಲಿ land ಅನ್ನು purchase ಮಾಡುವಂಥಾದ್ದು. ಇಲ್ಲವೇ land acquisition ಮಾಡುವಂಥಾದ್ದು. ಇದಕ್ಕೋಸ್ಕರ ತಕ್ಷಣ 23 ಕೋಟಿ ರೂಪಾಯಿಗಳನ್ನು release ಮಾಡಿದ್ದೇವೆ. ಈಗಾಗಲೇ ಪ್ರತಿಯೊಂದು ಜಿಲ್ಲೆಯಲ್ಲಿ ರಸ್ತೆಗಳು ಇಲ್ಲದಿರುವ ಕಡೆಗಳಲ್ಲಿ ಅಂದರೆ ಬೆಳಗಾಂ, ರಾಯಚೂರು, ಬಾಗಲಕೋಟೆ, ಗುಲ್ಬರ್ಗಾ ಜಿಲ್ಲೆಗಳಿರಬಹುದು. ಎಲ್ಲೆಲ್ಲಿ ನೆರೆಹಾವಳಿ ಪೀಡಿತ ಪ್ರದೇಶಗಳಿವೆಯೋ, ಜಿಲ್ಲೆಗಳಿವೆಯೋ, ಅಲ್ಲಿಂದ permanent ಆಗಿ Shift ಮಾಡುವಂಥಾದ್ದು, ಕೆಲವೊಂದು partially shift ಮಾಡುವಂಥಾದ್ದು, ಇದಕ್ಕೋಸ್ಕರ ನಾವು ಈಗಾಗಲೇ 23 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದೇವೆ. Land purchase ಮಾಡಿದ್ದೇವೆ. ಮತ್ತು ಎಲ್ಲಿ land ಸಿಗಲಿಲ್ಲವೋ, ಅಲ್ಲಿ land acquisition process start ಮಾಡಿದ್ದೇವೆ. ಹೀಗಾಗಿ, ಇದರಿಂದ shifting of the villagesಗೆ ಖಾಯಂ ಪರಿಹಾರ ಹುಡುಕಬೇಕು. ಮುಂದಿನ ಸಲ ಮಹಾರಾಷ್ಟ್ರ ಭಾಗದಲ್ಲಿ ಮಳೆ ಬರಬಹುದು, ಕೃಷ್ಣಾ ಕೊಳ್ಳದಲ್ಲಿ ಇರಬಹುದು, ಭೀಮಾದಲ್ಲಿ ಇರಬಹುದು, ಹೆಚ್ಚು ನೀರು ಬಂದಾಗ ಮತ್ತೆ ನೆರೆಹಾವಳಿಗೆ ಪೀಡಿತವಾಗುವುದು ಅದೇ ಹಳ್ಳಿಗಳು. ಹೀಗಾಗಿ, ಅದರ ಸಲುವಾಗಿ ನಾವು 23 ಕೋಟಿ ರೂಪಾಯಿಗಳನ್ನು release ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್: ನಮ್ಮ DCಗಳು land acquisition ಪ್ರಕ್ರಿಯೆಗಳಿಗೆಲ್ಲಾ ಪ್ರತಿಯೊಂದು ತಾಲ್ಲೂಕಿನಲ್ಲಿ ಖರ್ಚು ಮಾಡಿದ್ದಾರೆ. ಈಗ ಅದನ್ನೂ ಹೇಳಿಬಿಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನಾನು ಮಧ್ಯೆ ಮಧ್ಯೆ interfere ಆಗುತ್ತೇನೆಂದು ಹೇಳುತ್ತೀರಿ. ತಾವು 23 ಕೋಟಿ ರೂಪಾಯಿಗಳನ್ನು release ಮಾಡಿದ್ದೀರಿ. Agreed, admitted. 90 ಹಳ್ಳಿಗಳನ್ನು shift ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ. ನಾನೇನು ತಪ್ಪು ಹೇಳುತ್ತಿದ್ದೇನೆಯೇ? ನೀವು ಕೊಟ್ಟಿರುವ ಉತ್ತರವನ್ನೇ ನಾನೂ ಹೇಳುತ್ತಿರುವುದು. ನನಗೆ Revenue Departmentನವರು information ಕೊಟ್ಟಿದ್ದಾರಲ್ಲ, ಅದನ್ನೇ ನಾನು ಹೇಳುತ್ತಿರುವುದು. ನೀವು ಒಂದೇ ಸಲ ಹೇಳಲಿ ಎಂದು ಕೇಳುತ್ತಿದ್ದೇನೆ. 90 ಹಳ್ಳಿಗಳನ್ನು ಸಂಪೂರ್ಣವಾಗಿ shift ಮಾಡಬೇಕೆಂದು ಹೇಳಿದ್ದೀರಿ. ಅದರಲ್ಲಿ 257 ಎಕರೆಗಳಷ್ಟು ಸರ್ಕಾರಿ ಜಮೀನು ಇದೆ. 1,200 ಚಿಲ್ಲರೆ ಎಕರೆಗಳಷ್ಟು ಖಾಸಗಿ ಜಮೀನನ್ನು acquire ಮಾಡಬೇಕೆಂದು ಹೇಳಿದ್ದೀರಿ. ನಿಮಗೆ 257 ಎಕರೆಗಳಷ್ಟು ಸರ್ಕಾರಿ ಜಮೀನು ಸಿಕ್ಕಿರುವುದರಿಂದ ತೊಂದರೆ ಏನಿಲ್ಲ. ಅದು Government Land. ಆ Government Landನಲ್ಲಿ ಇಲ್ಲಿಯವರೆಗೆ ಏನೇನು ಆಗಿದೆ, ಎಷ್ಟು ಖರ್ಚು ಮಾಡಿದ್ದೀರಿ? ಹೇಳಿ. ಖಾಸಗಿ ಜಮೀನು 1,200 ಚಿಲ್ಲರೆ ಎಕರೆಗಳಷ್ಟು acquisition proceedings, 4(1) notification ಆಗಿದೆಯೇ? 6(1) notification ಆಗಿದೆಯೇ? Award ಆಗಿದೆಯೇ? ದುಡ್ಡು ಕೊಟ್ಟಿದ್ದರೆ, ಎಷ್ಟು ಕೊಟ್ಟಿದ್ದೀರಿ? ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಗುಲ್ಬರ್ಗಾದಲ್ಲಿ ನಾವು ಭಾಗಶ: shift ಮಾಡುವಂಥಾದ್ದು 26 villages. ಅದರಲ್ಲಿ ಪೂರ್ಣವಾಗಿ shift ಮಾಡುವಂಥಾದ್ದು 1. ಒಟ್ಟು 27 villages ಅನ್ನು shift ಮಾಡಬೇಕು. ಅದರಲ್ಲಿ land identify ಮಾಡಿದ್ದು, ಒಟ್ಟು 120 ಎಕರೆಗಳಷ್ಟು ಜಮೀನನ್ನು ಅಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. 55 ಲಕ್ಷ 56 ಸಾವಿರ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಿರುವಂತಾದ್ದು. ಅನಂತರ, land purchase ಮಾಡುವ ಸಲುವಾಗಿ.. ..

ಶ್ರೀ ಸಿದ್ದರಾಮಯ್ಯ: ನನಗೆ Revenue Department ಕೊಟ್ಟಿರುವ information ಪ್ರಕಾರ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಒಟ್ಟು ಬೆಳಗಾಂನಲ್ಲಿ 25 ಭಾಗಶ: ಮತ್ತು 9 villages ಅನ್ನು ನಾವು ಪೂರ್ಣ shift ಮಾಡಬೇಕಾಗಿದೆ. ಒಟ್ಟು 34. ರಾಯಚೂರಿನಲ್ಲಿ 4 ಭಾಗಶ: ಮತ್ತು 5 ಪೂರ್ಣವಾಗಿ ನಾವು shift ಮಾಡಬೇಕು. ಒಟ್ಟು 9 villages. ಬಾಗಲಕೋಟೆಯಲ್ಲಿ ಭಾಗಶ: 6 villages ಮತ್ತು ಪೂರ್ಣ 10 villages ಅನ್ನು shift ಮಾಡಬೇಕಾಗಿದೆ. ಒಟ್ಟು 16 villages. ಬಿಜಾಪುರದಲ್ಲಿ 1 ಭಾಗಶ:, 1 ಪೂರ್ಣ, ಒಟ್ಟು 2 villages. ಕೊಪ್ಪಳದಲ್ಲಿ 2 villages ಅನ್ನು ಪೂರ್ಣವಾಗಿ shift ಮಾಡಬೇಕಾಗಿದೆ. ಅದು ಒಟ್ಟು 2. ಈ ರೀತಿಯಾಗಿ 90 villages ಅನ್ನು shift ಮಾಡಬೇಕು. ಅದಕ್ಕಾಗಿ 23 ಕೋಟಿ ರೂಪಾಯಿಗಳಷ್ಟು ಹಣವನ್ನು release ಮಾಡಿ ಈಗಾಗಲೇ ಕೆಲವೊಂದು ಕಡೆಗಳಲ್ಲಿ land purchase ಮಾಡಿದ್ದೇವೆ. ಎಲ್ಲೆಲ್ಲಿ land ಸಿಕ್ಕಿಲ್ಲವೋ, ಅಲ್ಲಿ land acquisition process ನಡೆಯುತ್ತಿದೆ. ಇವೊತ್ತು ಈ ರೀತಿಯ ಸ್ಥಳಾಂತರದ ಹಿನ್ನೆಲೆಯಲ್ಲೂ ಸಹ ಸಾಕಷ್ಟು ಉಪಕ್ರಮಗಳನ್ನು ಸರ್ಕಾರ ಕೈಗೊಂಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ Task Force Committee ರಚನೆ ಮಾಡಿದ್ದೇವೆ. ಶಾಸಕರ ಅಧ್ಯಕ್ಷತೆಯಲ್ಲಿ Task Force Committee ರಚಿಸಿ, ಆ ಕಮಿಟಿಯವರು Action Plan ಅನ್ನು ready ಮಾಡಿಕೊಳ್ಳಬೇಕು. Action Planಗಳನ್ನು ಎಲ್ಲೆಲ್ಲಿ ತಯಾರಿಸಿ ಕೊಟ್ಟಿದ್ದಾರೋ, ಅವುಗಳನ್ನು ಇವತ್ತು DCಯವರು ಜಿಲ್ಲಾ ಉಸ್ತುವಾರಿ ಸಚಿವರ consultationನೊಂದಿಗೆ approval ಮಾಡಿಕೊಟ್ಟಿದ್ದಾರೆ. ಹಾಗೆ approval ಕೊಟ್ಟನಂತರ ಎಲ್ಲೆಲ್ಲಿ Task Force Committeeಯವರು ಅದನ್ನು late ಆಗಿ ಮಾಡಿದ್ದಾರೋ, ಎಲ್ಲೆಲ್ಲಿ Action Plan ready ಆಗಿ work approval ಆಗಿವೆಯೋ, ಇವೊತ್ತು ಆ ಕಾಮಗಾರಿಗಳು ನಡೆಯುತ್ತಿರುವುದು ನಮ್ಮ ಮುಂದಿದೆ. ಬಹುಶ: 4–5 ಜಿಲ್ಲೆಗಳನ್ನು ಹೊರತುಪಡಿಸಿದರೆ, ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೂ ನಾನೇ ಸ್ವತ: ಹೋಗಿ ಬಂದಿದ್ದೇನೆ. ಇವೊತ್ತು ಹಿರಿಯ ಸದಸ್ಯರುಗಳು ಹೇಳಿದಂತೆ, ಎಂ.ಪಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿರುವ Cabinet Sub Committee ಏನಿದೆ..

ಶ್ರೀ ಸಿದ್ದರಾಮಯ್ಯ: ನಿಮ್ಮ ಅಧ್ಯಕ್ಷತೆಯಲ್ಲೇ ಉಪ ಸಮಿತಿ ಮಾಡಬೇಕೆಂದು ಸಲಹೆ ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ನಿಮ್ಮದು ಒಳ್ಳೆಯ ಸಲಹೆಯಾಗಿರುವುದರಿಂದ ಅದನ್ನು consideration ಮಾಡುತ್ತೇವೆ. ಈಗ ಮಾನ್ಯ ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ಆ ಉಪ ಸಮಿತಿ ಇರುವಂಥಾದ್ದು. ಆ ಸಮಿತಿಯಲ್ಲಿ Agriculture Minister ಇದ್ದಾರೆ, Drinking Waterಗೆ ಸಂಬಂಧಿಸಿದ ಮಂತ್ರಿಗಳಿದ್ದಾರೆ, ಆಹಾರಕ್ಕೆ ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ಹೀಗೆ ಸಂಬಂಧಪಟ್ಟ ಎಲ್ಲಾ ಮಂತ್ರಿಗಳೂ ಇರುವಂತಹ ಸಬ್ ಕಮಿಟಿಯು ಪ್ರತಿ 15 ದಿವಸಗಳಿಗೊಮ್ಮೆ ಸಭೆ ಸೇರುತ್ತಿದೆ. ಈಗ ಏನು ಉತ್ತಮ ಸಲಹೆ ಕೊಟ್ಟರು, "ಕೇವಲ ನೀವು ಮೀಟಿಂಗ್ ಮಾಡುವುದಷ್ಟೇ ಅಲ್ಲ, ನೀವು actual ಆಗಿ fieldಗೆ ಹೋಗಬೇಕು" ಎಂಬ ಮಾತನ್ನು ಹೇಳಿದರು. ನಾನು ಒಬ್ಬ ಕಂದಾಯ ಸಚಿವನಾಗಿ fieldಗೆ ಹೋಗಿ ಬಂದಿದ್ದೇನೆ. ಕೃಷಿ, ಆಹಾರ ಮತ್ತು Empowered Committee ಮಟ್ಟದ ಅಧ್ಯಕ್ಷರೆಲ್ಲರೂ ಸೇರಿ ಟೀಮ್ ಮಾಡಿಕೊಂಡು ಹೋದಾಗ ಬಹಳಷ್ಟು ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆಂಬ ಉತ್ತಮ ಸಲಹೆ ಕೊಟ್ಟಿದ್ದಾರೆ. ಅದನ್ನು ಹಿಂದಿನ ಹಲವಾರು ಸರ್ಕಾರಗಳು ಮಾಡಿರುವಂತಾದ್ದು. ಹೀಗಾಗಿ, ಆ ಒಂದು ಸಲಹೆಯನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ, ಉಪಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವೊತ್ತು ಮಾನ್ಯ ಶ್ರೀರಾಮರೆಡ್ಡಿಯವರು ಇರಬಹುದು, ಮಾಧುಸ್ವಾಮಿಯವರು ಇರಬಹುದು, ಅವರು ಮಾತನಾಡುತ್ತಾ, ಇದರಿಂದ ಇವೊತ್ತು asset create ಆಗಬೇಕೆಂದು ಹೇಳಿದರು. ನಾನು ಒಪ್ಪಿಕೊಳ್ಳುತ್ತಿದ್ದೇನೆ. ಇದರಿಂದ asset create ಆಗಬೇಕಾಗಿದೆ. ಬರಗಾಲ ಕಾಮಗಾರಿ ಎಂದರೆ, ಕೇವಲ ಯಾರ ಕೈಗೆ ಕೆಲಸ ಇಲ್ಲವೋ, ಅವರ ಕೈಗೆ ಕೆಲಸ ಕೊಡುವಂತಾದ್ದು. ಅಷ್ಟೇ ಅಲ್ಲ, ಇದರಿಂದ ಇವೊತ್ತು ಎಷ್ಟೊಂದು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಅದು ಸರಿಯಾಗಿ ಉಪಯೋಗವಾಗಬೇಕು. ಅದರಿಂದ asset create ಆಗಬೇಕು. ಹೀಗಾಗಿ, ತಾವು ಏನು ಸಲಹೆ, ಸೂಚನೆಗಳನ್ನು ಕೊಟ್ಟಿದ್ದೀರಿ, ಇಲ್ಲಿ guidelines ಹೀಗೇ ಇರುತ್ತದೆ, ಇಂತಹುದೇ ಕೆಲಸಗಳನ್ನು ತೆಗೆದುಕೊಳ್ಳಬೇಕು, ಇಂತಹುದೇ ಆಗಬೇಕು ಎನ್ನುವಂತಾದ್ದು DCಯವರು ಹೇಳುತ್ತಾರೆ ಎನ್ನುವಂತಾದ್ದು. ನಾವು ಇವೊತ್ತು ಏನು ಸುತ್ತೋಲೆ ಹೊರಡಿಸಿದ್ದೇವೆ, ಅದರಲ್ಲಿ ಇಷ್ಟು percentageನಲ್ಲಿ ಇಂತಹುದೇ ಕೆಲಸವನ್ನು ಮಾಡಬೇಕೆಂಬುದೇನೂ ಇಲ್ಲ. ಅದರಲ್ಲಿ ಒಂದು, ಬರ

ಕಾಮಗಾರಿಗಳು.. ಇಲ್ಲಿ ಉದ್ಯೋಗ ಸೃಜನೆ ಮಾಡುವಂತಾದ್ದು. ಕಾಮಗಾರಿಗಳಿಗೂ ಸಹ ಆದ್ಯತೆ ನೀಡುವುದು, ಬರಪೀಡಿತವೆಂದು ಘೋಷಿಸಿದ ತಾಲ್ಲೂಕುಗಳಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲಾದ ಅನುದಾನದಡಿ ಉಪಕರಣಗಳ ಮತ್ತು ಯಂತ್ರಗಳು ಬಳಕೆಯಾಗುವಂತಹ ಕಾಮಗಾರಿಗಳನ್ನು ಕೈಗೆ ತೆಗೆದುಕೊಳ್ಳಬಾರದೆಂಬ ಒಂದು ಸೂಚನೆ ಇದೆ. ಮತ್ತು ಯಾವ್ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಏನು ಸೂಚನೆಗಳನ್ನು ಕೊಡಲಾಗಿದೆಯೆಂದರೆ, ಕಾಮಗಾರಿಗಳ ಆಯ್ಕೆ ನ್ಯಾಯಯುತವಾಗಿರಬೇಕು, ಏಕೆಂದರೆ, ಅಂತರ್ಜಲದ ಬಗ್ಗೆ ಮಾನ್ಯ ಬಿ.ಆರ್.ಪಾಟೀಲರು, ಜಯಪ್ರಕಾಶ್ ಹೆಗ್ಡೆಯವರು, ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿಯವರು, ಸಿದ್ದರಾಮಯ್ಯನವರು ಇನ್ನು ಹಲವಾರು ಮಾನ್ಯ ಸದಸ್ಯರುಗಳು ಹೇಳಿದರು. ಇವರುಗಳು ಮಾತನಾಡುತ್ತಾ, ಅಂತರ್ಜಲ ಉತ್ಪನ್ನ ಜಾಸ್ತಿ ಮಾಡಬೇಕೆಂದು ಹೇಳಿದರು. ಹೀಗಾಗಿ, ಈ ಕಾಮಗಾರಿಗಳ ಆಯ್ಕೆ ನ್ಯಾಯಯುತವಾಗಿರಬೇಕು. ಅಂತರ್ಜಲ ಮರುಪೂರಣ ಕಟ್ಟಡಗಳು, ಹೂಳು ತೆಗೆಯುವುದು, ಸಣ್ಣ ನೀರಾವರಿ ಕೆರೆಗಳ ದುರಸ್ತಿ, ಇಂತಹ ಕಾಮಗಾರಿಗಳಿಗೆ ಆದ್ಯತೆ ನೀಡುವುದು. ಈಗ ನಮ್ಮ ಹಿರಿಯ ಮಾನ್ಯ ಸದಸ್ಯರು question ಮಾಡಿದರು. ಇಲ್ಲ, DCಯವರು ಇಷ್ಟು percentageನಲ್ಲೇ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಇಷ್ಟು percentageನಲ್ಲೇ ಕೆರೆ ಹೂಳು ತೆಗೆಯಬೇಕು, ಇಷ್ಟೇ check damಗಳನ್ನು ತೆಗೆದುಕೊಳ್ಳಬೇಕು. ಈ ತರಹದ ಸೂಚನೆಗಳನ್ನು ನಮಗೆ ಮಾಡುತ್ತಾರೆಂಬ ಮಾತುಗಳನ್ನು ಹೇಳಿದರು. ನಾವು ಆ ತರಹದ ಸೂಚನೆ ಕೊಟ್ಟಿಲ್ಲ. ಇವೆಲ್ಲಾ conditions ಇದ್ದುದು NREG ಸ್ಕೀಮ್‌ನಲ್ಲಿ. NREGS(National Rural Employment Guarantee Scheme)ನಲ್ಲಿ ಏನಿದೆಯೆಂದರೆ, ಕೇಂದ್ರ ಸರ್ಕಾರ ಕೆಲವೊಂದು guidelines ಕೊಟ್ಟಿದೆ. ಅದರ ಪ್ರಕಾರ ನಾವು ಅವುಗಳನ್ನು ನಡೆಸಿಕೊಳ್ಳಬೇಕಾಗಿದೆ. ಆ ಹಂತದಲ್ಲಿ restriction ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಬರಗಾಲ ಕಾಮಗಾರಿ ನಡೆಸುವುದರಲ್ಲಿ ಯಾವುದೇ ತರಹದ restrictions ಇಲ್ಲ. ಅಲ್ಲಿನ ಪರಿಸ್ಥಿತಿಗನುಗುಣವಾಗಿ ಆಯಾ ತಾಲ್ಲೂಕುಗಳಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕು, ಯಾವುದಕ್ಕೆ ಆದ್ಯತೆ ಕೊಡಬಾರದು ಎನ್ನುವಂತಾದ್ದಕ್ಕೆ ಇವೊತ್ತು Task Force ಇರುವಂಥಾದ್ದು. ಅದಕ್ಕೋಸ್ಕರ, ಶಾಸಕರ

ಅಧ್ಯಕ್ಷತೆಯಲ್ಲಿ ಆ Task Force Committee ಮುಖಾಂತರ ಇವೊತ್ತು ಈ ಕೆಲಸ-ಕಾರ್ಯಗಳನ್ನು ಮಾಡಬೇಕಾಗಿದೆ. ಮತ್ತು ದಿನಾಂಕ 13.9.06ರಂದು ಹೊರಡಿಸಿದ Circular ಇದೆ.

ಶ್ರೀ ಅಂಜನಾಮೂರ್ತಿ: ಹಿರಿಯ ಸಚಿವರು ಹೇಳುತ್ತಿರುವುದರಿಂದ ಸ್ಪಷ್ಟನೆ ಕೊಡಬೇಕು. ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯಲ್ಲಿ ಈ ರೀತಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದು guidelines ಕಳುಹಿಸಿದ್ದಾರೆ. Forestಗೆ, Horticultureಗೆ ಸ್ವಲ್ಪ ಹಣ ಕೊಡಬೇಕು. ಅದು ಕೊಟ್ಟ ನಂತರವೇ ಉಳಿದ ಹಣವನ್ನು ಕೊಡಬೇಕೆಂದು ಹೇಳುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಸದನದಲ್ಲಿ ಈ ಸುತ್ತೋಲೆ ಪ್ರಕಟಿಸಿದ್ದೇನೆ. ಈ ಸುತ್ತೋಲೆ ಇವೊತ್ತು, ನಿನ್ನೆ ಕಳುಹಿಸಿದ್ದಲ್ಲ. ಏನಾದರೂ ತೊಂದರೆ ಇದ್ದರೆ ಹೇಳಿ, ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇನೆ. ದಿನಾಂಕ 13.9.06ರಂದು ಸುತ್ತೋಲೆ ಹೊರಡಿಸಲಾಗಿದೆ. ಇದರಲ್ಲಿ ಸ್ಪಷ್ಟವಾಗಿ ನಾವು ಯಾವುದೇ percentage ಅನ್ನು ನಿಗದಿ ಮಾಡಿಲ್ಲ. ಆದ್ಯತೆಗಳನ್ನು ಇದಕ್ಕೆ ಕೊಡಿ ಎಂದಷ್ಟೇ ಹೇಳಿದ್ದೇವೆ. ಆದರೆ ಎಲ್ಲೆಲ್ಲಿ ಸಮಸ್ಯೆಯಾಗಿದೆ ಎಂಬುದನ್ನು ನನ್ನ ಗಮನಕ್ಕೆ ತಂದರೆ, ನಾನು ಅದನ್ನು ಸುತ್ತೋಲೆ ಪ್ರಕಾರ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ. ಇದಲ್ಲದೆ ನಾವು ಇನ್ನೊಂದು ಸೂಚನೆಯನ್ನೂ ಸಹ ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಕಾಮಗಾರಿಗಳನ್ನು ಗುತ್ತಿಗೆದಾರರ ಮೂಲಕ ತೆಗೆದುಕೊಳ್ಳುವುದು ಬಿಟ್ಟು, ಇಲಾಖೆ ಮುಖಾಂತರ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಹೆಚ್ಚಿನ ಸಂದರ್ಭದಲ್ಲಿ ಗುತ್ತಿಗೆದಾರರು ತಮ್ಮ ಜನರನ್ನು ನೇಮಿಸಿಕೊಳ್ಳುತ್ತಾರೆ. ಇದರಿಂದ ಸ್ಥಳೀಯ ಜನರಿಗೆ ಉದ್ಯೋಗಾವಕಾಶ ತಪ್ಪಿದಂತಾಗುತ್ತದೆ. ಆದ್ದರಿಂದ ಗುತ್ತಿಗೆದಾರರನ್ನೂ ಆದಷ್ಟು avoid ಮಾಡಬೇಕು ಎನ್ನುವಂತಹ ಸೂಚನೆಯನ್ನು ಸ್ಪಷ್ಟವಾಗಿ ನಾವು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ನೀವು 'ಸಾಧ್ಯವಾದಷ್ಟು ಮಟ್ಟಿಗೆ' ಎಂದು ಹೇಳಿದ ಮೇಲೆ, ಗುತ್ತಿಗೆದಾರರು ತಮ್ಮವರನ್ನೇ ನೇಮಿಸಿಕೊಳ್ಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿಯ ಸೂಚನೆಗಳನ್ನು ನಾವು ಕೊಟ್ಟಿದ್ದೇವೆ. ಇನ್ನೊಂದು ಸೂಚನೆ ನಾವು ಏನು ಕೊಟ್ಟಿದ್ದೇವೆ ಎಂದರೆ, ...

ಶ್ರೀ ಎಸ್.ಎಸ್.ಪಾಟೀಲ್ : 'ಸಾಧ್ಯವಾದಷ್ಟು ಮಟ್ಟಿಗೆ' ಎಂದು ತಾವೇನು ಸೂಚನೆ ಕೊಟ್ಟಿದ್ದೀರೋ, ಅದನ್ನು ತೆಗೆದೇ ಬಿಡಿ. ಗುತ್ತಿಗೆದಾರರಿಗೆ ಕೊಡಲೇಬೇಡಿ ಎಂದು ಸೂಚನೆ ಕೊಟ್ಟುಬಿಡಿ.

ಶ್ರೀ ಜಗದೀಶ್ ಶೆಟ್ಟರ್ : ಅಯಿತು, ಅದನ್ನೂ consider ಮಾಡೋಣ.

ಶ್ರೀ ಸಿದ್ದರಾಮಯ್ಯ : It is going to be impractical. ಸುಮ್ಮನೆ ಆ ರೀತಿ ಹೇಳುತ್ತೀರಿ. ಎಲ್ಲಾ ಮಾಡಿಸುವುದು ಗುತ್ತಿಗೆದಾರರ ಕೈಯಲ್ಲೇ. ಯಾವ ಅಧಿಕಾರಿಗಳೂ ಕೂಡ ಅವರೇ ಖುದ್ದಾಗಿ ನಿಂತುಕೊಂಡು ಆ ಸೂಚನೆಯನ್ನು ಅನುಷ್ಠಾನಗೊಳಿಸುವುದಿಲ್ಲ. ಸುಮ್ಮನೆ ನಾವು ಇಲ್ಲಿ ಬಂದು ಸುಳ್ಳು ಹೇಳಬೇಕಾಗುತ್ತದೆ. ನಾವೆಲ್ಲಾ ಎಂ.ಎಲ್.ಎ.ಗಳಾಗಿರುವುದರಿಂದ ನಮಗೆ ಅದೆಲ್ಲಾ ಗೊತ್ತಿಲ್ವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕೂಲಿಗಾಗಿ ಕಾಳು ಯೋಜನೆಯಲ್ಲೂ ಅದೇ ರೀತಿ ಆಗಿದೆ.

ಶ್ರೀ ಸಿದ್ದರಾಮಯ್ಯ : ಹೌದು. ಆದ್ದರಿಂದ ಅದನ್ನು ಹೇಗೆ ಹೇಳಿದ್ದೀರೋ ಹಾಗೆಯೇ ಬಿಟ್ಟುಬಿಡಿ. ದುರುಪಯೋಗವಾಗದಂತಹ ರೀತಿಯಲ್ಲಿ, assets create ಆಗುವಂತಹ ರೀತಿಯಲ್ಲಿ ಕಟ್ಟುನಿಟ್ಟಾಗಿ ಜಾರಿಯಾಗಬೇಕೆಂದು ಹೇಳಿ. ಉದಾಹರಣೆಗೆ, ಈ ವರ್ಷ ಒಂದು ತಾಲ್ಲೂಕಿನಲ್ಲಿ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಎಂದಿಟ್ಟುಕೊಳ್ಳಿ. ಆ 2 ಕೋಟಿ ರೂಪಾಯಿಗಳಲ್ಲಿ ಎಷ್ಟು assets create ಆಗಿದೆ ಎಂಬುದನ್ನು ನೋಡಿ. ಅದು yard stick ಆಗಬೇಕು. ನೀವು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅಲ್ಲಿ 5 ಲಕ್ಷ ರೂಪಾಯಿಗಳ asset ಕೂಡ create ಆಗಲಿಲ್ಲವೆಂದರೆ ಹೇಗೆ? ಅದರಿಂದ ಏನು ಪ್ರಯೋಜನವಾದಂತಾಯಿತು? ಅದರಿಂದ ಯಾರೋ ದುಡ್ಡನ್ನು ತಿಂದರು ಎಂದು ಹೇಳುವಂತಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್ : ತಾವು ಉತ್ತರ ಕೊಡುವಾಗ ದಯವಿಟ್ಟು ಉಪ ಪ್ರಶ್ನೆಗಳು ಉದ್ಭವವಾಗದಂತೆ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅಯಿತು, ನಾನು ಆ ರೀತಿ ಹೇಳುವುದಿಲ್ಲ ವೆಂದು ಎಲ್ಲಿ ಹೇಳಿದೆ?

ಶ್ರೀ ಎಸ್.ಎಸ್.ಪಾಟೀಲ್ : ನಾನು ಹೇಳುವುದೇನೆಂದರೆ, ತಾವು ಉದ್ಯೋಗ ಸೃಷ್ಟಿಗೆ ಇಷ್ಟು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ

ಎಂದು ಹೇಳಿದಿರಿ. ಎಷ್ಟು ಜನ ಕೂಲಿಕಾರರಿದ್ದರು? ವಾರದಲ್ಲಿ ಅವರಿಗೆ ಎಷ್ಟು ದಿವಸ ಕೂಲಿ ಕೊಟ್ಟಿರಿ? ಎಂಬುದನ್ನೂ ಸಹ ಹೇಳಿ. ಆಮೇಲೆ, ಕುಡಿಯುವ ನೀರು..

[ಗೊಂದಲ]

ಶ್ರೀ ಎಸ್.ಎಸ್.ಪಾಟೀಲ್ : ಕೂಲಿಕಾರರಿಗೆ ಎಷ್ಟು ದಿವಸ ಕೊಟ್ಟಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಾವು ಇನ್ನೊಂದು condition ಏನು ಹಾಕಿದ್ದೆವು ಎಂದರೆ, 'ಈ ಪ್ರವಾಹಕ್ಕೆ ಸಂಬಂಧಪಟ್ಟಂತೆ ಕೈಗೆತ್ತಿಕೊಳ್ಳಲಾಗುವ ಪುನರುಜ್ಜೀವನ ಕಾಮಗಾರಿಗಳು ಮತ್ತು ಬರ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಕೈಗೆತ್ತಿಕೊಳ್ಳಲಾದ ಉದ್ಯೋಗ ಸೃಷ್ಟಿ ಸೃಜನೆ ಕಾಮಗಾರಿಗಳು ಮೂರನೇ ಪಾರ್ಟಿಯ ತಪಾಸಣೆಗೆ ಒಳಪಡತಕ್ಕದ್ದು' ಎಂದು Third Party Inspection ಮಾಡಬೇಕೆಂದು condition ಹಾಕಿದ್ದೇವೆ. ಕೆಲವು ಕಡೆ ಏನಾಗಿದೆ ಎಂದರೆ, third party inspection ಆಗದೇ, ಅವರು certificate ಕೊಡದೆ, ಮುಂದಿನ ಕಾರ್ಯಕ್ರಮಗಳು ಆಗುತ್ತಿಲ್ಲ. ಹೀಗಾಗಿ ಕೆಲವು ಕಡೆಗಳಲ್ಲಿ ತಡವಾಗುತ್ತಿದೆ. ಆದ್ದರಿಂದ ಕೆಲವರು ಈ third party inspection ತೆಗೆದುಬಿಡಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ third party inspection ಇರಲೇಬೇಕೆಂಬ ಉದ್ದೇಶದಿಂದಲೇ ನಾವು ಅದನ್ನು ಇಟ್ಟಿದ್ದೇವೆ. ಆದರೆ ಆದಷ್ಟು ಜಾಗ್ರತವಾಗಿ ನಾವು ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ಕೆಲವು ಕಡೆ ಈ third party inspection ನಿಂದ ದುರುಪಯೋಗ ಕೂಡ ಆಗಬಹುದು. ಆದರೆ at least ಒಂದು ಹೆದರಿಕೆ ಇರತ್ತದೆ. ಎಷ್ಟೋ ಜನ ಶಾಸಕರು ಬಂದು ನನ್ನನ್ನು ಭೇಟಿಯಾಗಿ, ಈ third party inspection ಇರುವುದರಿಂದ, ಅವರು certificate ಕೊಡದೇ ಮುಂದಿನ ಕೆಲಸವಾಗುವುದಿಲ್ಲ ಎಂದು ಹೇಳಿದರು. ಕಾಮಗಾರಿ ಮುಗಿದಿದ್ದರೂ ಅವರು certificate ಕೊಡದಂತಹ ಪ್ರಕರಣಗಳಿದ್ದರೆ, ಅವುಗಳ ಬಗ್ಗೆ DC ಯವರು ತಕ್ಷಣವೇ action ತೆಗೆದುಕೊಳ್ಳುತ್ತಾರೆ. ಸಂಬಂಧಪಟ್ಟವರು ಅವರಿಗೆ ಅಂತಹ ಪ್ರಕರಣಗಳ ಬಗ್ಗೆ report ಮಾಡಲಿ. ನಾನು ಮೊನ್ನೆ ಹೋದಾಗ, ಕೆಲವೊಂದು district ಗಳಲ್ಲಿ ಈ ಬಗ್ಗೆ examine ಮಾಡಿದ್ದೇನೆ. ಯಾರಾದರೂ ಆ ರೀತಿ ಕಾಮಗಾರಿಗಳು ಆಗಿದ್ದರೂ third party inspection ಮಾಡಿ report ಮಾಡಿಲ್ಲವೋ ಅವರ

ವಿರುದ್ಧ DCಯವರು action ತೆಗೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆಯೂ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಇದರ ಬಗ್ಗೆ co–ordination ಆಗಬೇಕಾಗುತ್ತದೆ. District administration ಯಾರಿರುತ್ತಾರೋ, ಅವರನ್ನು ನಾವು nodal officer ಎಂದು ಮಾಡಿದ್ದೇವೆ. ಇನ್ನೂ ಹೆಚ್ಚು ಕಟ್ಟುನಿಟ್ಟಾಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ. ಹಲವಾರು ಸದಸ್ಯರು ಬೇರೆ ಬೇರೆ departmentಗಳ ನಡುವೆ co–ordination ಇರಬೇಕೆಂಬ ಬಗ್ಗೆ ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೆ. ಇಲಾಖೆಗಳ ನಡುವೆ ಸಮನ್ವಯ ಇಲ್ಲವೆನ್ನುವ ಮಾತನ್ನು ಇಲ್ಲಿ ಸದಸ್ಯರು ಪ್ರಸ್ತಾಪ ಮಾಡಿದರು. ಕೃಷಿ ಇಲಾಖೆ ಕೆಲವು ಕೆಲಸಗಳನ್ನು ಜಾರಿಗೊಳಿಸುತ್ತಿದೆ, ಜಿಲ್ಲಾ ಪಂಚಾಯಿತಿ ಕೆಲವು ಕೆಲಸಗಳನ್ನು ಜಾರಿಗೊಳಿಸುತ್ತಿದೆ. ಇದಲ್ಲದೆ, DCಯವರ ಮುಖಾಂತರ ಕೆಲವೊಂದು allocation ಮಾಡುವಂಥಾದ್ದು ಆಗುತ್ತಿದೆ. ಇವರೆಲ್ಲರ ನಡುವೆ co–ordination ಇಲ್ಲದೆ ಸ್ವಲ್ಪ ಕಡೆ ತೊಂದರೆಗಳಾಗಿವೆ. ಮಾನ್ಯ ಸದಸ್ಯರೇನು ಸಲಹೆ–ಸೂಚನೆಗಳನ್ನು ಕೊಟ್ಟಿದ್ದಾರೋ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ರೀತಿ co–ordination ಮಾಡಲಿಕ್ಕೆ ಹೆಚ್ಚು ಉಪಕ್ರಮಗಳನ್ನು ಕೈಗೊಳ್ಳುತ್ತೇನೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತು ಪ್ರತಿಪಕ್ಷದ ನಾಯಕರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಸಿದ್ದರಾಮಯ್ಯನವರು ಎಲ್ಲರೂ ಕೇಂದ್ರ ಸರ್ಕಾರದಿಂದ ಹಣ ಬಂದಿರುವುದನ್ನು ಖರ್ಚು ಮಾಡಿಲ್ಲವೆಂದು ಹೇಳಿದರು. ಕೇಂದ್ರ ಸರ್ಕಾರದಿಂದ ಬಂದಂತಹ ಎಲ್ಲಾ ಹಣವನ್ನು ನಾವು ಖರ್ಚು ಮಾಡಿದ್ದೇವೆ. ರಾಜ್ಯ ಸರ್ಕಾರದ ಖಜಾನೆಯಿಂದಲೂ ನಾವು ಖರ್ಚು ಮಾಡಿದ್ದೇವೆ. ಅಲ್ಲದೇ ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣವನ್ನೂ ಸಹ ನಾವು ಕೇಳಿದ್ದೇವೆ. ಮಾನ್ಯ ಶ್ರೀರಾಮರೆಡ್ಡಿಯವರು ಬೆಳೆ ನಷ್ಟವಾಗಿದೆ, ಬಿತ್ತನೆಯಾಗಲಿಲ್ಲ, ಮಳೆಯಾಗಿದೆ ಎಂದು ಹೇಳಿದರು....

ಶ್ರೀ ಕೆ.ಆರ್.ರಮೇಶ್‌ಕುಮಾರ್ [ಶ್ರೀನಿವಾಸಪುರ] : ಮಾನ್ಯ ಅಧ್ಯಕ್ಷರೆ, ಮೊದಲಿಗೆ ಮಹಾರಾಜರ ಕಾಲದಿಂದಲೂ ಕೂಡ ಈ ತರಹದ ಪರಿಸ್ಥಿತಿ ಉದ್ಭವವಾದರೆ, famine code ಎಂಬುದೊಂದು ಇತ್ತು. ಆ Famine code ಅನ್ನು ಅವರು ಆಗ ಜಾರಿಗೆ ತರುತ್ತಿದ್ದರು. Famine period close ಆಗುವವರೆಗೂ, ಮತ್ತೆ ಮಳೆಗಾಲ ಬಂದಿದೆ, ಎಲ್ಲಾ ಚೆನ್ನಾಗಿದೆ ಆಗಿದೆ

ಎನ್ನುವವರೆಗೂ famine code ಜಾರಿಯಲ್ಲಿರುತ್ತಿತ್ತು. Financial actions, administrative measures ಎಲ್ಲವೂ ಕೂಡ Famine code ನಲ್ಲಿ include ಆಗಿರುತ್ತಿತ್ತು. KAS Tahasildars ಮತ್ತಿತರರು ಯಾರೆಂದರೆ ಅವರು ಅಧಿಕಾರಿಗಳಾಗಿ ಬಂದ ಮೇಲೆ ಈಗ ಅದು ನಿಂತು ಹೋಗಿದೆ. ಅವರಲ್ಲಿ ಯಾರೊಬ್ಬರಿಗೂ ಕೂಡ ನಮ್ಮ ಆಡಳಿತದ ಇತಿಹಾಸವೇ ಗೊತ್ತಿಲ್ಲ. ಅವರಿಗೆ famine code ಎಂದರೇನು ಎಂಬುದೇ ಗೊತ್ತಿಲ್ಲ. Famine ಬಂದರೆ, ಅದಕ್ಕೆ ಹೇಗೆ ತಯಾರಾಗಬೇಕು ಎಂಬುದೇ ಅವರಿಗೆ ಗೊತ್ತಿಲ್ಲ. Land revenue remission ಅಂದರೆ ಗೊತ್ತಿಲ್ಲ. Remission after the petition ಅಂದರೆ ಗೊತ್ತಿಲ್ಲ. ಅದಾದ ಮೇಲೆ bank's remits ಒಂದೂ ಇವರಿಗೆ ಗೊತ್ತಿಲ್ಲ. ಅವರಿಗೆ ಆಡಳಿತದ ABCDಯೇ ಗೊತ್ತಿಲ್ಲ. ಸ್ವಲ್ಪ ನೀವು time ಸಿಕ್ಕಾಗ ಯಾರಾದರೂ ಬಾಲಸುಬ್ರಮಣ್ಯಂರಂತಹ retired senior IAS officers ಯಾರಿರುತ್ತಾರೋ, ಅಂತಹವರನ್ನು ಕರೆಸಿ ಈ famine code ಬಗ್ಗೆ ಅಧಿಕಾರಿಗಳಿಗೆ ತಿಳಿಸಿಕೊಟ್ಟರೆ ಬಹಳ ಉತ್ತಮವಾಗುತ್ತದೆ. ನಿಮ್ಮ Revenue Departmentನಲ್ಲಿ ಒಬ್ಬರು Scarcity Relief Secretary ಎಂಬುವವರು ಇರಬೇಕಾಗುತ್ತದೆ. ಎಲ್ಲಾ ಕಡೆಗೆ ನೀವು squads, nodal offices constitute ಮಾಡಬೇಕಾಗುತ್ತದೆ. ಅವರು ಅದೇ ತಾಲ್ಲೂಕಿನವರು ಆಗಿರಬಾರದು. They should visit. ಅವರು flying visits ಮಾಡಬೇಕು. ಅವರು work ಆಗುತ್ತಿರುವ ಜಾಗದಲ್ಲಿ inspection ಮಾಡಬೇಕು. Under payment ಆಗುತ್ತಿದೆಯೇ ಎಂಬುದನ್ನು ಕೇಳಬೇಕು. Contractorsಗೆ ಹಣ ಕೊಟ್ಟಿದ್ದಾರೆಯೇ? ಎಂಬುದನ್ನು ನೋಡಬೇಕು. ತಪ್ಪಿದ್ದರೆ concerned official ಯಾರಿರುತ್ತಾರೋ ಅವರನ್ನು ಶಿಕ್ಷಿಸಬೇಕು. All these things should be impartial. ಸ್ವಲ್ಪ ನೀವು ಅದನ್ನೆಲ್ಲಾ ನೋಡಿಕೊಂಡರೆ, ನಿಮಗೆ ಆಡಳಿತ ಸುಲಭವಾಗುತ್ತದೆ. ಆದರೆ ಅದಕ್ಕೆ you must invest time.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಏನೊಂದು ಸಲಹೆಯನ್ನು ಕೊಟ್ಟಿದ್ದಾರೋ, ಅದನ್ನು ನಾನು positive ಆಗಿ ತೆಗೆದುಕೊಂಡಿದ್ದೇನೆ. ಇವತ್ತೇನು ನಾವು ಬರಗಾಲ ಕಾಮಗಾರಿಗಳ ಸಲುವಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೋ, ಅದರ ಜೊತೆಗೆ food grains ಕೊಟ್ಟಿದ್ದರೆ ಇನ್ನೂ ಹೆಚ್ಚಿನ ಕಾಮಗಾರಿಗಳನ್ನು

ಮಾಡಲಿಕ್ಕೆ ಅನುಕೂಲವಾಗುತ್ತಿತ್ತು. ಕೇಂದ್ರ ಸರ್ಕಾರಕ್ಕೆ ಬರ ಪರಿಹಾರಕ್ಕಾಗಿ 1,262 ಕೋಟಿ 95 ಲಕ್ಷ ರೂಪಾಯಿಗಳ ನೆರವನ್ನು ನಾವು ಕೇಳಿದ್ದೇವೆ. ಅದರಲ್ಲಿ flood ಮತ್ತು drought ಎಲ್ಲಾ ಸೇರಿ 250 ಕೋಟಿ ರೂಪಾಯಿಗಳನ್ನು release ಮಾಡಿದ್ದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. DCಗಳ report ಆಧಾರದ ಮೇಲೆಯೇ ನಾವು ರಾಜ್ಯ ಸರ್ಕಾರದಿಂದ ಕೇಂದ್ರದ ನೆರವನ್ನು ಕೇಳಿದ್ದೇವೆ. DCಗಳು claim ಮಾಡಿದ್ದರ ಆಧಾರದ ಮೇಲೆ drought ಸಂದರ್ಭದಲ್ಲಿ ನಾವು 1500 ಕೋಟಿ ರೂಪಾಯಿಗಳ ನೆರವನ್ನು ಕೇಂದ್ರದಿಂದ ಕೋರಿದ್ದೆವು......

ಶ್ರೀ ಸಿದ್ದರಾಮಯ್ಯ : ನಿಮ್ಮ ಇಲಾಖೆಯವರು ನನಗೊಂದು ಮಾಹಿತಿ ನಿಮಗೊಂದು ಮಾಹಿತಿಯನ್ನು ಕೊಟ್ಟಿದ್ದಾರೆ ಎನಿಸುತ್ತಿದೆ. ತಾವು ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ. 2005-06ನೇ ಸಾಲಿನಲ್ಲಿ ಕೇಂದ್ರದಿಂದ ಅಪೇಕ್ಷಿಸಿದ ಹಣ 4998.63 ಕೋಟಿ ರೂಪಾಯಿಗಳು, 2006-07ನೇ ಸಾಲಿನಲ್ಲಿ ಕೇಂದ್ರದಿಂದ ಅಪೇಕ್ಷಿಸಿದ ಹಣ 1595.62 ಕೋಟಿ ರೂಪಾಯಿಗಳೆಂದು ನನಗೆ ಕೊಟ್ಟಿರುವ ಮಾಹಿತಿಯಲ್ಲಿ ಇದೆ. ಇದು ಸರಿಯೋ? ತಪ್ಪೋ?

ಶ್ರೀ ಜಗದೀಶ್ ಶೆಟ್ಟರ್ : ಇದು flood ಸಲುವಾಗಿ ಕೇಳಿದ್ದು.

ಶ್ರೀ ಸಿದ್ದರಾಮಯ್ಯ : ಇದು flood ಗಾಗಿ ಕೇಳಿದ್ದಲ್ಲ.

ಶ್ರೀ ಜಗದೀಶ್ ಶೆಟ್ಟರ್ :Flood ಸಲುವಾಗಿಯೇ ಕೇಳಿದ್ದು. ಅದಕ್ಕಾಗಿ ನಾವೆಲ್ಲಾ ಹೋಗಿ Memorandum ಕೊಟ್ಟು ಬಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ಎರಡೂ ಸೇರಿ ಇಷ್ಟು ಕೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : Flood ಸಲುವಾಗಿ ಕೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದರ ಬಗ್ಗೆ ತಾವು ಇನ್ನೊಂದು ಸಲ check up ಮಾಡಿ ನನಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅಯಿತು, Check-up ಮಾಡಿಸಿ ತಮಗೆ ತಿಳಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಅದನ್ನು ತಾವು ಚೆಕಪ್ ಮಾಡಿಸಿ. ಅದರ ಜೊತೆಗೆ ನಾನು ಹೇಳುವುದೇನೆಂದರೆ, DCಗಳು ನಿಮಗೆ 2006-07ನೇ ಸಾಲಿನಲ್ಲಿ ಪ್ರಕೃತಿ ವಿಕೋಪದ ಪರಿಹಾರಕ್ಕಾಗಿ 1262.95 ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಟ್ಟಿದ್ದರು. ಆದರೆ ನೀವು ಕೇಂದ್ರ ಸರ್ಕಾರಕ್ಕೆ 1595 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : DCಗಳಿಂದ ಬೇಡಿಕೆದಿಂದ ಆಧಾರದ ಮೇಲೆ ನಾವು ಕೇಂದ್ರ ಸರ್ಕಾರಕ್ಕೆ ನೆರವು ನೀಡುವಂತೆ ಕೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರಿಂದ ನನಗೆ ಮಾಹಿತಿ ಬಂದಿರುವುದನ್ನೇ ನಾನಿಲ್ಲಿ ಹೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಆಗಲೇ ಹೇಳಿದಂತೆ 2006–07ನೇ ಸಾಲಿನಲ್ಲಿ ನಾವು ಕೇಂದ್ರದಿಂದ 1500 ಕೋಟಿ ರೂಪಾಯಿಗಳ ನೆರವನ್ನು ಕೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದರ ಬಗ್ಗೆ ಸ್ವಲ್ಪ ಚೆಕಪ್ ಮಾಡಿಸಿ.

ಶ್ರೀ ಜಗದೀಶ್ ಶೆಟ್ಟರ್ : Yes, ಅದರ ಬಗ್ಗೆ check up ಮಾಡಿಸೋಣ. ಒಟ್ಟು 574 ಮೆಟ್ರಿಕ್ ಟನ್ ಆಹಾರ ಧಾನ್ಯವನ್ನು ಈ ವರ್ಷ ಕೇಂದ್ರ ಸರ್ಕಾರಕ್ಕೆ ಈ ಬರ ಸಲುವಾಗಿ ಕೇಳಿದ್ದೇವೆ. 50,000 ಮೆಟ್ರಿಕ್ ಟನ್ ಬಂದಿದೆ, ಅದನ್ನು ಎಲ್ಲಾ ಜಿಲ್ಲೆಗಳಿಗೆ ಹಂಚಿಕೆ ಮಾಡಿದ್ದೇವೆ, ಲಿಫ್ಟ್ ಮಾಡಿದ್ದಾರೆ. ಅಂದರೆ ಇದು ಬೇಗನೆ ಬಂದಿದ್ದರೆ ಈ ಕ್ಯಾಶ್ ಕಾಂಪೋನೆಂಟ್ ಜೊತೆ ಆ ಆಹಾರಧಾನ್ಯವನ್ನು ಕೊಟ್ಟಿದ್ದರೆ ಇನ್ನು ಹೆಚ್ಚು ಕಾಮಗಾರಿಗಳನ್ನು ನಾವು ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ನಾವು ಏನು 50,000 ಮೆಟ್ರಿಕ್ ಟನ್ ಆಹಾರಧಾನ್ಯ ಬಂದಿದೆ ಅದನ್ನೆಲ್ಲಾ ಬಿಡುಗಡೆ ಮಾಡಿದ್ದೇವೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಮಾತನಾಡುವಾಗ, ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಆವತ್ತು ಕೇಂದ್ರ ಸರ್ಕಾರ ಎಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿತೆಂದು ಕೇಳಿದರು, ಬೇಕಾದರೆ ಅದರ ಬಗ್ಗೆ ಕೊಡಿ ವಿವರ ತರಿಸಿ ಹೇಳುತ್ತೇನೆ. ಆವತ್ತು 2002–03 ರಲ್ಲಿ ಮೊದಲ ಹಂತದಲ್ಲಿ 2 ಲಕ್ಷ ಮೆಟ್ರಿಕ್ ಟನ್ ಕೊಟ್ಟರು. 2ನೇ ಹಂತದಲ್ಲಿ 1,65,000 ಮೆಟ್ರಿಕ್ ಟನ್, 3ನೇ ಹಂತದಲ್ಲಿ 1,65,000 ಮೆಟ್ರಿಕ್ ಟನ್. ಅಂದರೆ 2002–03ನೇ ಸಾಲಿನಲ್ಲಿ ಒಂದೇ ವರ್ಷದಲ್ಲಿ 5,30,000 ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಅವತ್ತಿನ ಸರ್ಕಾರ ಕೊಟ್ಟಿತು. 2003–04 ರಲ್ಲಿ ಮೊದಲನೇ ಹಂತದಲ್ಲಿ 1,35,000 ಮೆಟ್ರಿಕ್ ಟನ್, 2ನೇ ಹಂತದಲ್ಲಿ 50,000 ಮೆಟ್ರಿಕ್ ಟನ್. 3ನೇ ಹಂತದಲ್ಲಿ 1,00,000 ಮೆಟ್ರಿಕ್ ಟನ್, 4ನೇ ಹಂತದಲ್ಲಿ 65,000 ಮೆಟ್ರಿಕ್ ಟನ್, 5ನೇ ಹಂತದಲ್ಲಿ 1,65,000 ಮೆಟ್ರಿಕ್

ಟನ್, 6ನೇ ಹಂತದಲ್ಲಿ1,59,000 ಮೆಟ್ರಿಕ್ ಟನ್, ಅಂದರೆ 2003–04ನೇ ಸಾಲಿನಲ್ಲಿ ಒಟ್ಟು 6,79,000 ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಅಂದಿನ ಸರ್ಕಾರ ಬಿಡುಗಡೆ ಮಾಡಿತು.

ಡಾ: ಶರಣ ಪಕಾಶ್ ರುದ್ರಪ್ಪ ಪಾಟೀಲ್: ನಾನು ಮಾನ್ಯ ಜಗದೀಶ್ ಶೆಟ್ಟರ್ ರವರಿಗೆ ಒಂದು ಮಾತನ್ನು ಕೇಳುತ್ತೇನೆ, ಆಂಧ್ರಪ್ರದೇಶಕ್ಕೆ 40 ಲಕ್ಷ ಮೆಟ್ರಿಕ್ ಟನ್ ಕೊಟ್ಟರು ನಮಗೆ 6 ಲಕ್ಷ ಮೆಟ್ರಿಕ್ ಟನ್ ಕೊಟ್ಟರು.

5,74,000 ಮೆಟ್ರಿಕ್ ಟನ್ ಬಿಡುಗಡೆಯಾಗಬೇಕಾಗಿತ್ತು, 50,000 ಮೆಟ್ರಿಕ್ ಟನ್ ಬಿಡುಗಡೆ ಮಾಡಿದ್ದಾರೆ. ನಾನೆ ಸ್ವತ: ಹೋಗಿದ್ದೆ,ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ಒಂದೆರಡು ಸಲ ಹೋಗಿ ಮಾನ್ಯ ಶಿವರಾಜ್ ಪಾಟೀಲ್ ರವರಿಗೆ, ಶರದ್ ಪವಾರ್‌ರವರಿಗೆ ರಿಕ್ವೆಸ್ಟ್ ಮಾಡಿದ್ದೇವೆ, ಇನ್ನು ಹೆಚ್ಚು ಆಹಾರಧಾನ್ಯ, ಹಣವನ್ನು ಬಿಡುಗಡೆ ಮಾಡಿ ಎಂದು ಹೇಳಿದ್ದೇವೆ, ಅದಕ್ಕೆ ಅವರು ನಮಗೆ ರಿಲೀಸ್ ಮಾಡುತ್ತೇವೆನ್ನುವ ಮಾತಿನ ಭರವಸೆಯನ್ನು ಕೊಟ್ಟಿದ್ದಾರೆ, ಇನ್ನು ನಾವು ನಿರೀಕ್ಷೆ ಮಾಡುತ್ತೇವೆ, ಹೆಚ್ಚು ಕೊಟ್ಟರೆ ಹೆಚ್ಚು ಕಾಮಗಾರಿಯನ್ನು ಮಾಡುವುದಕ್ಕಾಗುತ್ತದೆ. ಇವತ್ತು ನಮ್ಮ ಖಜಾನೆಯಿಂದಲೂ ಹೆಚ್ಚು ಹಣವನ್ನು ಖರ್ಚು ಮಾಡಲು ತಯಾರಾಗಿದ್ದೇವೆ, ಈಗಾಗಲೇ ಬಿಡುಗಡೆ ಮಾಡಿದ್ದೇವೆ ಮತ್ತು ತಯಾರಾಗಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು, ಹಿಂದೆ ಇದ್ದ ಕೇಂದ್ರ ಸರ್ಕಾರ ಬಹಳ ಆಹಾರಧಾನ್ಯ ಬಿಡುಗಡೆ ಮಾಡಿತ್ತು ಎಂದೆಲ್ಲಾ ಹೇಳುವುದು ಸರಿ. ಮಾಡಿರುವುದೆಲ್ಲದರ ಬಗ್ಗೆ ನಾವು ಡಿಸ್‌ಪ್ಯೂಟ್ ಮಾಡುವುದಿಲ್ಲ. ಈಗ ಕಳೆದ ವರ್ಷ 2005–06ನೇ ಸಾಲಿನಲ್ಲಿ 2,52,000 ಟನ್ ಆಹಾರಧಾನ್ಯ ನಿಮಗೆ ಬಂದಿದೆ, ಈ ವರ್ಷ 50,000 ಟನ್ ಬಂದಿದೆ, ಕೇಂದ್ರ ಸರ್ಕಾರದಿಂದ ಈ ವರ್ಷ 341 ಕೋಟಿ ರೂಪಾಯಿ ಬಂದಿದೆ. ಬರ ಪರಿಹಾರಕ್ಕೆಂದು ನೀವು ಬಿಡುಗಡೆ ಮಾಡಿರುವುದು 236 ಕೋಟಿ, ಕುಡಿಯುವ ನೀರಿಗೆಂದು ಹದಿಮೂರುವರೆ ಕೋಟಿ, ಮೇವಿಗೆಂದು ಒಂದುವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಕೇಂದ್ರ ಸರ್ಕಾರ ಕೊಟ್ಟಿರುವುದನ್ನೆ ಇನ್ನು ಬಿಡುಗಡೆ ಮಾಡಿಲ್ಲ, ಇಷ್ಟೆಲ್ಲಾ ಬಿಡುಗಡೆ ಮಾಡಿ 136 ಕೋಟಿ ರೂಪಾಯಿಗಳನ್ನು ಡಿಸಿಗಳು ಇಟ್ಟುಕೊಂಡಿದ್ದಾರೆ. ಹಾಗಾದರೆ ಅಲ್ಲೇನು ಕೆಲಸ ನಡೆಯುತ್ತಿಲ್ಲ ಎಂದಾಯಿತು.

ನೀವು ಕೊಟ್ಟಿರುವ ಆಹಾರಧಾನ್ಯವನ್ನೇ ಖರ್ಚು ಮಾಡಿಲ್ಲ. ಅದಕೋಸ್ಕರ ನಾನು ಕೇಳುತ್ತಿರುವುದು, ಮಾನ್ಯ ಮಂತ್ರಿಗಳಿಗೆ ಬಹಳ ತಾಳ್ಮೆ ಇದೆ, ಕೇಳಬೇಕು. ಈ ವರ್ಷ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಜನಕ್ಕೆ ಕೆಲಸವನ್ನು ಕೊಟ್ಟಿದ್ದೀರಿ, ಎಷ್ಟು ಮ್ಯಾನ್ ಡೇಸ್ ಕ್ರಿಯೇಟ್ ಆಗಿದೆ, ಆಹಾರ ಎಷ್ಟು ಕೊಟ್ಟಿದ್ದೀರಿ, ದುಡ್ಡು ಎಷ್ಟು ಕೊಟ್ಟಿದ್ದೀರಿ, ಕುಡಿಯುವ ನೀರಿಗೆ ಎಷ್ಟು ಬೋರ್ ವೆಲ್‌ಗಳನ್ನು ಕೊರೆಸಿದ್ದೀರಿ, ಕುಡಿಯುವ ನೀರನ್ನು ಕೊಡಲು ಪೈಪ್ ಲೈನ್ ಹಾಕಿಕೊಡುವುದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಈ ರೀತಿಯ ಮಾಹಿತಿಯನ್ನೆಲ್ಲಾ ಕೊಡಬೇಕಲ್ಲ. ಉದಾ: ಮೈಸೂರು ತಾಲ್ಲೂಕಿನಲ್ಲಿ ಎಷ್ಟು ಜನ ಅಗ್ರಿಕಲ್ಚರ್ ಲೇಬರ್ ಇರುತ್ತಾರೆ, ಎಷ್ಟು ಜನಕ್ಕೆ ಕೆಲಸ ಮಾಡುವುದಕ್ಕೆ ಶಕ್ತಿ ಇದೆ, ಎಷ್ಟು ಜನಕ್ಕೆ ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲ, ನಾವು ಎಷ್ಟು ಜನಕ್ಕೆ ಕೆಲಸ ಕೊಟ್ಟಿದ್ದೇವೆ, ಎಲ್ಲರಿಗೂ ಕೊಡುವುದಕ್ಕಾಗಿದೆಯಾ ಇಲ್ಲವೇ, ಬರಪರಿಹಾರದಲ್ಲಿ ಗಂಜಿ ಕೇಂದ್ರಗಳನ್ನು ತೆಗೆದಿದ್ದೇವೆಯೆ ಇಲ್ಲವೇ? ದನಕರುಗಳಿಗೆ ಮೇವು ಕೊಡುವುದಕ್ಕಾಗದೇ ಹೋದರೆ ಗೋ ಶಾಲೆಗಳನ್ನು ತೆಗೆದಿದ್ದೇವೆಯೇ ಇಲ್ಲವೇ, ಅವುಗಳಿಗೆ ನೀರನ್ನು ಕೊಡುವುದಕ್ಕೆ ಮಾಡಿದ್ದೇವೆಯೇ ಇಲ್ಲವೇ? ಇವೆಲ್ಲಾ ಉತ್ತರದಲ್ಲಿರಬೇಕಲ್ಲ, ಅದ್ಯಾವುದೂ ಇಲ್ಲದೇ, ಅವರು ಇಷ್ಟು ದುಡ್ಡು ಕೊಟ್ಟರು, ನಾವು ಇಷ್ಟು ದುಡ್ಡು ಬಿಡುಗಡೆ ಮಾಡಿದ್ದೇವೆಂದರೆ ಹೇಗೆ? ನೀವು ಮರೆತುಬಿಟ್ಟರಿ ಎಲ್ಲಾದರೂ ಕಂಕ್ಲೂಡ್ ಮಾಡಿಬಿಟ್ಟಿರೆಂದು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್: ನಾನು ಈಗಲೇ ಕಂಕ್ಲೂಡ್ ಮಾಡುತ್ತಿಲ್ಲ, ಇನ್ನು ಬಹಳಷ್ಟು ವಿಷಯವಿದೆ, ಈಗ ತಾವೇನು ಹೇಳಿದಿರಿ , ಆ ಬಗ್ಗೆ ಎಲ್ಲಾ ಉತ್ತರವನ್ನು ಕೊಡುತ್ತೇವೆ. ಆ ಬಗ್ಗೆ ನಾವು ಹಿಂದೆ ಮುಂದೆ ನೋಡುವ ಪ್ರಶ್ನೆಯೇ ಇಲ್ಲ. ಇವತ್ತು ಮೇವಿನ ಪರಿಸ್ಥಿತಿಯ ಬಗ್ಗೆಯು ಹೇಳಿದ್ದಾರೆ. ಇವತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಮೇವಿನ ಪರಿಸ್ಥಿತಿ ಏನಿದೆ, ಏನು ಸ್ಟಾಕ್ ಇದೆ ಎಂಬುದರ ಬಗ್ಗೆ ಪೂರ್ಣ ವಿವರವಿದೆ. ಸರ್ಕಾರದ ಸ್ಟಾಕ್ ಎಂದಲ್ಲ, ಆ ಜಿಲ್ಲೆಯ ರೈತರ ಹತ್ತಿರವಿರುವುದು, ಅಲ್ಲಿ ಬೆಳೆಯುವುದು ಈ ಬಗ್ಗೆ ಸ್ಟಾಕ್ ಇದೆ. ಇನ್ನು 2 ತಿಂಗಳವರೆಗೆ ತೊಂದರೆ ಇಲ್ಲದಷ್ಟು ಮೇವಿನ ಸಂಗ್ರಹವಾಗಿದೆ. ಬೇಕಾದರೆ ನಿಮಗೆ ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುತ್ತೇನೆ. ಮೇವಿನ ತೊಂದರೆ ಕೆಲವೊಂದು ಜಿಲ್ಲೆಯಲ್ಲಿದೆ, ಕೆಲವೊಂದು ಜಿಲ್ಲೆಗಳು ಮೇವಿಗಾಗಿ ಇನ್ನೊಂದು ವಾರಕ್ಕೆ ಇನ್ನೊಂದು ತಿಂಗಳಿಗೆ ತೊಂದರೆ ಅನುಭವಿಸುತ್ತಿವೆ. ಈಗ

ಕೊಪ್ಪಳ, ಚಿತ್ರದುರ್ಗಾ ಜಿಲ್ಲೆಯಲ್ಲಿ ತೊಂದರೆ ಇದೆ, ಅಲ್ಲಿ ಏನು ವ್ಯವಸ್ಥೆ ಮಾಡಬೇಕೋ ಅದನ್ನು ನಾವು ಮಾಡಿದ್ದೇವೆ. ಅಲ್ಲಿ ಮೇವಿನ ಬ್ಯಾಂಕ್ ಅನ್ನು ಸ್ಥಾಪನೆ ಮಾಡುವುದು, ಖರೀದಿ ಮಾಡಬೇಕೆನ್ನುವುದರ ಬಗ್ಗೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಈ ಮೇವನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುತ್ತಾರೆ. ಬೇರೆ ಬೇರೆ ರಾಜ್ಯಗಳಿಗೆ ತೆಗೆದುಕೊಂಡು ಹೋಗುತ್ತಾರೆ, ಬೇರೆ ರಾಜ್ಯದವರು ಬಂದು ಇಲ್ಲಿ ಖರೀದಿ ಮಾಡುವುದು ಇದಕ್ಕೆಲ್ಲಾ ಸಂಪೂರ್ಣ ನಿರ್ಬಂಧವನ್ನು ಹಾಕಿದ್ದೇವೆ. ಮತ್ತೆ ಫಾಡರ್ ಬ್ಯಾಂಕ್ ಸ್ಥಾಪನೆ ಮಾಡಬೇಕೆಂದು ಹೇಳಿದ್ದೇವೆ. ಈಗ ಒಂದೆರಡು ಜಿಲ್ಲೆಗಳಲ್ಲಿ ಸ್ಥಾಪನೆಯಾಗಿದ್ದಾವೆ. ಕೇಲವೊಂದು ಜಿಲ್ಲೆಗಳಲ್ಲಿ ಗೋ ಶಾಲೆಗಳ ಅವಶ್ಯಕತೆ ಇದೆ, ಕೆಲವೊಂದು ಜಿಲ್ಲೆಗಳಲ್ಲಿ ಗೋ ಶಾಲೆಗಳ ಅವಶ್ಯಕತೆಯೇ ಇಲ್ಲ, ಅಲ್ಲಿ ಬೇಡವೆನ್ನುತ್ತಾರೆ.ಗದಗ್ ಕೊಪ್ಪಳ, ಚಿತ್ರದುರ್ಗಾದಂತಹ ಕೆಲವೊಂದು ಜಿಲ್ಲೆಗಳಲ್ಲಿ ಅವಶ್ಯಕತೆ ಇದೆ, ಅಲ್ಲಿ ಗೋ ಶಾಲೆಗಳನ್ನು ತೆರೆಯುವುದಕ್ಕೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ, ಕಲವೊಂದು ಕಡೆ ಗೋ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಪ್ರತಿಯೊಂದು ತಾಲ್ಲೂಕಿನ ಮಾಹಿತಿಯನ್ನು ಕೇಳಿದರು. ಬಾಗಲಕೋಟೆ ಜಿಲ್ಲೆಯದನ್ನು ಹೇಳಬೇಕಾದರೆ, ಈ ಜಿಲ್ಲೆಯಲ್ಲಿ 375 ಕಾಮಗಾರಿಗಳು ಪ್ರಾರಂಭವಾಗಿವೆ. under the drought relief wroks, total man days generated 5,03,958.. ಮತ್ತೆ ಬೆಂಗಳೂರು[ಗ್ರಾ], under the drought relief works 400 Man days generated 123 works ನಾವು ಬೆಂಗಳೂರು (ನಗರ)ದಲ್ಲಿ ತೆಗೆದುಕೊಂಡಿದ್ದೇವೆ.

ಶ್ರೀ ಅಂಜನಮೂರ್ತಿ: ಬೆಂಗಳೂರು[ಗ್ರಾಮಾಂತರ] ಇಲ್ಲಿ 400 drought relief works ತೆಗೆದುಕೊಳ್ಳಲಾಗಿದೆ ಎಂದು ಹೇಳುತ್ತಿದ್ದೀರಿ,ನಾನೊಬ್ಬ ಬೆಂಗಳೂರು [ಗ್ರಾಮಾಂತರ] ಜಿಲ್ಲೆಯಿಂದ ಬಂದಿರುವ ಜನಪ್ರತಿನಿಧಿಯಾಗಿ ಹೇಳುತ್ತಿದ್ದೇನೆ, ಬೆಂಗಳೂರು [ಗ್ರಾಮಾಂತರ] ಜಿಲ್ಲೆಯಲ್ಲಿ ಎಲ್ಲೂ ಒಂದು ಕೆಲಸವನ್ನು ತೆಗೆದುಕೊಂಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಾನು ರಿವ್ಯೂ ಮಾಡಿದ್ದೇನೆ, ನಾನೇ ನಿಮ್ಮ ಜೊತೆಯಲ್ಲಿ ಬರುತ್ತೇನೆ ಹೋಗೋಣ ನಡೆಯಿರಿ, ಬೆಂಗಳೂರು[ಗ್ರಾಮಾಂತರ] ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕೆಲಸವನ್ನು ನಾನು ತೋರಿಸುತ್ತೇನೆ. ಮತ್ತೆ ಬಳ್ಳಾರಿ ಜಿಲ್ಲೆಯಲ್ಲಿ drought relief works 521 ಪ್ರಾರಂಭವಾಗಿವೆ, ಬೀದರ್ ಜಿಲ್ಲೆಯಲ್ಲಿ 257 drought relief works ಪ್ರಾರಂಭವಾಗಿವೆ, ಬಿಜಾಪುರದಲ್ಲಿ

202, ಚಾಮರಾಜನಗರ ಜಿಲ್ಲೆಯಲ್ಲಿ 867, ಚಿಕ್ಕಮಗಳೂರು ಜಿಲ್ಲೆಯಲ್ಲಿ 141 drought relief works ಪ್ರಾರಂಭವಾಗಿವೆ. ಚಾಮರಾಜ ನಗರದಲ್ಲಿ 867 ವರ್ಕ್ sanction ಆಗಿತ್ತು, 341 work start ಆಗಿವೆ.

ಶ್ರೀ ಆರ್. ಧ್ರುವನಾರಾಯಣ: ನವೆಂಬರ್ ತಿಂಗಳಲ್ಲಿ ಪ್ರಾರಂಭ ವಾಯಿತು, action plan ಮಾಡಿ ಕಮಿಟಿ ಮುಖಾಂತರ ನಾವು ಕಳುಹಿಸಿದ್ದೇವೆ. Action plan estimate ಪಟ್ಟಿಯನ್ನು ಇವತ್ತಿನವರೆಗೆ ಸಹಿ ಮಾಡುತ್ತಿದ್ದಾರೆ. ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಇಷ್ಟವಿಲ್ಲ. ಅವರು ನಮಗೆ ವರ್ಗಾವಣೆ ಮಾಡಿ ಎಂದು ಹೇಳುತ್ತಿದ್ದಾರೆ. ಚಾಮರಾಜನಗರ ಎಂದರೆ ನಿಮಗೆ ಭಯ ಇದೆ.

ಶ್ರೀ ಜಗದೀಶ್ ಶೆಟ್ಟರ್: ಚಾಮರಾಜ ನಗರಕ್ಕೆ ಬಂದು ನಾನು ಇನ್ನೊಂದು 15–20 ದಿವಸಗಳಲ್ಲಿ ರಿವ್ಯೂ ಮೀಟಿಂಗ್ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ: ದಯಮಾಡಿ ಇಂತಹ ದಿನ ಬರುತ್ತೇನೆಂದು ಘೋಷಣೆ ಮಾಡಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಮಾರ್ಚ್ ಮೊದಲನೇ ವಾರದಲ್ಲಿ ನಿಮ್ಮ ಚಾಮರಾಜನಗರಕ್ಕೆ ಬರುತ್ತೇನೆ. ಖಂಡಿತವಾಗಿ ನಾನು ಅಲ್ಲಿಗೆ ಬಂದು ರಿವ್ಯೂ ಮೀಟಿಂಗ್ ಮಾಡುತ್ತೇನೆ. ಚಿಕ್ಕಮಂಗಳೂರಿನಲ್ಲಿ 141 workಗಳಲ್ಲಿ 72 work start ಆಗಿವೆ. ಚಿತ್ರದುರ್ಗದಲ್ಲಿ 3246 ರಲ್ಲಿ 3341 ಕೆಲಸಗಳು, ದಾವಣಗೆರೆಯಲ್ಲಿ 2496work ಗಳಲ್ಲಿ 521 ಕೆಲಸಗಳು ಪ್ರಾರಂಭ ಆಗಿವೆ.ಅದೇ ರೀತಿ ಗದಗ್‌ನಲ್ಲಿ 388ರಲ್ಲಿ 279 work start ಆಗಿವೆ. ಗುಲ್ಬರ್ಗದಲ್ಲಿ 1100 ಕೆಲಸಗಳು. ಈ ರೀತಿ ಪ್ರತಿಯೊಂದು ಜಿಲ್ಲೆಗಳಲ್ಲಿ ಬರಗಾಲ ಕಾಮಗಾರಿ ಕೆಲಸಗಳು ಪ್ರಾರಂಭ ಆಗಿವೆ. ಎಲ್ಲಿ ಕೆಲಸಗಳು ಪ್ರಾರಂಭವಾಗಿಲ್ಲವೆಂದು ನನ್ನ ಗಮನಕ್ಕೆ ತೆಗೆದುಕೊಂಡು ಬಂದರೆ ಅಲ್ಲಿಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕೆಲಸ ಪಟ್ಟಿ ಮಾಡಿದ್ದಾರೆ, ಅದರಲ್ಲಿ ಪ್ರಾರಂಭವಾಗಿರುವುದು 500 ಎಂದರೆ you are satisfied. Are you satisfied? ಅಧ್ಯಕ್ಷರೇ ಇವರ ಪ್ರಕಾರವೇ 3000 ಚಿಲ್ಲರೆ ಕಾಮಗಾರಿಗಳು approval ಆಗಿವೆ. ಕೆಲಸ ಪ್ರಾರಂಭವಾಗಿರುವುದು 500. Government is satisfied. ಬರಗಾಲದಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್: Satisfed ಎಂದು ನಾನು ಹೇಳುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಜೂನ್ 30ನೇ ತಾರೀಕು ನೀವು declare ಮಾಡಿರುವುದು. ನೀವು ಓದುತ್ತಿರುವುದು ಯಾವುದು, February ದು ಓದುತ್ತಿದ್ದೀರಿ. 4000 ಪಟ್ಟಿ ಮಾಡಿ 500 ಕೆಲಸಗಳು ಪ್ರಾರಂಬವಾಗಿವೆ ಎಂದು ಹೇಳಿದರೆ, ಸರ್ಕಾರಕ್ಕೆ ಬಹಳ ತೃಪ್ತಿ ಆಗಿದೆ. ಇವರೇ ಹೇಳುತ್ತಿದ್ದಾರೆ. ನಾವು ನಿನ್ನೆ ಮಾತನಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಮೂರು ತಿಂಗಳುಗಳ ಹಿಂದೆ DC ಯವರಿಗೆ 148 ಲಕ್ಷ ರೂಪಾಯಿಗಳಿಗೆ ಪಟ್ಟಿ ಮಾಡಿ ಕಳುಹಿಸಿದರೆ, ಅವರು approval ಮಾಡಿದ ಕೆಲಸಗಳು 74 ಲಕ್ಷಗಳಿಗೆ. ಹಣ ಬಿಡುಗಡೆ ಮಾಡಿರುವುದು 35 ಲಕ್ಷ ರೂಪಾಯಿಗಳಿಗೆ ಎಂದು ನಾನು ನಿನ್ನೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಿಮ್ಮ ಲೆಕ್ಕದಲ್ಲಿ ಕೂಡ ಅದೇ ಕಾಣುತ್ತಿದೆ. ಇಡೀ ಜಿಲ್ಲೆಯಲ್ಲಿ 4,000 ಕೆಲಸಗಳ ಪಟ್ಟಿ ಹೋಗಿದೆ, ಕೆಲಸ ಆಗಿರತಕ್ಕಂಥದ್ದು 500 ಮಾತ್ರ. ತಾಲ್ಲೂಕುಗಳಿಗೆ ಎಷ್ಟು ಅಯಿತು ಎಂದು ನೀವು ಲೆಕ್ಕ ಹಾಕಿ. ಬರಗಾಲದ್ದು ನೀವು ಸಾಧನೆ ಮಾಡಿರುವುದು ಇದೇನಾ?

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಈಗ ಎಲ್ಲೆಲ್ಲಿ ಏನು status ಇವೆ ಅದನ್ನು ಹೇಳುತ್ತಿದ್ದೇನೆ. ಅದೇನು ಹೆಚ್ಚಿಗೆ ಹೇಳಬೇಕೆಂದು ಅಲ್ಲ ಕಡಿಮೆ ಮಾಡಬೇಕೆಂದು ಅಲ್ಲ. ಇವತ್ತು ಸರ್ಕಾರ ಏನು ಉಪಕ್ರಮಗಳನ್ನು ತೆಗೆದುಕೊಂಡಿದೆ, ಅದರ ಬಗ್ಗೆ ನಾನು ಸದನದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. flood ಬಗ್ಗೆ ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. flood ಬಗ್ಗೆ ಇನ್ನು ಹೆಚ್ಚಿನ ಹಗಣವನ್ನು ಬಿಡುಗಡೆ ಮಾಡುವಂಥದ್ದು, ಈಗಾಗಲೇ drought ಸಲುವಾಗಿ 128 ಕೋಟಿ ರೂಪಾಯಿಗಳಲ್ಲಿ 100 ಕೋಟಿ ರೂಪಾಯಿಗಳು ರಿಲೀಸ್ ಮಾಡಿದ್ದೇವೆ, 28 ಕೋಟಿ ರೂಪಾಯಿಗಳನ್ನು ಇವತ್ತು ರಿಲೀಸ್ ಮಾಡಿದ್ದೇವೆ. Flood ಸಲುವಾಗಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ, ಉಡುಪಿ ಶಿವಮೊಗ್ಗ ,ಬೆಳಗಾಂ ಜಿಲ್ಲೆ ಮತ್ತು ಬೇರೆ ಬೇರೆ ಕಡೆ ಇನ್ನು ಹಲವಾರು ಕಾಮಗಾರಿಗಳನ್ನು ಕೈಗೊಳ್ಳಬೇಕೆನ್ನುವಂಥದ್ದು, flood relief works ತೆಗೆದುಕೊಳ್ಳ ಬೇಕೆನ್ನುವಂಥದ್ದು, ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಕೂಡ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ನಾವು ಉಪ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಬೆಳೆ ನಷ್ಟವಾದ ಬಗ್ಗೆ ಮಾನ್ಯ ಶ್ರೀರಾಮರೆಡ್ಡಿಯವರು ಹೆಚ್ಚಿನ ಒತ್ತು ಕೊಟ್ಟರು. ಬೆಳೆ ನಷ್ಟವಾಗಿದ್ದಕ್ಕೆ ಕೂಡ

ಕೇಂದ್ರ ಸರ್ಕಾರದವರು ಹೆಚ್ಚಿನ ಹಣವನ್ನು ಕೊಡಬೇಕೆಂದು ವಿನಂತಿ ಮಾಡಿ ಕೊಂಡಿದ್ದೇವೆ. ಅವರು ಹಣ ಕೊಡದೇ ಇದ್ದಾಗ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಬೆಳೆ ನಷ್ಟ ಎಲ್ಲಿ ಆಗಿದೆ ಅದರ ಬಗ್ಗೆಯೂ ಪರಿಹಾರ ಕೊಡುವ ಬಗ್ಗೆಯೂ ನಾವು consider ಮಾಡುತ್ತೇವೆ.

ಉಪಾಧ್ಯಕ್ಷರು: ಶ್ರೀರಾಮರೆಡ್ಡಿಯವರೇ ಅವರು ಮುಗಿಸಲಿ, ಅವರು ಮುಗಿಸಿದ ನಂತರ ನೀವು ಕೇಳಿ ನಾನು ಬೇಡವೆಂದು ಹೇಳಲಿಲ್ಲ. ಅವರು ಮುಗಿಸಿದ ನಂತರ ನೀವು clarification ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬೆಳೆ ನಷ್ಟದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. Calamity Relief Fund ನಲ್ಲಿ ನೀವು Central Government ಗೆ ಕೇಳಿದರೆ CRF ನಲ್ಲಿ ಅವರಿಗೆ provision ಇರುವುದೇ, ಒಂದು ಎಕರೆಯಲ್ಲಿ ಬೆಳೆ ನಷ್ಟವಾದರೆ 250 ರೂಪಾಯಿ ಕೊಡುತ್ತಾರೆ. ಅದನ್ನು ನೀವು ಕೋಟ್ಯಾಂತರ ಹೇಗೆ ಮಾಡುತ್ತೀರಿ? 125 ವರ್ಷಗಳಿಂದ Central Government ನಲ್ಲಿ CRF amend ಆಗಿಲ್ಲ. ಅವರು ಹಣ ಕೊಡುತ್ತಾರೆಂದು ನೀವು ನಂಬಿ ಕುಳಿತರೆ ಆಗುವುದಿಲ್ಲ. ಒಂದು ಎಕರೆಗೆ 250 ರೂಪಾಯಿ ಮಾತ್ರ ಕೊಡುತ್ತಾರೆ. provision ಇರುವುದೇ ಅಷ್ಟು. ನೀವೇನು ಕೊಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್: ಬೆಳೆ ನಷ್ಟದ ಬಗ್ಗೆ ನಾವು ಕೇಂದ್ರ ಸರ್ಕಾರದ ನೆರವು ಕೇಳುತ್ತಿದ್ದೇವೆ. ಅವರು ಕೊಡದಿದ್ದರೆ ರಾಜ್ಯ ಸರ್ಕಾರವೇ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಪ್ರಯೋಜನವಾಗುವುದಿಲ್ಲ. CRF ಅನ್ನು amend ಮಾಡಬೇಕು. ಇಲ್ಲದಿದ್ದರೆ, ಆಂದ್ರದವರು ಒಂದು plan ಮಾಡಿದರು. ಅದೇ ರೀತಿ CRF ನಲ್ಲಿ ಆ ರೀತಿ provision ಇಲ್ಲವೆಂದು ಹೇಳಿ, exgratia ಎಂದು ಕೊಡಿ. CRF norms ಪ್ರಕಾರ ಒಂದು ಎಕರೆಗೆ 250 ರೂಪಾಯಿ ಅಷ್ಟೇ ಬರುವುದು.

ಶ್ರೀ ಜಗದೀಶ್ ಶೆಟ್ಟರ್: We will consider it. ..

ಉಪಾಧ್ಯಕ್ಷರು: ಅಂಜನಮೂರ್ತಿಯವರೇ ಅವರು ಮುಗಿಸಲಿ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಅವರು ಉತ್ತರ ಮುಗಿಸಲಿ. ಸಮಯ ಆಗುತ್ತಾ ಬಂತು. ಬರೀ ಪ್ರಶ್ನೆ ಕೇಳುತ್ತಾ ಕುಳಿತರೆ ಹೇಗೆ? ಅವರು ಉತ್ತರ ಹೇಳಿದ ಮೇಲೆ ಪ್ರಶ್ನೆ ಕೇಳಲಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಇದೇನಿದು, ಮಧ್ಯೆ ಮಧ್ಯೆ ಈ ತರಹ ಪ್ರಶ್ನೆ ಕೇಳಿದರೆ ಅರ್ಥವೇ ಇಲ್ಲ. Continuity ಇರುವುದಿಲ್ಲ. ಮಂತ್ರಿಗಳು ಒಂದು ಸಾರಿ ಉತ್ತರ ಕೊಡಲಿ. ಮೂರು ದಿನ ಆ ಕಡೆಯವರು ಮಾತನಾಡಿದ್ದಾರೆ. ನಾವೆಲ್ಲಾ ಇಲ್ಲಿ ಕುಳಿತು ಕೇಳಿದ್ದೇವೆ. ನಾವೂ ಕೂಡ clarification ಕೇಳುವುದು ಇದೆ. ಅವರ ಉತ್ತರ ಮುಗಿಯಲಿ.

ಉಪಾಧ್ಯಕ್ಷರು: ಜಗದೀಶ್ ಶೆಟ್ಟರ್‌ರವರೇ ಒಂದು ನಿಮಿಷ. ರೆಡ್ಡಿಯವರೇ, ನೀವು ಸ್ವಲ್ಪ ತಾಳ್ಮೆಯಿಂದ ಇದ್ದರೆ ಎಲ್ಲ ಸರಿ ಹೋಗುತ್ತದೆ. ಸಮಸ್ಯೆ create ಮಾಡುವವರೇ ನೀವು. ಅಂಜನಮೂರ್ತಿಯವರೇ ಅವರು ಉತ್ತರ ಏನು ಹೇಳುತ್ತಾರೆಂದು ಕೇಳಿ ಆ ನಂತರ ನೀವು ಸ್ಪಷ್ಟೀಕರಣ ಕೇಳಿ. ಅವಕಾಶಗಳಿವೆ. ಏಕೆ ಸುಮ್ಮನೆ ಮಧ್ಯೆ ಮಧ್ಯೆ ಎದ್ದು ನಿಲ್ಲುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿ ಯವರು ಇನ್ನೊಂದು ಹೇಳಿದರು. ಇದರಲ್ಲಿ ದುರುಪಯೋಗವಾಗುತ್ತಿದೆ, ಭ್ರಷ್ಟಾಚಾರವಾಗುತ್ತಿದೆ ಎನ್ನುವಂತಹ ಮಾತನ್ನು ಹೇಳಿದರು. ಕಾಮಗಾರಿಗಳು ಪ್ರಾರಂಭವಾಗಿವೆ. ಎಲ್ಲಿ ಕಾಮಗಾರಿ ಪ್ರಾರಂಭವಾಗಿಲ್ಲ, ಅಥವಾ ಕಾಮಗಾರಿ ಪ್ರಾರಂಭವಾಗಿ ಎಲ್ಲಿ ದುರುಪಯೋಗವಾಗಿದೆ ಎಂಬ ಬಗ್ಗೆ ನಿರ್ದಿಷ್ಟವಾದ ಉದಾಹರಣೆ ಕೊಟ್ಟರೆ ಅವರ ಮೇಲೆ ನಾನು action ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ. ಸಾರಾಸಗಟಾಗಿ ಭ್ರಷ್ಟಾಚಾರ ನಡೆಯುತ್ತಿದೆ, ಕಾಮಗಾರಿಗಳು ಎಲ್ಲಿಯೂ ನಡೆಯುತ್ತಿಲ್ಲ, ದುರುಪಯೋಗವಾಗುತ್ತಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. 100 % ಎಲ್ಲ ಸರಿ ಇದೆ ಎಂದು ನಾನು ಹೇಳುವುದಿಲ್ಲ. ಇವತ್ತಿನ ವ್ಯವಸ್ಥೆಯೇ ಹಾಗಿದೆ. ಹಿಂದಿನ ಸರ್ಕಾರಗಳು ಇದ್ದಾಗ ಸಹಿತ ನಾನು ಅಲ್ಲಿ ಕುಳಿತಿರುವಾಗ ಇದರ ಬಗ್ಗೆ ಹೇಳಿದ್ದೇನೆ. ಇದರಲ್ಲಿ ಕಾಮಗಾರಿಗಳು ಸರಿಯಾಗಿ ನಡೆಯುವುದಿಲ್ಲ ದುರುಪಯೋಗವಾಗಿವೆ, ಅಲ್ಲಿ ಹಣ ಲೂಟಿ ಹೊಡೆದಿದ್ದಾರೆ ಎನ್ನುವಂತಹ ಮಾತನ್ನು ನಾನು ಹೇಳಿದ್ದೇನೆ. specific ಆಗಿ ಇದ್ದರೆ ಹೇಳಿ. ಏಕೆಂದರೆ ಶಾಸಕರ ಅಧ್ಯಕ್ಷತೆಯಲ್ಲಿ task force committee ಇರುವಂಥದ್ದು. ಅವರು action plan ಏನು ಮಂಜೂರು ಮಾಡುತ್ತಾರೆ, ಅಲ್ಲಿ

ಕಾಮಗಾರಿ ಆಗಿದೆಯೋ ಇಲ್ಲವೆನ್ನುವ report ನಮಗೆ ಕೊಟ್ಟರೆ ಅವರ ಮೇಲೆ action ತೆಗೆದುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಮಾನ್ಯ ಅಂಜನಮೂರ್ತಿಯವರು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆನ್ನುವಂತಹ ಮಾತನ್ನು ಹೇಳಿದರು. ಚಾಮರಾಜನಗರ ಜಿಲ್ಲಾಧಿಕಾರಿಗಳು ಇನ್ನು action plan ಗೆ approval ಕೊಟ್ಟಿಲ್ಲ ಎನ್ನುವಂತಹ ಮಾತನ್ನು ಹೇಳಿದರು. ಇಂತಹ ಉದಾಹರಣೆಗಳು ಬಂದಾಗ ಯಾರು ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಾರೆ, ಈ ಬರಗಾಲ ಕಾಮಗಾರಿಗಳನ್ನು ನಡೆಸಲಿಕ್ಕೆ ಯಾರು ಹಿಂದೇಟು ಹಾಕುತ್ತಾರೆ, ಶಾಸಕರು ಮಾಡಿದ action planಗೆ ತಕ್ಷಣವೇ ಮಂಜೂರಾತಿ ಕೊಡದೇ ಇರುವುದು, ಅದನ್ನು neglect ಮಾಡುವಂಥದ್ದು, ಯಾರಾದರೂ ಅಧಿಕಾರಿಗಳು ಈ ರೀತಿ ನಿರ್ಲಕ್ಷ್ಯ ಮಾಡುವಂಥದ್ದು ಮತ್ತು ದುರುಪಯೋಗ ಮಾಡುವಂಥದ್ದು ನಮ್ಮ ಗಮನಕ್ಕೆ ಬಂದರೆ, ಆ ಅಧಿಕಾರಿ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ಹಿರಿಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ, ಇದರ ಬಗ್ಗೆ ಕೇವಲ ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡುವಂಥದ್ದು ಅಲ್ಲ, ಲಾಂಗ್ ರನ್ ಖಾಯಂ ಆಗಿ ಅಸೆಟ್ ಕ್ರಿಯೇಟ್ ಮಾಡುವಂಥದ್ದು, ಮುಂದಾಲೋಚನೆ ಇಟ್ಟುಕೊಂಡು ಕಾಮಗಾರಿಗಳನ್ನು ಮಾಡಬೇಕೆಂದು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ನಾನು ಸ್ವಾಗತವನ್ನು ಮಾಡುತ್ತೇನೆ. ನೀರಾವರಿ ತಜ್ಞರು ಇರಬಹುದು, ಹಿರಿಯರಿರಬಹುದು, experts ಇರಬಹುದು, ಹಿರಿಯ ಅಧಿಕಾರಿಗಳಿರಬಹುದು, ಅವರ ಜೊತೆಯಲ್ಲಿ ಚಿಂತನೆ ಮಾಡಿ ಖಾಯಂ ಆದ ಅಸೆಟ್ ಕ್ರಿಯೇಟ್ ಮಾಡುವಂಥದ್ದು ಮತ್ತು ಸರಿಯಾದ ರೀತಿಯಲ್ಲಿ ಬರಗಾಲ ಕಾಮಗಾರಿ ನಡೆಯುವಂಥದ್ದು, ಕಾಮಗಾರಿಗಳು ತಕ್ಷಣವೇ war–footingನಲ್ಲಿ ನಡೆಯುವಂತಹ ರೀತಿಯಲ್ಲಿ ಎಲ್ಲ ರೀತಿಯ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಮತ್ತು ಎಲ್ಲಿ ಲೋಪದೋಷಗಳಾಗಿವೆ ಅದನ್ನು ಸರಿ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ನಾನು ಹೇಳುತ್ತಿದ್ದೇನೆ. ಹೀಗಾಗಿ ಪ್ರತಿಪಕ್ಷದವರು ಏನು ಆಪಾದನೆಗಳನ್ನು ಮಾಡಿದರು, ಬರಗಾಲ ಕಾಮಗಾರಿಗಳಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸಿದೆ,ಕ್ರಿಯಾಶೀಲವಾಗಿಲ್ಲ, ಫೇಲಾಗಿದೆ ಎನ್ನುವಂತಹ ಮಾತನ್ನು ಏನು ಹೇಳಿದ್ದಾರೆ, ಇದು ಸತ್ಯಕ್ಕೆ ದೂರವಾದ ಸಂಗತಿಗಳು. ಸರ್ಕಾರ ಎಲ್ಲಾ

ಉಪಕ್ರಮಗಳನ್ನು ತೆಗೆದುಕೊಂಡಿದೆ. ಬರಗಾಲ ಕಾಮಗಾರಿಗಳು ನಡೆಯುತ್ತವೆ. ಲೋಪದೋಷಗಳನ್ನು ಸರಿ ಮಾಡುವ ಕ್ರಮವನ್ನು ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಮಾನ್ಯ ಉಪಾಧ್ಯಕ್ಷರೆ, Task Force ನಲ್ಲಿ ನಮ್ಮ ಕ್ಷೇತ್ರಕ್ಕೆ ಸೀಮಿತವಾಗಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾವು resolution ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇವತ್ತಿನವರೆಗೆ ಒಂದು ರೂಪಾಯಿ ಬಿಡುಗಡೆ ಆಗಿಲ್ಲ. ಬೆಳಗಾಂನಲ್ಲಿ ಅಧಿವೇಶನ ನಡೆಯುವಾಗ ಹಣವನ್ನು ರಿಲೀಸ್ ಮಾಡಿದರು, ಈಗೇನು ಹೇಳುತ್ತಿದ್ದಾರೆಂದರೆ ಈಗ ಅಧಿವೇಶನ ನಡೆಯುತ್ತಿದೆ, ಈಗ ದುಡ್ಡು ರಿಲೀಸ್ ಮಾಡಿದ್ದೇವೆಂದು ಹೇಳುತ್ತಾರೆ. ಟಾಸ್ಕ್ ಫೋರ್ಸ್‌ನಲ್ಲಿ ಕುಡಿಯುವ ನೀರಿಗೋಸ್ಕರ ತಾವೇನು ಹಣವನ್ನು ಕೊಟ್ಟಿದ್ದೀರಿ ಅದರಲ್ಲಿ ಇವೊತ್ತಿಗೂ ಕೂಡ ಒಂದು ಕೆಲಸವೂ ಕೂಡ ನನ್ನ ಮತಕ್ಷೇತ್ರದಲ್ಲಿ ಪ್ರಾರಂಭವಾಗಿಲ್ಲ. ಕೆಲಸವಾಗಿದೆಯೆಂದು ತಾವು ಹೇಳಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಈ ರೀತಿಯಗಿ ಕೆಲಸವಾಗಿದೆಯೆಂದು ಸುಮ್ಮನೇ ಹೇಳಿಕೆ ಕೊಡುವುದಲ್ಲ. ಅವರು ಕೇವಲ ಲಿಖಿತವಾಗಿ ಹೇಳಿಕೆ ಕೊಟ್ಟು ಮಾಹಿತಿ ಕೊಡುವುದಲ್ಲ. ನೀವು ಹೌಸ್‌ನ್ನು ಮಿಸ್‌ಲೀಡ್ ಮಾಡುತ್ತಿದ್ದೀರಿ. ಕುಡಿಯುವ ನೀರಿಗಾಗಿ ಸರಿಯಾಗಿ ಹಣ ರಿಲೀಸ್ ಆಗಿಲ್ಲ. ಬೆಳಗಾಂನಲ್ಲಿ ಅಧಿವೇಶನ ನಡೆಯುವಾಗ ಹಣ ರಿಲೀಸ್ ಅಯಿತು. ಈಗ ಅಧಿವೇಶನ ನಡೆಯುತ್ತಿದೆ, ಈಗೇನಪ್ಪಾ, ಎಂದರೆ ಈಗ ದುಡ್ಡನ್ನು ರಿಲೀಸ್ ಮಾಡಿ ನಮಗೆ ಪಟ್ಟಿಯನ್ನು ಕಳುಹಿಸಿ ಎಂದು ಹೇಳುತ್ತೀರಿ. ಇದು ಯಾವ ರೀತಿಯಾದಂಥ ಸರ್ಕಾರ. ಈ ಆರು ತಿಂಗಳು ಗ್ಯಾಪ್‌ನಲ್ಲಿ ನೀವೇನು ಮಾಡಿದಿರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನಾವು ಹಣವನ್ನು ರಿಲೀಸ್ ಮಾಡಿದ್ದೇವೆ, ಕಾಮಗಾರಿಗಳನ್ನು ಮಾಡದೇ ಇರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ನಾನು ಬಹಳ ಸ್ಪೆಸಿಫಿಕ್ಕಾಗಿ ನಿಮಗೆ ಹೇಳಿದ್ದೇನೆ, 148 ಲಕ್ಷಕ್ಕೆ ನಾವು action plan ಕಳುಹಿಸಿದರೆ ಅವರು ಕೇವಲ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು ಉಳಿದಂಥ ಹಣ ಏನಾಗಿದೆ ಎಂದು ಗೊತ್ತಿಲ್ಲದೇ ಮೊನ್ನೆ ಒಂದು ಲೆಟರ್‌ನ್ನು ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ ವಾಟರ್‌ಶೆಡ್ ಏರಿಯಾಗೆ

ಸಂಬಂಧಪಟ್ಟಂತೆ ನೀರಾವರಿಗಾಗಿ 10 ಲಕ್ಷ ರೂಪಾಯಿಗಳ action plan ಮಾಡಿ ಎಂದು ನಮಗೆ ತಿಳಿಸಿದ್ದಾರೆ. ಹಾಗಾದರೆ ನಾವು 148 ಲಕ್ಷ ರೂಪಾಯಿಗಳ action plan ಮಾಡಿ ಕಳುಹಿಸಿದ್ದು ಏನಾಯಿತು? ಆ ಹಣ ಬರುತ್ತದೋ ಅಥವಾ ಇಲ್ಲವೋ? ಅದು ಬರುವುದಿಲ್ಲವೆಂದರೆ, ಮತ್ತೆ ಪ್ರತ್ಯೇಕವಾಗಿ 10 ಲಕ್ಷ ರೂಪಾಯಿಗಳಿಗೆ action plan ಅನ್ನು ವಾಟರ್‌ಶೆಡ್ ಏರಿಯಾದಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ಮಾತ್ರ ನೀವು ಕಳುಹಿಸಿಕೊಡಿ ಎಂದು ನಮಗೆ ಏಕೆ ಕಳುಹಿಸಿದಿರಿ? ಈಗ ಮತ್ತೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದಿರಿ. 148 ಲಕ್ಷ ರೂಪಾಯಿಗಳದ್ದನ್ನು ಮೊದಲು ಕ್ಲಿಯರ್ ಮಾಡುವುದಕ್ಕೆ ಹೇಳಿ. ಆಮೇಲೆ 10 ಲಕ್ಷವೋ, 50 ಲಕ್ಷವೋ, ನೀವು ಏನು ಕೊಡುತ್ತೀರೋ ಅದಕ್ಕಾಗಿ action plan ಮುಂದೆ ಕೊಡೋಣ. 148 ಲಕ್ಷ ರೂಪಾಯಿಗಳನ್ನು ಪ್ರತಿ ತಾಲ್ಲೂಕಿಗೆ ಏನು ಕಳುಹಿಸಿದ್ದೇವೆಂದು ನೀವು ಹೇಳಿದ್ದೀರಿ ಅದಕ್ಕಾಗಿ action plan ಅನ್ನು ಯಾರು ಯಾರು ಕಳುಹಿಸಿದ್ದಾರೆ, ಆ action plan ಪ್ರಕಾರ ಪ್ರತಿ ತಾಲ್ಲೂಕಿಗೆ ಮೊದಲು ಹಣವನ್ನು ಕೊಡುವುದಕ್ಕೆ ನೀವು ಹೇಳಿ. ಆಮೇಲೆ ಹೊಸ action plan ಕೇಳಲಿ. ಹಳೆಯ 148 ಲಕ್ಷ ರೂಪಾಯಿಗಳ action plan ಅನ್ನು ಅಲ್ಲಿಯೇ ಇಟ್ಟುಕೊಂಡು ಮತ್ತೆ 10 ಲಕ್ಷ ರೂಪಾಯಿಗಳಿಗೆ action plan ಮಾಡಿ ಎಂದು ಹೇಳಿದರೆ, ಈಗಾಗಲೇ 148 ಲಕ್ಷ ರೂಪಾಯಿಗಳಿಗೆ ನಾವು action plan ಮಾಡಿದ್ದು ಉಳಿದಂತೆಯೋ ಅಥವಾ ಹೋದಂತೆಯೋ? ಇದಕ್ಕೆ ಉತ್ತರವನ್ನು ನಿಮ್ಮ ಅಧಿಕಾರಿಗಳು ಸ್ಪೆಸಿಫಿಕಲಿ ಏನು ಉತ್ತರ ಹೇಳುತ್ತಾರೆ ಎಂಬುದನ್ನು ನೀವು ಅವರಿಗೆ ಕೇಳಿ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ ನೀವು ರಾಜ್ಯದಲ್ಲಿ ಫಾಡರ್ ಬ್ಯಾಂಕ್ ಮಾಡಿದ್ದೀವಿ ಎಂದು ಹೇಳಿದಿರಿ.ಎಷ್ಟು ಫಾಡರ್ ಬ್ಯಾಂಕ್‌ಗಳನ್ನು ಮಾಡಿದ್ದೀರಿ? ಎಷ್ಟು ಹುಲ್ಲನ್ನು ಅಲ್ಲಿ ನೀವು ಶೇಖರಣೆ ಮಾಡಿದ್ದೀರಿ? ಅದನ್ನು ಹಂಚತಕ್ಕಂಥ ವಿಧಾನವೇನು? ಇನ್ನು ನೀವು ಕೆಲವು ತಾಲ್ಲೂಕುಗಳಿಗೆ ಗೋಶಾಲೆಗಳ ಅವಶ್ಯಕತೆಯಿದೆಯೆಂದು ಹೇಳಿದಿರಿ. ಈ ಗೋಶಾಲೆಗಳು ಎಲ್ಲೆಲ್ಲಿ ಪ್ರಾರಂಭವಾಗಿವೆ? ಒಂದೊಂದು ಗೋಶಾಲೆಗಳಲ್ಲೂ ನೀವು ಎಷ್ಟು ದನಕರುಗಳನ್ನು ಕಟ್ಟಿಹಾಕಿಸಿದ್ದೀರಿ? ಅದಕ್ಕೆ ಹುಲ್ಲು, ನೀರು ಹಾಗೂ ವೈದ್ಯಕೀಯ ವ್ಯವಸ್ಥೆಯನ್ನು ಹೇಗೆ ಮಾಡಿದ್ದೀರಿ? ಏಕೆಂದರೆ ನೂರಾರು ಹಸುಗಳು ಒಂದು ಕಡೆ ಸೇರಿದಾಗ there will be all possibilities of break down of diseases.

ಅದಕ್ಕಾಗಿ ನೀವೇನು ಪ್ರಿಕಾಶನರಿ ಮೆಶರ್‌ನ್ನು ತೆಗೆದುಕೊಂಡಿದ್ದೀರಿ? ಇನ್ನು ನಾಲ್ಕನೆಯದಾಗಿ ನೀವು ಜೂನ್ 30 ಕ್ಕೆ ಬರಗಾಲ ಬಂದಿದೆಯೆಂದು ನೀವು ಡಿಕ್ಲೇರ್ ಮಾಡಿದಿರಿ. ಈಗ ನಾವು ಫೆಬ್ರವರಿಯಲ್ಲಿದ್ದೇವೆ. ಜೂನ್‌ನಿಂದ ಫೆಬ್ರವರಿಯವರೆಗೆ ಬರಗಾಲವನ್ನು ಎದುರಿಸುವುದಕ್ಕೆ ನೀವು ಬಿಡುಗಡೆ ಮಾಡಿದ ಹಣವೆಷ್ಟು ಮತ್ತು ಖರ್ಚಾಗಿರತಕ್ಕಂಥ ಹಣವೆಷ್ಟು? ನೀವೇ ಒಂದು ಕಡೆ ಹೇಳಿದ್ದೀರಿ, 4 ಸಾವಿರ ಚಿಲ್ಲರೆ ಕಾಮಗಾರಿಗಳನ್ನು ನಾವು ಅಪ್ರೂವಲ್ ಮಾಡಿದ್ದೇವೆ, ಅದರಲ್ಲಿ 500 ಕಾಮಗಾರಿಗಳು ಮಾತ್ರ ಪ್ರೋಗ್ರೆಸ್‌ನಲ್ಲಿವೆಯೆಂದು ಹೇಳಿದಿರಿ, ಅವೂ ಕೂಡ ಕಂಪ್ಲೀಟ್ ಆಗಿಲ್ಲ. Out of 4000 & add only 500 is on going ಎಂದು ನೀವು ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದಿರಿ. ಹೀಗಾದರೆ ಯಾವ ರೀತಿಯಲ್ಲಿ ನೀವು ಕೆಲಸ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಆಲಂಗೂರು ಶ್ರೀನಿವಾಸ: ಮಾನ್ಯ ಅಧ್ಯಕ್ಷರೆ, ಅವರು ಕೋಲಾರ ಜಿಲ್ಲೆ ಬಗ್ಗೆ ಹೇಳಿದರು. ಕೋಲಾರ ಜಿಲ್ಲೆಯಲ್ಲಿ. . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:ಕೋಲಾರ ಜಿಲ್ಲೆಯೊಂದೇ ಅಲ್ಲ, ನಾನು ಜನರಲ್ ಆಗಿ ಎಲ್ಲಾ ತಾಲ್ಲೂಕಿಗೂ ಸಂಬಂಧ ಪಟ್ಟಂತೆ ಹೇಳಿದ್ದು.

ಶ್ರೀ ಆಲಂಗೂರು ಶ್ರೀನಿವಾಸ್: 148 ಲಕ್ಷಕ್ಕೆ ನೀವು ಯೋಜನೆಯನ್ನು ತಯಾರು ಮಾಡಲು ಅನುಮತಿಯನ್ನು ಕೊಟ್ಟಿದ್ದರೂ, ಕೇವಲ 70 ಲಕ್ಷ ರೂಪಾಯಿಗಳು ಬಿಡುಗಡೆಯಾಗಿರುವ ಬಗ್ಗೆ ನೀವು ಹೇಳಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಹೇಳಿದ್ದನ್ನು ನೀವು ಸರಿಯಾಗಿ ಕೇಳಿಸಿಕೊಂಡಿಲ್ಲ. ನಾವು 148 ಲಕ್ಷ ರೂಪಾಯಿಗಳ action plan ಅನ್ನು ಕಳುಹಿಸಿದ್ದೆವು. ಅಪ್ರೂವಲ್ ಮಾಡಿರುವುದು 74 ಲಕ್ಷಕ್ಕೆ, ಅದರಲ್ಲೂ ಹಣ ಕೊಟ್ಟಿರುವುದು 35 ಲಕ್ಷ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಕಂದಾಯ ಮಂತ್ರಿಗಳೆ, ಈಗ ನೀವು ಹೆಚ್ಚುವರಿ ಹಣವನ್ನು ಫ್ಲಡ್‌ಗಾಗಿ ಬಿಡುಗಡೆ ಮಾಡುತ್ತೇವೆಂದು ಹೇಳಿದಿರಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಟಾಸ್ಕ್‌ಫೋರ್ಸ್‌ನಲ್ಲಿ ನಾವೇನು ಈಗಾಗಲೇ ಕೆಲಸವನ್ನು ಮಾಡಿಸಿದ್ದೇವೆ, ಮಾನ್ಯ ಸಚಿವರ ಹತ್ತಿರ ನಾನು ನಿನ್ನೆಯೇ ಹೇಳಿದೆ, ತುಮಕೂರು ಜಿಲ್ಲೆಗೆ ಮಾತ್ರ ಜಿಲ್ಲಾಪಂಚಾಯತಿ ಕಳುಹಿಸಿದ ಅನುದಾನವನ್ನು ಪೇಮೆಂಟ್ ಮಾಡಿ ಎಂದು ಹೇಳಿದ್ದೀರಿ. ಅದೇ ರೀತಿಯಲ್ಲಿ ರಾಜ್ಯದ ಎಲ್ಲಾ

ಭಾಗಕ್ಕೂ ಒಂದು ಆದೇಶವನ್ನು ಕಳುಹಿಸಿ. ಜಿಲ್ಲಾ ಪಂಚಾಯತಿ ಕ್ರಿಯಾ ಯೋಜನೆಗೆ ನೀವು ಕೊಡಿ. ಆದರೆ ಟಾಸ್ಕ್‌ಫೋರ್ಸ್‌ದನ್ನು ನೀವು ಯಾವಾಗ ನಮಗೆ ಕೊಡುತ್ತೀರಿ? ಅದನ್ನು ಕೊಡುತ್ತಿಲ್ಲ. ಒಂದು ಸ್ಪೆಸಿಫಿಕ್ ಆದೇಶವನ್ನು ನೀವು ಜಿಲ್ಲಾ ಪಂಚಾಯತಿಗೆ ಕಳುಹಿಸಬೇಕು. ಅದರ ಜೊತೆಗೆ ಇದೆಲ್ಲಾ ಸಮಸ್ಯೆ ಪರಿಹಾರವಾಗಬೇಕೆಂದರೆ, ವಿದ್ಯುಚ್ಛಕ್ತಿ ಸಮಸ್ಯೆಯನ್ನು ನಿವಾರಿಸಬೇಕು. ಮಾನ್ಯ ಸಚಿವರು ಪವರ್ ಬಗ್ಗೆ ಉತ್ತರವನ್ನೇ ಹೇಳಲಿಲ್ಲ, ಇವೊತ್ತು ವಿದ್ಯುಚ್ಛಕ್ತಿಯ ಸಮಸ್ಯೆ ಇದೆ, ಹೀಗಾದರೆ ನೀವು ಕುಡಿಯುವ ನೀರನ್ನು ಹೇಗೆ ಕೊಡುತ್ತೀರಿ? ರೈತರ ಪಂಪ್‌ಸೆಟ್‌ಗೆ ಪವರ್ ಬೇಕು. ಈಗ ಪವರ್ ಶೆಡೌನ್ ಸ್ಟಾರ್ಟ್ ಅಯಿತು, ಅದಕ್ಕೆ ಏನು ಪರಿಹಾರವನ್ನು ಕಂಡುಹಿಡಿದಿದ್ದೀರಿ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಪವರ್ ಬಗ್ಗೆ ಉತ್ತರವನ್ನು ಹೇಳುವಷ್ಟು ಪವರ್ ಮಾನ್ಯ ಜಗದೀಶ್‌ಶೆಟ್ಟರ್‌ರವರಿಗೆ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾವು ಅನೇಕ ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದೇವೆ, ಅವನ್ನೆಲ್ಲವನ್ನೂ ಕೂಡ ಅವರು ಬರೆದುಕೊಂಡರೋ ಅಥವಾ ಇಲ್ಲವೋ ಗೊತ್ತಿಲ್ಲ, ಉತ್ತರ ಕೊಡುವಾಗ ಅವುಗಳ ಬಗ್ಗೆ ಅವರು ಹೇಳಲಿಲ್ಲ. ಅವರಿಂದ ಅವುಗಳ ಬಗ್ಗೆ ಉತ್ತರ ಬರಲಿಲ್ಲ. ಏಕೆಂದರೆ .ಅವರ ಉತ್ತರದ ಪ್ರಕಾರವೇ, ಈ ಸರ್ಕಾರ ಬರಗಾಲವನ್ನು ನಿಭಾಯಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಎಲ್ಲರಿಗೂ ಗೊತ್ತಾಗುತ್ತದೆ. ಮಾನ್ಯ ಶ್ರೀರಾಮರೆಡ್ಡಿಯವರು ಒಂದು ಉದಾಹರಣೆಯನ್ನು ಹೇಳಿದರು. ದಾವಣಗೆರೆಯಲ್ಲಿ 2900 ಕಾಮಗಾರಿಗಳ action plan ಅನ್ನು ಮಂಜೂರು ಮಾಡಲಾಗಿದೆ, ಆದರೆ ಇಲ್ಲಿಯವರೆವಿಗೆ 500 ಕೆಲಸಗಳು ಪ್ರಾರಂಭವಾಗಿವೆಯೆಂದು ಹೇಳಿದಿರಿ. ಐದುನೂರು ಕೆಲಸವೆಂದರೆ ಎಷ್ಟು ಪರ್ಸೆಂಟ್ ಅದು? ಅದೂ ಕೂಡ ಪ್ರಾರಂಭವಾಗಿರುವುದು. 1/6th of the total works approved ಅಂದಮೇಲೆ ಬರಗಾಲ ಇಷ್ಟೊಂದು ಭೀಕರವಾಗಿರುವಾಗ ಈಗಾಗಲೇ ಐದಾರು ತಿಂಗಳುಗಳಾಗಿದ್ದರೂ ಕೂಡ ಇನ್ನೂ ಐದುನೂರು

ಕೆಲಸಗಳು ಮಾತ್ರ ಪ್ರಾರಂಭವಾಗಿವೆ. ಇನ್ನೂ 2400 ಕೆಲಸಗಳು ಹಾಗೆಯೇ ಇವೆಯೆಂದರೆ ಇವರು ಬರಗಾಲವನ್ನು ಎದುರಿಸುತ್ತಿದ್ದಾರೆಯೇ?

ಶ್ರೀ ಜಗದೀಶ್ ಶೆಟ್ಟರ್: ನೀವು ಯಾವುದೋ ಒಂದೇ ಒಂದು ಜಿಲ್ಲೆಯದನ್ನು ಉದಾಹರಣೆಯಾಗಿ ತೆಗೆದುಕೊಂಡು ಹೇಳುವುದು ಸರಿಯಲ್ಲ. 11,199 ಒಟ್ಟು ವರ್ಕ್‌ಗಳು ಇರುವುದು, ಅದರಲ್ಲಿ 7050 ವರ್ಕ್‌ಗಳು ಪ್ರೋಗ್ರೆಸ್‌ನಲ್ಲಿವೆ. ಅಂದರೆ 70 ಪರ್ಸೆಂಟ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಯಿತು ಶೆಟ್ಟರೆ, 11,600 ಕೆಲಸಗಳು ನಿಮ್ಮ ಲೆಕ್ಕದ ಪ್ರಕಾರವೇ ಪ್ರಾರಂಭವಾಗಿದೆಯೆಂದು ತಿಳಿದುಕೊಳ್ಳೋಣ. 128 ತಾಲ್ಲೂಕುಗಳಲ್ಲಿ, ಎಷ್ಟು ತಾಲ್ಲೂಕುಗಳಿಗೆ ಎಷ್ಟು ಲಕ್ಷಕ್ಕೆ ನೀವು ಅನುಮೋದನೆಯನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಈಗಾಗಲೇ 6 ಜಿಲ್ಲೆಗಳಲ್ಲಿ ಕೆಲಸಗಳು ಚಾಲೂ ಆಗಿವೆ.

ಶ್ರೀ ಸಿದ್ದರಾಮಯ್ಯ: ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಬರಗಾಲವಾಗಿದೆ. ನಾನು ನಿಮಗೆ ಏನು ಹೇಳಿದೆನೆಂದರೆ, ನಿಮಗೆ ಎಷ್ಟು ದುಡ್ಡು ಬಂದಿದೆ ಹಾಗೂ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದರ ಬಗ್ಗೆ ನೀವು ಲೆಕ್ಕವನ್ನು ಕೊಟ್ಟಿದ್ದೀರಿ. ಕೇವಲ ಲೆಕ್ಕವನ್ನು ಕೇಳುವುದಕ್ಕೋಸ್ಕರ ಇಷ್ಟು ಗಂಭೀರವಾಗಿ ನಾವು ಚರ್ಚೆಯನ್ನು ಮಾಡಿದ್ದೇವೆಯೆ? ಇಷ್ಟು ದುಡ್ಡು ಬಂತು, ಇಷ್ಟು ಬಿಡುಗಡೆ ಮಾಡಿದ್ದೇವೆ, ಡಿ.ಸಿ. ಗೆ ಬಿಡುಗಡೆ ಮಾಡಿಬಿಟ್ಟಿದ್ದೇವೆ, 136 ಕೋಟಿ ಅವರ ಹತ್ತಿರವಿದೆ ಎಂದಿರಿ. ನಮಗೆ ಬೇಕಾಗಿರುವುದು, ನೀವೇ ಒಪ್ಪಿಕೊಂಡಿರುವ ಪ್ರಕಾರ ಗೋಶಾಲೆಗಳನ್ನು ತೆರೆಯಬೇಕು, ಎಲ್ಲಿ ತೆಗೆದಿದ್ದೀರಿ ಹೇಳಿ. ಎಲ್ಲೆಲ್ಲಿ ಗಂಜಿ ಕೇಂದ್ರಗಳನ್ನು ತೆಗೆದಿದ್ದೀರಿ ಹೇಳಿ. ಗಂಜಿ ಕೇಂದ್ರಗಳನ್ನು ತೆಗೆದಿದ್ದರೆ ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಮೇವಿಗಾಗಿ ದುಡ್ಡು ಕೊಟ್ಟಿದ್ದೀವಿ ಎಂದು ಹೇಳಿದ್ದೀರಿ.

ಶ್ರೀ ಆಲಂಗೂರು ಶ್ರೀನಿವಾಸ್: ಗಂಜಿ ಕೇಂದ್ರಗಳನ್ನು ತೆರೆಯಬೇಕೆ?

ಶ್ರೀ ಸಿದ್ದರಾಮಯ್ಯ: ಬರಗಾಲದಲ್ಲಿ ಗಂಜಿ ಕೇಂದ್ರಗಳನ್ನು ತೆರೆಯಬೇಕಾಗುತ್ತದೆ. ಎಲ್ಲರಿಗೂ ಕೆಲಸವನ್ನು ಕೊಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಯಿತು ನೀವು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ನೀವು ಕುಳಿತುಕೊಳ್ಳಿ ಶ್ರೀನಿವಾಸ್‌ರವರೆ, ನಿಮ್ಮ ಜಿಲ್ಲೆಯಲ್ಲಿಯೇ ಹೆಚ್ಚು ಬರಗಾಲವಿರುವುದು. ನೀವೇ ಈ ರೀತಿ ಮಧ್ಯೆ ಹೇಳುವುದಕ್ಕೆ ನಿಂತರೆ ಬರಗಾಲವೇ ಇಲ್ಲವೆಂದಂತಾಗುತ್ತದೆ, district incharge minister ರವರೇ ಈ ರೀತಿ ಹೇಳುತ್ತಿದ್ದಾರೆ, ಕೋಲಾರದಲ್ಲಿ ಬರಗಾಲವಿಲ್ಲವೆಂದರೆ ನಿಮ್ಮ ಜನ ನಿಮಗೆ ಬೈಯುತ್ತಾರೆ. ಆದುದರಿಂದ ಇಷ್ಟು ಭೀಕರ ಬರಗಾಲ ಇದೆ. 178 ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ಒಪ್ಪಿಕೊಳ್ಳುತ್ತಾರೆ. ಇಲ್ಲಿಯವರೆಗೆ ಎಷ್ಟು ಜನ ಕೂಲಿಗಾಗಿ ಬೇಕಾಗಿರುವುದು, ಅದರಲ್ಲಿ ಎಷ್ಟು ಜನರನ್ನು ಗುರುತು ಹಚ್ಚಿದಿರಿ? ಎಷ್ಟು demand ಇತ್ತು? ಎಷ್ಟು man days ಇಲ್ಲಿಯವರೆಗೆ create ಮಾಡಿದ್ದಾರೆ? ಇವೆಲ್ಲವನ್ನು ಹೇಳಬೇಕೋ ಬೇಡವೋ? ಈಗ ದಾರವಾಢ ಜಿಲ್ಲೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಇಷ್ಟು ಜನಕ್ಕೆ ಕೆಲಸ ಬೇಕಾಗಿತ್ತು, ಇಷ್ಟು ಗ್ರಾಮಗಳಲ್ಲಿ ಕುಡಿಯುವ ನೀರು ಇರಲಿಲ್ಲ, ಇಷ್ಟು ಕಡೆ bore well ಗಳು ಹಾಕಿದ್ದೇವೆ, ಇಷ್ಟು ಕಡೆ pipeline ಗಳು ಹಾಕಿದ್ದೇವೆ, ಇಷ್ಟು ಜಾನುವಾರುಗಳಿಗೆ ಮೇವು ಕೊಟ್ಟಿದ್ದೇವೆ. ಎನ್ನುವ ಬಗ್ಗೆ ಈ ವಿವರಗಳನ್ನು ಹೇಳಬೇಕಾಗಿತ್ತು. ಪಕ್ಕದ ಜಿಲ್ಲೆಯಾದ ಗದಗ್‌ನಲ್ಲಿ ಬಹಳ ಭೀಕರ ಬರಗಾಲ ಇದೆ. ಆಮೇಲೆ BPL card ಕೊಟ್ಟಿಲ್ಲ. ಬಹಳ ಜನರಿಗೆ ತೊಂದರೆಯಾಗಿದೆ. ಕುಡಿಯುವ ನೀರಿಗೆ ದುಡ್ಡಿದ್ದರೂ ಕೂಡ ನೀವು ಖರ್ಚು ಮಾಡಿಲ್ಲ. 90 ಹಳ್ಳಿಗಳನ್ನು shift ಮಾಡಬೇಕೆಂದು ಹೇಳಿದ್ದೀರಿ, ಆದರೆ ಇವತ್ತಿನವರೆಗೂ ಒಂದು ರೂಪಾಯಿ ಖರ್ಚು ಮಾಡಿಲ್ಲ. ಇವೆಲ್ಲಕ್ಕೂ ಉತ್ತರವೇ ಇಲ್ಲ. ಆದುದರಿಂದ ಇವರ ಉತ್ತರದಿಂದ ನಮಗೆ total ಆಗಿ ಸಮಾಧಾನವಾಗಿಲ್ಲ. ಈ ಸರ್ಕಾರ ಬರಗಾಲ ನಿಭಾಯಿಸುವುದರಲ್ಲಿ ಸಂಪೂರ್ಣವಾಗಿ ಸೋತಿದೆ, ವಿಫಲವಾಗಿದೆ, This government has miserably failed. ಕೇವಲ ಕುರ್ಚಿ ಉಳಿಸಿಕೊಳ್ಳಲು ಎರಡು ಪಕ್ಷಗಳು ಅಧಿಕಾರಕ್ಕೋಸ್ಕರ ಇದ್ದಾರೆ ಹೊರತು ಜನರ ಬಗ್ಗೆ ಯಾವುದೇ ಕಾಳಜಿ ಇಲ್ಲ. ಹಳ್ಳಿಗಾಡಿನ ಜನರ ಬಗ್ಗೆ ಕಾಳಜಿ ಇಲ್ಲ. ಬರಗಾಲದ ಬಗ್ಗೆ ಕಾಳಜಿ ಇಲ್ಲ. ಸರ್ಕಾರದ ನಿಷ್ಕ್ರಿಯತೆಯನ್ನು ಹಾಗೂ ರೈತರ ಬಗ್ಗೆ ಕಾಳಜಿ ಇಲ್ಲದೇ ಇರುವಂತಹ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರಾದ ಮಾನ್ಯ ಸಿದ್ದರಾಮಯ್ಯನವರು ಸೇರಿದಂತೆ ಸಭೆಯಲ್ಲಿ ಹಾಜರಿದ್ದಂತಹ ಎಲ್ಲಾ ಕಾಂಗ್ರೆಸ್ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ನಾವು ಇಲ್ಲಿ ಇನ್ನು ಇದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಸಭೆಯಲ್ಲಿ ಉತ್ತರ ಕೇಳುವುದಕ್ಕೆ ಅವರು ತಯಾರಿಲ್ಲ. ಎಲ್ಲಾ ರೀತಿಯಲ್ಲಿ ಸಮಾಧಾನಕರವಾಗಿ ಉತ್ತರ ಹೇಳಿದರೂ ಕೂಡ ಅವರಿಗೆ ಉತ್ತರ ಕೇಳುವಷ್ಟು ವ್ಯವಧಾನ ಹಾಗೂ ಸಮಾಧಾನ ಇಲ್ಲ. ನಿನ್ನೆ ಮಾನ್ಯ ಈಶ್ವರಪ್ಪನವರು ಹೇಳುವಾಗಲೂ ಕೂಡ ಅದೇ ರೀತಿ ಮಾಡಿದರು. ಅವರಿಗೆ ಉತ್ತರ ಕೇಳುವುದಕ್ಕೆ ಸಮಾಧಾನ ಇಲ್ಲ. ಸ್ಪಷ್ಟೀಕರಣ ಕೇಳಿ ಉತ್ತರ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಏನೂ ಕಾಳಜಿ ಅವರಿಗೆ ಇಲ್ಲ. ಸಭಾತ್ಯಾಗ ಮಾಡುವುದರ ಮೂಲಕ ರಾಜಕಾರಣ ಮಾಡುವುದು ಸರಿಯಲ್ಲ. ಬರಗಾಲದಲ್ಲೂ ಸಹ ರಾಜಕಾರಣ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಎರಡು ದಿವಸದಿಂದ ಆದಂತಹ ಚರ್ಚೆಗೆ ಮಾನ್ಯ ಕಂದಾಯ ಸಚಿವರು ಕೊಟ್ಟಂತಹ ಉತ್ತರ ಸಮರ್ಪಕವಾಗಿಲ್ಲ ಮತ್ತು ಹಣಕಾಸಿನ ಖರ್ಚು ಎಷ್ಟಾಗಿದೆ? Mandates ಎಷ್ಟು create ಆಗಿದೆ? ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಸರಿಯಾಗಿ ಕೊಡುವುದರಲ್ಲಿ ಸಂಪೂರ್ಣವಾಗಿ ಅವರು ವಿಫಲರಾಗಿದ್ದಾರೆ. ರಾಜ್ಯದಲ್ಲಿ 8 ತಿಂಗಳಿನಿಂದ ಬರಗಾಲ ಎದುರಿಸುತ್ತಿದ್ದರೆ, ಅವರ ಪ್ರಕಾರ ಒಂದೊಂದು ತಾಲ್ಲೂಕಿಗೆ ಹಣ ಬಿಡುಗಡೆ ಮಾಡಿರತಕ್ಕಂಥಾದ್ದು ಕೇವಲ ಒಂದೂವರೆ ಕೋಟಿ ರೂಪಾಯಿ ಅಷ್ಟೆ. ಅದ್ದರಿಂದ ಈ ಸರ್ಕಾರ ಬರವನ್ನು ಎದುರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಯವರು ಕೂಡ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಕೋಲಾರ ಜಿಲ್ಲೆಗೆ ಕೂಡ ಬಂದು Review Meeting ಮಾಡಿದ್ದೇವೆ. ಸಮರ್ಪಕವಾಗಿ ಅಲ್ಲಿ ಕೆಲಸ ನಡೆದರೂ ಇವರಿಗೆ ಸಮಾಧಾನ ಇಲ್ಲ.

ಉಪಾಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರು ಕೇಳಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ , ನಾನು ಭಾಷಣ ಮಾಡುವುದಕ್ಕೆ ಅವಕಾಶವಾಗಲಿಲ್ಲ. ನಾನು ಆಡಳಿತ ಪಕ್ಷಕ್ಕೆ ಬಂದು ಕುಳಿತುಕೊಂಡು ತಾಪತ್ರಯವಾಯಿತು.

ಉಪಾಧ್ಯಕ್ಷರು: ನಾನು ನಿಮ್ಮನ್ನು ಇಲ್ಲಿಗೆ ಆಗಲೇ ಕರೆಯಬೇಕು ಎಂದು ಇದ್ದೆ. ನಿಮ್ಮ ಅದೃಷ್ಟ ಚೆನ್ನಾಗಿದೆ.

ಶ್ರೀ ಆರಗ ಜ್ಞಾನೇಂದ್ರ: ಆಮೇಲೆ ಬರುತ್ತೇನೆ. ಖಾಯಂ ಆಗಿ ಕರೆದುಬಿಡಿ. ಈಗಾಗಲೇ ಬರ ಮತ್ತು ಪ್ರವಾಹದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಮಲೆನಾಡಿನ ಪ್ರದೇಶ ಬೆಳಗಾಂ ಸೇರಿದಂತೆ ಕೆಲವು ಜಿಲ್ಲೆಗಳು ಅತಿವೃಷ್ಟಿಯಿಂದ ನಲುಗಿವೆ. ಆಗ ಬಂದಂತಹ ಪ್ರವಾಹದಿಂದಾಗಿ ನಮ್ಮ ಕಡೆ ಕೆರೆಕಟ್ಟೆಗಳು, ಹಳ್ಳಗಳ ದಂಡೆಗಳು ಒಡೆದುಹೋಗಿ ಆಗಾಧವಾಗಿ ಹೂಳು ರೈತರ ಜಮೀನಿನ ಮೇಲೆ ಬಿದ್ದಿದೆ. ಅದಕ್ಕೆ ಸಾಕಷ್ಟು ಹಣ ಕಾಸು ಬೇಕು. ನೀವು ಆ ಹಳ್ಳಗಳ ದಂಡೆಗಳನ್ನು ಸರಿ ಮಾಡದೇ ಹೋದರೆ, ಬರುವಂತಹ ಮಳೆಗಾಲದಲ್ಲಿ ನಿಭಾಯಿಸುವುದಕ್ಕೆ ಸಾಧ್ಯವೇ ಇಲ್ಲ. ಒಂದು ಬೆಳೆ ಕಳೆದುಕೊಂಡು ರೈತರು ಹಾಳಾಗಿ ಹೋಗಿದ್ದಾರೆ. ದಯವಿಟ್ಟು ಪ್ರವಾಹ ಪೀಡಿತ ಪ್ರದೇಶವಾಗಿರುವಂತಹ ಮಲೆನಾಡಿಗೂ ಕೂಡ ನ್ಯಾಯವಾದಂತಹ ಹಣವನ್ನು ಒದಗಿಸಬೇಕು. ರಾಜ್ಯ ಸರ್ಕಾರದಲ್ಲಿ ಹಣ ಇಲ್ಲದೇ ಹೋದರೆ ಆ ಪಕ್ಷದವರನ್ನು ನಿಮ್ಮ ಜೊತೆ ಕರೆದುಕೊಳ್ಳಿ, ಅವರು ಸುಮ್ಮನೆ ಗಲಾಟೆ ಮಾಡಿಕೊಂಡು ಸಭಾತ್ಯಾಗ ಮಾಡುತ್ತಾ ಪ್ರಚಾರ ಗಿಟ್ಟಿಸುವಂತಹ ಅವಶ್ಯಕತೆ ಇಲ್ಲ. ಅವರನ್ನು ಕರೆದುಕೊಂಡು ಕೇಂದ್ರ ಸರ್ಕಾರಕ್ಕೆ ಹೋಗಿ ಎಷ್ಟು ಹಣ ಬೇಕು ಅಷ್ಟು ಹಣವನ್ನು ಕೇಳಿ ಪಡೆದುಕೊಂಡು, ಇಲ್ಲಿಗೆ ಬಂದು ನಮ್ಮ ರೈತರ ಹಳ್ಳ ಹಾಗೂ ನದಿ ದಂಡೆಗಳನ್ನು ಸರಿ ಮಾಡದೇ ಹೋದರೆ ಮುಂದಿನ ವರ್ಷ ಕೂಡ ರೈತರು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ಕಳೆದ ಮಳೆಗಾಲದಲ್ಲಿ ಅತಿವೃಷ್ಟಿಯಿಂದಾಗಿ ರಸ್ತೆಗಳು ಸಾಕಷ್ಟು ಹಾನಿಯನ್ನು ಅನುಭವಿಸಿವೆ. ಟಾರು

ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ಕೆಲವು ಕಡೆ ರಸ್ತೆಗಳು ಇಲ್ಲ. ಸಂಪರ್ಕಗಳು ಕೆಟ್ಟು ಹೋಗಿವೆ. ನನ್ನ ಕ್ಷೇತ್ರದಲ್ಲಿ State Highway ನಲ್ಲಿ ಸೇತುವೆ ಬಿದ್ದು ಹೋಗಿದೆ. ಸೇತುವೆಗಳು ಉರುಳಿ ಬಿದ್ದುಹೋಗಿವೆ. ಇದಕ್ಕೆ ಹಣಕಾಸಿನ ಲಭ್ಯತೆಯನ್ನು ಸರಿಯಾದ ರೀತಿಯಲ್ಲಿ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಇನ್ನೊಂದು ಬಾರಿ delegation ಕರೆದುಕೊಂಡು ಹೋಗಿ ಮನವಿ ಕೊಟ್ಟು, ಕೇಂದ್ರ ಸರ್ಕಾರದಿಂದ ಹಣ ತಂದು ನಮ್ಮ ರಾಜ್ಯದಲ್ಲಿರುವ ಇಂತಹ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ದಯಮಾಡಿ ಅವಕಾಶ ಮಾಡಿಕೊಡಬೇಕು. ಈಗಾಗಲೇ, ಬರಪೀಡಿತ ಪ್ರದೇಶದ ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿ ಕೊಟ್ಟು ಮತ್ತೆ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಹೊರಟ್ಟಿದ್ದೀರಿ. ನಮ್ಮ ಅತಿವೃಷ್ಟಿ ಪೀಡಿತ ತಾಲ್ಲೂಕುಗಳಿಗೆ ಅದೇ ರೀತಿ ಹಣಕಾಸಿನ ಲಭ್ಯತೆಯನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಲೆನಾಡಿನಿಂದ ಬಂದವರು ಬಹಳ ಜನ ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದೇವೆ . ಹಾಗಾಗಿ ಈ ಕಡೆ ನಿಮ್ಮ ದೃಷ್ಟಿ ಬಹಳ ಕಡಿಮೆ. ನೀವು ನಾವೇನೋ ಸುಖವಾಗಿದ್ದೇವೆಂದು ತಿಳಿದುಕೊಂಡು ಬಿಡುತ್ತೀರಿ. ಅದೇ ತಾಪತ್ರಯ ನಮಗೆ.

ಉಪಾಧ್ಯಕ್ಷರು: ಅಲ್ಲ, ಈ ಕಡೆ ದೃಷ್ಟಿ ನೋಡಬೇಕಾದರೆ ಬಲಗಣ್ಣು ಯಾವಾಗಲೂ ನಿಮ್ಮ ಕಡೆ ಇರುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ಬಲಗಡೆ ದೃಷ್ಟಿ ಜಾಸ್ತಿ ಇರಲಿ ಎಂದು ನನ್ನ ವಿನಂತಿ. ನಮಗೆ ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ಹೇಳುವುದಕ್ಕೂ ಆಗುವುದಿಲ್ಲ, ಕೇಳುವುದಕ್ಕೂ ಆಗುವುದಿಲ್ಲ. ನಮ್ಮ ಮಂತ್ರಿಗಳು "ಇವರು ಹೇಗಿದ್ದರೂ ಸುಮ್ಮನೆ ಕುಳಿತುಕೊಂಡಿದ್ದಾರೆ ಅವರಿಗೇ ಜಾಸ್ತಿ ಕೋಡೋಣ" ಎಂದು ಅವರಿಗೆ ಕೊಟ್ಟುಕಳುಹಿಸಿಬಿಟ್ಟರೆ ನಮಗೆ ತೊಂದರೆಯಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಕೂಡ ಬಹಳ ಕಷ್ಟವಾಗುತ್ತದೆ. ಮಲೆನಾಡಿನವರು ಎಂದರೆ ಕರಾವಳಿ ಸೇರಿ ಬಂತು, ನಾವು ಬಹಳ ಜನ ಆಡಳಿತ ಪಕ್ಷದಲ್ಲಿ ಇದ್ದೇವೆ. ಈ ಭಾಗದಲ್ಲಿ ಅತಿವೃಷ್ಟಿಯಿಂದಾಗಿ ಬಹಳ ತೊಂದರೆಗೊಳಗಾಗಿದ್ದೇವೆ. ಮಾನ್ಯ ಸಚಿವರು ನಮಗೆ ದಯಮಾಡಿ ನ್ಯಾಯ ದೊರಕಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಎಂ. ವಿಶ್ವನಾಥ್(ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಕಳೆದ ವರ್ಷ ಅತಿವೃಷ್ಟಿಯಿಂದ ನಮ್ಮ ಭಾಗದಲ್ಲಿ ಏನು ತೊಂದರೆಯಾಗಿತ್ತು, ಅದಕ್ಕೆ ಹಣ ಬಿಡುಗಡೆ ಮಾಡುತ್ತೇವೆ, ನೀವು ಕೆಲಸ ಮಾಡಿ ಎಂದು ಹೇಳಿದಂತಹ ಕೆಲಸಗಳಿಗೆ ಹಣ ಇನ್ನೂ ನಮಗೆ ಕೊಟ್ಟಿಲ್ಲ. ಪಶ್ಚಿಮ ಘಟ್ಟದಲ್ಲಿ ಇರುವಂತಹ ಎಲ್ಲಾ ತಾಲ್ಲೂಕಿನ ಸಮಸ್ಯೆಗಳೇ ನಮಗೂ ಇವೆ. ಆದರೆ ನನ್ನ ಕ್ಷೇತ್ರವಾದ ಸಕಲೇಶಪುರದಲ್ಲಿ ಆಲೂರು ತಾಲ್ಲೂಕಿಗೆ ಒಂಬತ್ತು ಹೋಬಳಿಗಳು ಬರುತ್ತವೆ. ಅಲ್ಲಿ ಕಳೆದ ಬಾರಿ ನೀವು ಕೆಲಸ ಮಾಡಿ ಎಂದು ಏನು ಹೇಳಿದಿರಿ, ಆ ಪ್ರಕಾರ ಸುಮಾರು ಒಂದೂವರೆ ಕೋಟಿ ರೂಪಾಯಿ ಕೆಲಸವಾಗಿರುವುದರ ಬಿಲ್ ರಾಜ್ಯ ಸರ್ಕಾರದಿಂದ ಹಣ ಬರುತ್ತದೆ ಎಂದು ಹೇಳಿ ಇದುವರೆಗೂ ಬಂದಿಲ್ಲ. ಈ ಸಲ ಬಂದಿರುವುದರಲ್ಲಿ ಕೂಡ ಹಿಂದೆ ಮಾಡಿರುವಂತಹ ಕೆಲಸಕ್ಕೆ ಹಣ ಬಿಡುಗಡೆಯಾಗಿಲ್ಲ. ಕಾರಣವೇನೆಂದರೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಬಾರದೆಂದು ಆದೇಶ ಬಂದಿದೆ, ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲ, ಹೊಸದಾಗಿ ಆದೇಶ ಬರಬೇಕೆಂದು ಕಾಯುತ್ತಾರೆ. ಒಂದು ಆ ಹಣ ಬಾಕಿ ಇದೆ. ಇನ್ನು ಎರಡನೆಯದಾಗಿ, ಬಾರೀ ಮಳೆ ಬಿದ್ದು ಅತಿವೃಷ್ಟಿಯಿಂದ ಸಮಸ್ಯೆಯಾಯಿತು ಎಂದು ನಮ್ಮ ಸ್ನೇಹಿತರು ಹೇಳಿದರು. ಆದರೆ ಈಗ ನಮ್ಮ ಸಮಸ್ಯೆ ಇರುವುದು ಬರ. ನಮ್ಮಲ್ಲಿ ಒಂದರಿಂದ ಎರಡು ಕಿಲೋಮೀಟರ್ ದೂರ ನೀರಿಗಾಗಿ ಹೋಗಬೇಕಾಗಿದೆ. ನಾವೆಲ್ಲೋ ಗುಡ್ಡದ ತುದಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಇದ್ದೇವೆ. ಕೆಳಗಡೆ ಒಂದೆರಡು ಕಿಲೋಮೀಟರ್ ನೀರಿಗೆ ಹೋಗಬೇಕು. ಅಲ್ಲಿಂದ ನೀರು ತರುವುದಕ್ಕೆ ಯಾವುದೇ ಸರಿಯಾದ ಯೋಜನೆಗಳು ನಮ್ಮಲ್ಲಿ ಇಲ್ಲ. ಈಗಾಗಲೇ ಒಂದು ಯೋಜನೆಯನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದೆವೆ. ಪಶ್ಚಿಮ ಘಟ್ಟದಲ್ಲಿ ಎಲ್ಲಾ ಕಡೆ ಬಾರೀ ಹೇರಳವಾಗಿ ಗುಡ್ಡದಲ್ಲಿ ನೀರಿದೆ. ಆ ನೀರು ಹರಿದುಬಿಟ್ಟು ಸಮುದ್ರ ಸೇರುತ್ತಿದೆ. ನಾವಾಗಲೇ ಸರ್ಕಾರದ ಮುಂದೆ ಒಂದು ಯೋಜನೆಯನ್ನು ತಂದು ಇಟ್ಟಿವು. 40 ಯೋಜನೆಗಳು ಸುಮಾರು 60 ರಿಂದ 70 ಗ್ರಾಮಗಳಿಗೆ ಕುಡಿಯುವ ನೀರನ್ನು ವಿದ್ಯುಚ್ಛಕ್ತಿ ಇಲ್ಲದೇ 365 ದಿನ ಎಲ್ಲಾ ಕಾಲದಲ್ಲೂ ಒಳ್ಳೆಯ mineral water ಎಂದು ಏನು ಇಲ್ಲಿ bottle ನಲ್ಲಿ ಕೊಡುತ್ತೀರಿ ಅದಕ್ಕಿಂತ ಒಳ್ಳೆಯ ನೀರು ಕೊಡುವಂತಹ ವ್ಯವಸ್ಥೆ ನಮ್ಮಲ್ಲಿದೆ. ಆ ರೀತಿ ಒಂದು ಯೋಜನೆಯನ್ನು

ಮಾಡಿ ತೋರಿಸಿದ್ದೇವೆ. ಸರ್ಕಾರಕ್ಕೆ ಅದನ್ನು ಹೇಳಿದ್ದೇವೆ. ಸುಮಾರು 11 ಕಿಲೋಮೀಟರ್‌ನಿಂದ ನೀರು ತಂದು ಕೊಟ್ಟಿದ್ದೇವೆ. ಸುಮಾರು 365 ದಿನ ಮೂರು ಸಾವಿರ ಜನ ನೀರು ಕುಡಿಯುತ್ತಿದ್ದಾರೆ. ಆ ರೀತಿಯ ಯೋಜನೆಗಳು ನನ್ನ ಕ್ಷೇತ್ರದಲ್ಲಿ ಅಲ್ಲದೇ ಭಾಗಮಂಡಲ, ಸಿರ್ಸಿ, ಸಿದ್ದಾಪುರದವರೆಗೂ ಈ ರೀತಿಯಲ್ಲಿ ಪಶ್ಚಿಮ ಘಟ್ಟದಲ್ಲಿ ಇವೆ. ಅಲ್ಲಿ ವಿಪರೀತ ಗಾಳಿ, ಮಳೆಗಾಲದಲ್ಲಿ ಮಳೆ ಬೀಳುತ್ತದೆ, ಮತ್ತೆ ಆರು ತಿಂಗಳು ವಿದ್ಯುಚ್ಛಕ್ತಿ ಇರುವುದಿಲ್ಲ. ನೀವು ಅಲ್ಲಿ ಯಾವ ರೀತಿಯ ಯೋಜನೆಗಳನ್ನು ಮಾಡಿದರೂ ಉಪಯೋಗವಾಗುವುದಿಲ್ಲ. ಇಂತಹ ಝರಿ ಯೋಜನೆಯನ್ನು ತಂದರೆ, ನಾನು ಕೊಟ್ಟಿರುವಂತಹ ಯೋಜನೆಗೆ, ತಾವು ಐದು ಕೋಟಿ ರೂಪಾಯಿಗಳನ್ನು ಕೊಟ್ಟರೆ, 60 ಹಳ್ಳಿಗಳಿಗೂ ಎಲ್ಲಾ ಕಾಲಗಳಲ್ಲೂ ನೀರನ್ನು ಕೊಡುವ ವ್ಯವಸ್ಥೆ ಇದೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಗಮನಹರಿಸಬೇಕು. ಇದರ ಬಗ್ಗೆ ಸರ್ಕಾರ ಯೋಚನೆಯನ್ನೇ ಮಾಡುತ್ತಿಲ್ಲ. ಇಲ್ಲಿ ಪಶ್ಚಿಮ ಘಟ್ಟದ ಬಗ್ಗೆ ಪ್ರಶ್ನೆಯನ್ನು ಎತ್ತಿದರೆ, ನಿಮಗೆ ಹೇರಳವಾಗಿ ನೀರು ಇದೆ, ನಿಮಗೆ ಏಕೆ ಎಂದು ಎಲ್ಲರೂ ಮಾತನಾಡುತ್ತಾರೆ. ಆದರೆ ನಮಗೆ ಇರುವ ನೀರನ್ನೆಲ್ಲವನ್ನು ತೆಗೆದುಕೊಂಡು ಕಟ್ಟೆಯನ್ನು ಕಟ್ಟಿಕೊಂಡಿದ್ದೀರಿ, ಮುಳುಗಡೆ ಮಾಡಿರುವುದು ನಮ್ಮದೇ, ತುಂಬಾ ಯೋಚನೆಯನ್ನು ಮಾಡಬೇಕು. ಇದು ತುಂಬಾ ಗಂಭೀರವಾದ ವಿಚಾರವಾಗಿದೆ. ಇವತ್ತು ಕಾವೇರಿ ನದಿಯ ವಿಚಾರವಾಗಿ ಗಲಾಟೆಯಾಗುತ್ತಿದೆ.

ಉಪಾಧ್ಯಕ್ಷರು: ತಾವು ಸ್ಪಷ್ಟೀಕರಣ ಮಾತ್ರ ಕೇಳಿ, ಅದು ಬಿಟ್ಟು ಭಾಷಣವನ್ನೆ ಮಾಡುತ್ತೀರಲ್ಲಾ, ತಾವು ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಹೆಚ್.ಎಂ.ವಿಶ್ವನಾಥ್: ಮಾನ್ಯ ಉಪಾಧ್ಯಕ್ಷರೆ, ಇದು ಭಾಷಣವಲ್ಲ, ದಯಮಾಡಿ ಇದನ್ನು ಕೇಳಿ. ಇವತ್ತು ನಾವು ಎಪ್ಪತ್ತು ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ. ಅದರಲ್ಲಿ 45 ಬೋರ್‌ವೆಲ್‌ಗಳು failure ಆಗಿವೆ. ಒಂದು ಇಂಚು, ಒಂದೂವರೆ ಇಂಚು ನೀರು ಬರುತ್ತದೆ. ಅದಕ್ಕೆ ಮೋಟರ್ ಅನ್ನು ಹಾಕಿ ನೀರನ್ನು ಎತ್ತಿದರೆ, ಒಂದು ತಿಂಗಳಿಗೆ ನೀರು ಇರುವುದಿಲ್ಲ. ಈಗ ಮತ್ತೆ ಬೋರ್‌ವೆಲ್‌ಗಳನ್ನು ಕೊರೆಯಬೇಕು. ನಮ್ಮ ಹತ್ತಿರ ಹಣ ಇಲ್ಲ. ಇದಕ್ಕೆ ಹಣವನ್ನು ಯಾರು ಕೊಡುವವರು? ಇದುವರೆಗೂ ಮಾನ್ಯ ಸಚಿವರು ಈ ವಿಷಯದ ಬಗ್ಗೆ ಗಮನ ಹರಿಸಿಲ್ಲ. ನಮಗೆ ಈ ವರ್ಷದಲ್ಲಿ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹತ್ತು ಲಕ್ಷ ರೂಪಾಯಿಗಳಲ್ಲಿ ನಾವು

ಒಂಭತ್ತು ಹೋಬಳಿಗಳಲ್ಲಿ ಕೆಲಸಗಳನ್ನು ಹೇಗೆ ಮಾಡಬೇಕು? ಯಾರಿಗೆ ನೀರನ್ನು ಕೊಡಬೇಕು? ಈಗಾಗಲೇ ಫೆಬ್ರವರಿ ತಿಂಗಳು ಬಂದಾಯಿತು. ನೀವು ಹಣವನ್ನು ಕೊಟ್ಟು, ನಾವು ಬೋರ್‌ವೆಲ್ ಕೊರೆದು, ಅದಕ್ಕೆ ಮೋಟರ್ ಹಾಕಿ, ನೀವು ನೀರನ್ನು ಕೊಡುವುದರೊಳಗೆ, ನಮ್ಮ ಜನರು ಒಂದು ಕಿ.ಮೀ, ಎರಡು ಕಿ.ಮೀ, ನೀರಿಗೆ ಹೋಗಬೇಕು. ನೀವು ಬೇರೆ ಕಡೆಗಳಲ್ಲಿ ಟ್ಯಾಂಕರ್‌ಗಳಲ್ಲಿ ನೀರು ಕೊಡಬೇಕೆಂದು ಹೇಳುತ್ತೀರಿ. ನಮ್ಮ ಕಡೆಗಳಲ್ಲಿ ಆ ರೀತಿಯಾಗುವುದಿಲ್ಲ. ಅಲ್ಲೊಂದು, ಇಲ್ಲೊಂದು ಮನೆಗಳು ಇರುತ್ತವೆ. ಯಾವ ರೀತಿಯಲ್ಲಿ ನೀರನ್ನು ಕೊಡುವುದಕ್ಕೆ ಆಗುತ್ತದೆ? "ನೀವು ಮಲನಾಡಿನವರು, ಬಹಳ ಚೆನ್ನಾಗಿ ಇದ್ದೀರಿ. ನಿಮಗೆ ಸೊಗಸಾಗಿ ಮಳೆ ಬರುತ್ತದೆ" ಎಂದು ಹೇಳುತ್ತೀರಿ. ನಮ್ಮ ಕಡೆ ಮಳೆಗಾಲದಲ್ಲಿ ಮಳೆ ಬರುತ್ತದೆ' ಅದು ಸುರಿದು ಹೊರಟು ಹೋಗುತ್ತದೆ, ಅದು ನಿಮ್ಮ ಡ್ಯಾಮ್‌ಗಳಿಗೆ ನೀರು ಆಯಿತು. ನಮಗೆ ಈಗ ಕುಡಿಯುವುದಕ್ಕೆ ನೀರು ಇಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಕೇಳುವಂಥಾದ್ದು. ಇಡೀ ಪಶ್ಚಿಮ ಘಟ್ಟಕ್ಕೆ ನೀವು ಒಂದು ಯೋಜನೆಯನ್ನು ಮಾಡಿ, ಅದು ನನ್ನ ಕ್ಷೇತ್ರ ಮಾತ್ರವೆಂದು ಅಲ್ಲ. ಇಡೀ ಪಶ್ಚಿಮ ಘಟ್ಟದಲ್ಲಿ 35–40 ತಾಲ್ಲೂಕುಗಳು ಬರುತ್ತವೆ. ಇಲ್ಲಿಗೆ ಒಂದು ವಿಶೇಷವಾದ ಯೋಜನೆಯನ್ನು ಮಾಡಿ, ನಮಗೆ ಹಣವನ್ನು ಬಿಡುಗಡೆ ಮಾಡಿ ಕೊಡಿ. ನೀವು ಬರಗಾಲ ಪೀಡಿತ ಪ್ರದೇಶದವರಿಗೆ ಹೇಗೆ ಹಣವನ್ನು ಕೊಡುತ್ತೀರಿ. ಅದೇ ರೀತಿಯಲ್ಲಿ ನಮಗೂ ಕೂಡ ಹಣವನ್ನು ಬಿಡುಗಡೆ ಮಾಡಿ ಕೊಡಿ, ಇಲ್ಲದೆ ಹೋದರೆ ನಮ್ಮ ಜನರು ಗುಳೆ ಹೋಗುವಂತಹ ಪರಿಸ್ಥಿತಿ ಬರುತ್ತಿದೆ. ಆದುದರಿಂದ ಈ ಕೆಲಸ ತುಂಬಾ ತುರ್ತು ಎಂದು ತೆಗೆದುಕೊಂಡು, ಈಗಲೇ ನೀವು ಮಾಡಬೇಕು. ನೀವು ನಮ್ಮ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಣೆಯನ್ನು ಮಾಡಿದ್ದೀರಿ. ಇನ್ನು ಬಾಕಿ ಇರುವುದನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲ. ಅಲ್ಲಿಗೆ ಹಣವೂ ಬರುವುದಿಲ್ಲ, ಈ ಕಡೆಗೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ. ನಮಗೆ ಬೇರೆ ಯೋಜನೆಗಳಿಗೂ ಹಣ ಬರುವುದಿಲ್ಲ. ಅದು ಅತಿವೃಷ್ಟಿಯಲ್ಲೂ ಬರುವುದಿಲ್ಲ, ಅನಾವೃಷ್ಟಿಯಲ್ಲೂ ಬರುವುದಿಲ್ಲ. ಇನ್ನು ಯಾವುದರಲ್ಲಿ ನಮಗೆ ಹಣ ಬರುತ್ತದೆ. ಇಲ್ಲಿ ಡ್ಯಾಮ್‌ಗಳನ್ನು ಕಟ್ಟಿದರೆ ನೀವು ನೀರನ್ನು ತೆಗೆದುಕೊಂಡು ಹೋಗುತ್ತೀರಿ. ಇಲ್ಲಿ ಯಾವುದೇ ಯೋಜನೆಗಳೂ ಇಲ್ಲ, ಯಾವುದೇ ಫ್ಯಾಕ್ಟರಿಗಳನ್ನು ಮಾಡುವುದಕ್ಕೆ

ಆಗುವುದಿಲ್ಲ. ಇಲ್ಲಿ ಕುದುರೆ ಮುಖದ ಯೋಜನೆಯೊಂದು ಬಿಟ್ಟರೆ, ಬೇರೆ ಏನೂ ಇಲ್ಲ. ಅದು ನಮಗೂ ಏನು ಅಲ್ಲ. ಪಶ್ಚಿಮಘಟ್ಟದಲ್ಲಿ ಏನೆಂದರೆ, ಬೆಂಗಳೂರಿನಲ್ಲಿ ದುಡ್ಡನ್ನು ಮಾಡಿಕೊಂಡು ಅಲ್ಲಿ Hydro–electric ಯೋಜನೆಗಳನ್ನು ಮಾಡುವುದಕ್ಕೆ ಅವರು ನಮ್ಮ ಕಾಡಿನಲ್ಲಿ ನುಗ್ಗುವುದನ್ನು ಬಿಟ್ಟರೆ, ಇನ್ನು ನಮ್ಮಲ್ಲಿ ಯಾವುದೇ ಯೋಜನೆಗಳು ಇಲ್ಲ. ನಮ್ಮ ಜನರಿಗೆ ಏನೂ ಅನುಕೂಲಗಳಿಲ್ಲ. ಆದುದರಿಂದ ದಯಮಾಡಿ ಸರ್ಕಾರ ಈ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾಡಿ, ಕನಿಷ್ಠ ನಮ್ಮ ಭಾಗಕ್ಕೆ ಕುಡಿಯುವ ನೀರಿಗೆ ಎರಡು, ಮೂರು ಕೋಟಿ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆಯನ್ನು ಮಾಡಿಕೊಟ್ಟರೆ, ನಾವು ಏನಾದರೂ ಮಾಡಿ ನೀರನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು, ನಾನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಹದೇವ್ (ಕೃಷ್ಣರಾಜಸಾಗರ): ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖೇನ ಮಾನ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ. ಕಳೆದ ಬಾರಿ ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರವಿದ್ದ ಸಂದರ್ಭದಲ್ಲಿ, ನಾವೆಲ್ಲರೂ ಕೂಡ ಸ್ಕೇರ್‌ಸಿಟಿಯಲ್ಲಿ ಬಂದಂಥ food grains ಏನಿದೆ, ಅವೆಲ್ಲವೂ ಕೂಡ ಬಹಳಷ್ಟು illegal ಆಗಿ ಹೋಗಿ, ಪೋರ್ಟ್‌ನಲ್ಲಿ ಸಿಕ್ಕಿ ಹಾಕಿಕೊಂಡು, ಕೆಟ್ಟ ಹೆಸರು ಬಂದು, ಇಂಜಿನಿಯರ್ಸ್, ಮತ್ತೆ food contractors ಇವರೆಲ್ಲಾ ಅದರಲ್ಲಿ collude ಆದದ್ದನ್ನು ತಾವೆಲ್ಲರೂ ಗಮನಿಸಿದ್ದೀರಿ. ಇವತ್ತಿಗೂ ಕೂಡ ಮಾನ್ಯ ಕಂದಾಯ ಸಚಿವರಿಗೆ ಗೊತ್ತಿದೆಯೋ ಇಲ್ಲವೊ, ಇವತ್ತು ಕೂಡ ಅಧಿಕಾರಿಗಳು ನಮಗೆ ನೀವು ಏನು norms ಅನ್ನು ಹಾಕುತ್ತೀರಿ, ನೀವು ಏನು programme create ಮಾಡಿ ಎಂದು ಹೇಳುತ್ತಿದ್ದೀರಿ, ಅದು need based ಮಾಡುವ ಬದಲು ನೀವು ಲಿಮಿಟ್ ಹಾಕುತ್ತಿದ್ದೀರಿ. ಅದು ಐವತ್ತು ಸಾವಿರಕ್ಕೆ ಮಾಡಿಸಿ, ಎಪ್ಪತ್ತು ಸಾವಿರಕ್ಕೆ ಮಾಡಿಸಿ ಎಂದು ಲಿಮಿಟ್ ಹಾಕುತ್ತಿದ್ದೀರಿ. The whole object of scarcity is to create work force. ಕೆಲಸವಿಲ್ಲದೇ ಇರುವ ಜನರಿಗೆ ಕೂಲಿಯನ್ನು ಕೊಡುವಂಥ ಕೆಲಸಕ್ಕೆ ನೀವು higher endನಲ್ಲಿ ಒಂದೊಂದು ಕೆಲಸವನ್ನು 70, 80 ಸಾವಿರ ರೂಪಾಯಿಗಳಲ್ಲಿ ತೆಗೆದುಕೊಳ್ಳಿ ಎಂದರೆ, ಯಾವುದೋ ಒಂದು ಟ್ರಾಕ್ಟರೊ, ಜೆಸಿಬಿನೊ involve ಆಗುತ್ತದೆ. ನೀವೇ voluntary ಆಗಿ ರೈಸ್ ಅನ್ನು you are allowing to go illegally.

This is one. ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮಗೆ ಯಾವುದೇ ಕೆಲಸವನ್ನು create ಮಾಡುವುದಕ್ಕೆ ಹೋದರೂ ಕೂಡ, ಒಂದು ಲಕ್ಷ ರೂಪಾಯಿಗಳ ಕೆಲಸವನ್ನು ನಮ್ಮ ಇಂಜಿನಿಯರ್‌ಗಳು ಮಾಡಿಟ್ಟಿದ್ದರು. ನಾನು ಅದನ್ನು D.C.ಯವರ ಹತ್ತಿರ ಒಂದು ಲಕ್ಷ ರೂಪಾಯಿ ಗಳೆಂದು ಹೇಳಿದರೆ, ಇದು ತಪ್ಪಾಗುತ್ತದೆಂದು ಹೇಳಿ ಇದನ್ನು, you limit it to Rs. 50 thousand ಎಂದು ಹೇಳಿ ಕಳುಹಿಸಿದರು. ಲಿಮಿಟ್ ಇಟ್ಟು, ನನ್ನ ತಾಲ್ಲೂಕಿಗೆ ಹೇಳಿ ಕಳುಹಿಸಿದರು. What is the purpose of scarcity? ಬರಗಾಲವಾಗಿದೆ, ಅಲ್ಲಿರುವಂತಹ ಕೂಲಿಕಾರ್ಮಿಕರಿಗೆ ಕೆಲಸವನ್ನು ಕೊಡಬೇಕು ಎಂದು ಇರುವುದು. ಈ ರೀತಿ ಹತ್ತು ವರ್ಕ್‌ಗಳು ಹೆಚ್ಚಾದರೆ, ಆ ವರ್ಕ್‌ಗಳಿಂದ estimation ಜಾಸ್ತಿ ಮಾಡಬೇಕು, ಇದರಿಂದ ನಿಮಗೆ official work ಜಾಸ್ತಿಯಾಗುತ್ತದೆಂಬ ಒಂದೇ ಒಂದು ಕಾರಣಕ್ಕೆ, ನೀವು 50 ಸಾವಿರ, 60 ಸಾವಿರ ರೂಪಾಯಿಗಳಿಗೆ ವರ್ಕ್ ಲಿಮಿಟ್ ಮಾಡಿ ಎಂದು ಹೇಳುತ್ತಿದ್ದೀರಿ. ಅದೇ ರೀತಿಯಲ್ಲಿ ಮಾನ್ಯ ಕಂದಾಯ ಸಚಿವರ ಗಮನಕ್ಕೆ ಇನ್ನೊಂದು ವಿಚಾರವನ್ನು ಗಮನಕ್ಕೆ ತರುತ್ತೇನೆ. ಇವತ್ತು scarcity ಗೆ ಸರ್ಕಾರ ಕೊಟ್ಟಿರುವಂತಹ ಹಣ.. .. ..

ಉಪಾಧ್ಯಕ್ಷರು: ಮಾನ್ಯ ಮಹದೇವ್‌ರವರೆ, ತಾವು ಭಾಷಣವನ್ನು ಬೇಗ ಮುಗಿಸಿ.

ಶ್ರೀ ಮಹದೇವ್: ಮಾನ್ಯ ಉಪಾಧ್ಯಕ್ಷರೆ, ನಮ್ಮ M.L.A. Grantsನಲ್ಲೂ ಕೂಡ, ಹಲವಾರು scarcity related ಕೆಲಸಗಳನ್ನು ನಾವು ತೆಗೆದುಕೊಳ್ಳಬಹುದು. ಆದರೆ ನಮ್ಮ MLA Grantsನಲ್ಲೂ ಕೂಡ ಏನು ಹೇಳುತ್ತಾರೆಂದರೆ, ಒಂದು ಲಕ್ಷ ರೂಪಾಯಿಗಳಿಗೆ ಲಿಮಿಟ್ ಮಾಡಿ ಎಂದು ಹೇಳುತ್ತಿದ್ದಾರೆ. ನಾನು ಇದೇ ವಿಚಾರದಲ್ಲಿ Calling Attention Motion ಅನ್ನು ಕೂಡ ಸದನದಲ್ಲಿ ತಂದಿದ್ದೇನೆ. ದಯವಿಟ್ಟು ನಮ್ಮ MLA Grantsನಲ್ಲೂ ಕೂಡ ಕೆಲವು ಮೋರಿಗಳನ್ನು ಕಟ್ಟಬಹುದು, ಕಲ್‌ವರ್ಟ್ ಅನ್ನು ಕಟ್ಟಬಹುದು, ಕೆಲವು ಚಿಕ್ಕ ಪುಟ್ಟ ಕಾಮಗಾರಿಗಳನ್ನು ಕೂಡ ಮಾಡಿಸಬಹುದೆಂದು ನಮ್ಮ MLA Grants normsನಲ್ಲಿ ಇದೆ. ಆದರೆ ಒಂದು ಲಕ್ಷ ರೂಪಾಯಿಗಳಿಗೆ ಅದನ್ನು ಲಿಮಿಟ್ ಮಾಡಿ ಎಂದು ಹೇಳುತ್ತಾರೆ. ಆ norms ಅನ್ನು 50 ಸಾವಿರ ರೂಪಾಯಿಗಳಿಗೆ ಕಡಿಮೆ ಮಾಡಿದರೆ, ಪ್ರಾಯಶ: ಸದನದಲ್ಲಿ ಎಲ್ಲಾ ಸದಸ್ಯರು

ಇದನ್ನು ಒಪ್ಪಿಕೊಳ್ಳುತ್ತಾರೆ. ಇದು need basedಗೆ, ನಮಗೆ ಏನು additional funds ಬರುತ್ತದೆ, ಅದಕ್ಕೆ ಅನುಗುಣವಾಗಿದೆ. ಈಗ ಆಗಿ ಹೋಗಿದ್ದು ಆಯಿತು, ಇನ್ನು ಮುಂದೆ ಬರತಕ್ಕಂಥ ಅನುದಾನದಲ್ಲಿ ದಯವಿಟ್ಟು ನಮ್ಮ ವಿವೇಚನೆಗೆ ಬಿಟ್ಟ need based ಆಗಿ programme ಮಾಡುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕು. ಇದನ್ನು ಅಧಿಕಾರಿಗಳು 50 ಸಾವಿರ, 70 ಸಾವಿರ ಲಿಮಿಟ್ ಮಾಡಿ, ಮತ್ತೆ ಅದು ಎಲ್ಲಾ ಮೆಕಾನೈಸ್ಡ್ ಆದ ಹಾಗೆ ಆಗಿ, ಆ ರೈಸ್ ಎಲ್ಲಾ ಇಲ್ಲೀಗಲ್ ಆಗಿ ಹೋಗುತ್ತದೆ. ಮತ್ತೆ ನಮ್ಮ MLA Grantsನಲ್ಲಿ ಕೂಡ ಬಹಳಷ್ಟು ಇಂತಹ relief works ಅನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆಗಳು ಇವೆ. ಇದಕ್ಕೆ ನಾರ್ಮ್ಸ್ ಒಂದೇ ರೀತಿಯಲ್ಲಿ ಇದೆ. ಆ ಗ್ರಾಂಡ್ಸ್ ಅನ್ನು ಕೂಡ ಒಂದು ಲಕ್ಷದಿಂದ ಮಿನಿಮಮ್ 50 ಸಾವಿರ ರೂಪಾಯಿಗಳ ಲೈನ್‌ಗೆ ತರಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಯವರಲ್ಲಿ ನಾನು ಕೇಳುವುದೇನೆಂದರೆ, ಬಹಳಷ್ಟು ಶಾಸಕರು ಕೇಳಿದಂತಹ ಟಾಸ್ಕ್ ಫೋರ್ಸ್ ಬಗ್ಗೆ ಪ್ರಸ್ತಾಪ ಮಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ, ತಮ್ಮಿಂದ ಸ್ಪಷ್ಟವಾಗಿ ಉತ್ತರ ಬಂದಿಲ್ಲ. ಈಗ ತಾವು ದುಡ್ಡಿನ ವ್ಯವಸ್ಥೆಯನ್ನು ಯಾವ ರೀತಿಯಾಗಿ ಮಾಡುತ್ತೀರಿ? ನಾವು ಮಾಡಿದ action plan ಮಾಡಿದ್ದಕ್ಕೆಲ್ಲಾ ದುಡ್ಡನ್ನು ಕೊಡುತ್ತಿರೋ, ಅಥವಾ D.C.ಯವರು ಅದಕ್ಕೆ ಕೊಕ್ಕೆಯನ್ನು ಹಾಕಿ, ನೀವು ಇಷ್ಟಕ್ಕೆ ಮಾಡಿ ಎಂದು ಅವರು ಹೇಳಿದ ಹಾಗೆ ನಾವು ಕೇಳಬೇಕೋ, ಆ ಬಗ್ಗೆ ಒಂದು ಸ್ಪಷ್ಟೀಕರಣವನ್ನು ಕೊಡಿ, ಎರಡನೆಯದಾಗಿ, ಈಗ ಟೌನ್ ಮುನಿಸಿಪಾಲಿಟಿ ಅಸ್ತಿತ್ವದಲ್ಲಿಲ್ಲ. ಇದಕ್ಕೆ ಚುನಾವಣೆಗಳು ನಡೆದಿಲ್ಲ, ಅಲ್ಲಿ ಈಗ ಸದಸ್ಯರು ಇಲ್ಲ. ಈಗ ಪಟ್ಟಣ ಪ್ರದೇಶಕ್ಕೆ ಬರಗಾಲ ಪರಿಹಾರದಲ್ಲಿ ಖರ್ಚು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅಲ್ಲಿ ನಾವು ಯಾವ ರೀತಿಯಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಅನುಕೂಲವನ್ನು ಮಾಡಿಕೊಡುತ್ತೀರಿ? ಅಲ್ಲಿ ಕೂಲಿ ಮಾಡುವಂತಹ ಬಡವರಿಗೆ ಯಾವ ರೀತಿಯ ಕೆಲಸವನ್ನು ಕೊಡುತ್ತೀರಿ? ಮೂರನೆಯದು, ತಾವು ಜನಸಂಖ್ಯೆಯ ಆಧಾರದ ಮೇಲೆ, ಹಣವನ್ನು ಬಿಡುಗಡೆ ಮಾಡುತ್ತೀರಾ? ಎಂದು ಕೇಳಿದ್ದೆ. ಅದಕ್ಕೂ ತಾವು ಸ್ಪಷ್ಟಿಕರಣವನ್ನು ಕೊಟ್ಟಿಲ್ಲ. ಕಳೆದ ವರ್ಷ

ನಾವು ಖಾಸಗಿ ಬಾವಿಗಳಿಂದ ಒಂದು ತಿಂಗಳಿಗೆ 5,000 ರೂಪಾಯಿಗಳನ್ನು ಕೊಡುತ್ತೇವೆಂದು ನೀರನ್ನು ತಂದಿದ್ದೇವೆ, ಅದಕ್ಕೆ ಇಲ್ಲಿಯವರೆಗೂ ಪೇಮೆಂಟ್ ಆಗಿಲ್ಲ, ಮತ್ತು ಅನೇಕ ಕಡೆಗಳಲ್ಲಿ transportation ಅನ್ನು ಮಾಡಬೇಕಾಗಿದೆ. ಅದಕ್ಕೆ ನೀವು ನೇರವಾಗಿ ದುಡ್ಡನ್ನು ಕೊಡುತ್ತೀರಾ?

ಉಪಾಧ್ಯಕ್ಷರು: ಎಲ್ಲಾ ಒಂದೇ ಮಾತಿನಲ್ಲಿ ಹೇಳಿಬಿಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಆರಗ ಜ್ಞಾನೇಂದ್ರರವರು, ಮಲೆನಾಡು ಭಾಗದಲ್ಲಿ ಅತಿವೃಷ್ಟಿ ಏನು ಆಗಿದೆ, ಮತ್ತೆ ಇನ್ನಿತರ ಸದಸ್ಯರು ರಸ್ತೆಗಳ ದುರಸ್ತಿಗೆ, ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ. ನಾವು ಇದರ ಬಗ್ಗೆ ಈಗಾಗಲೇ F.D. ಯವರಿಗೂ request ಮಾಡಿದ್ದೇವೆ. ಅವರು ಒಂದಿಷ್ಟು ಹಣವನ್ನು ಬಿಡುಗಡೆ ಮಾಡುತ್ತಾರೆ. ಈ ಅತಿವೃಷ್ಟಿಗೆ ಸಂಬಂಧಪಟ್ಟಂತೆ, droughtಗೆ ಸಂಬಂಧಪಟ್ಟಂತೆ average ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳಂತೆ ಮೊದಲ ಹಂತದಲ್ಲಿ 128 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಕಳೆದ ವಾರ ಮತ್ತೆ ಎರಡನೆಯ ಹಂತದಲ್ಲಿ 128 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ರೀತಿಯಾಗಿ ಪ್ರತಿಯೊಂದು ತಾಲ್ಲೂಕಿಗೆ drought affected ತಾಲ್ಲೂಕಿಗೆ ಒಂದೊಂದು ಕೋಟಿಯಂತೆ ಎರಡು ಹಂತದಲ್ಲಿ, ಅಂದರೆ ಎರಡು ಕೋಟಿ ರೂಪಾಯಿಗಳು ರಿಲೀಜ್ ಆಗಿದೆ. ಇನ್ನು ಅತಿವೃಷ್ಟಿಗೆ ಹಣವನ್ನು ಈಗಾಗಲೇ ರಿಲೀಜ್ ಮಾಡಿದ್ದೇವೆ, ಕಾಮಗಾರಿಗಳು ಆಗಿದೆ. ಕೆಲವು ಜಿಲ್ಲೆಗಳಲ್ಲಿ ಇನ್ನು ಹೆಚ್ಚಿನ requirement ಇದೆ. ಬೆಳಗಾವಿ ಇರಬಹುದು, ಶಿವಮೊಗ್ಗವಿರಬಹುದು, ಮತ್ತು ದಕ್ಷಿಣ ಕನ್ನಡ ಇರಬಹುದು, ಉಡುಪಿ ಇರಬಹುದು, ಉತ್ತರ ಕನ್ನಡವಿರಬಹುದು, ಕೊಡಗು ಇರಬಹುದು. ಈ ರೀತಿ ಹಲವಾರು ಜಿಲ್ಲೆಗಳಲ್ಲಿ ಅತಿವೃಷ್ಟಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆನ್ನುವಂತಹ ವರದಿ ಬರುತ್ತಿದೆ. ಎಲ್ಲೆಲ್ಲಿ ಅತಿವೃಷ್ಟಿಯಿಂದ ರಸ್ತೆಗಳಿಗೆ ತೊಂದರೆಯಾಗಿದೆ, ಕಾಮಗಾರಿ ಆಗಬೇಕಾಗಿದೆ. ಅದನ್ನು ಪರಿಶೀಲನೆ ಮಾಡಿಕೊಂಡು, ಅಲ್ಲಿ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವ ಕ್ರಮವನ್ನು ಆದಷ್ಟು ಬೇಗ ಕೈಗೊಳ್ಳುತ್ತೇವೆ, ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇನ್ನು ಮಾನ್ಯ ಮಹದೇವ್‌ರವರು ಕೆಲವೊಂದು ಸಲಹೆ ಸೂಚನೆಗಳನ್ನು ಕೊಟ್ಟರು. ಅವರು

50 ಸಾವಿರ, 30 ಸಾವಿರ ವರ್ಕ್‌ಗಳ ಬಗ್ಗೆ, ಲಿಮಿಟ್ ಬಗ್ಗೆ ಹೇಳಿದ್ದಾರೆ. ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ಆದರ ಬಗ್ಗೆ ನಾವು ಮುಂದೆ ಗೈಡ್ ಲೈನ್ಸ್ ಹೊರಡಿಸುವಾಗ ಅದನ್ನು ಸರಿ ಮಾಡುವ ಕೆಲಸವನ್ನು ಮಾಡುತ್ತೇವೆ. MLA ಫಂಡ್ ಈಗ ಒಂದು ಲಕ್ಷ ಇದೆ. ಒಂದು ಲಕ್ಷದ ಮೇಲೆ ಇರುವಂಥ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಇದೆ. ಇದನ್ನು 50ಸಾವಿರಕ್ಕೆ ಲಿಮಿಟ್ ಮಾಡಿದರೆ ಕೆಲವೊಂದು ತುರ್ತು ಕೆಲಸ ಕಾರ್ಯಗಳಿಗೆ ಅದನ್ನು ಉಪಯೋಗ ಮಾಡಬಹುದು. ಅದು ಒಂದು ಲಕ್ಷಕ್ಕೆ ಲಿಮಿಟ್ ಆದರೆ, ಎಲ್ಲೊ ಒಂದು ಕಡೆಗೆ 50 ಸಾವಿರ ರೂಪಾಯಿಗಳ ಕೆಲಸವನ್ನು ಮಾಡ ಬೇಕಾಗುತ್ತದೆ, 60 ಸಾವಿರ ರೂಪಾಯಿಗಳ ಕೆಲಸವನ್ನು ಮಾಡಬೇಕಾಗುತ್ತದೆ, ಅದನ್ನು ನಾವು ಮಾಡುವುದಕ್ಕೆ ಆಗುತ್ತಿಲ್ಲವೆಂದು ಅವರು ಹಾಗೂ ಮತ್ತಿತರ ಶಾಸಕರು ಹೇಳಿದ್ದಾರೆ. ಆ ಬಗ್ಗೆ ನಾನು ಮಾನ್ಯ ರಾಮಚಂದ್ರಗೌಡರ ಜೊತೆ ಮಾತನಾಡಿ, M.L.A. grant guidelines ಏನಿದೆ ಅದನ್ನು ತಿದ್ದುಪಡಿ ಮಾಡ ಬೇಕಾಗುತ್ತದೆ. ಅದನ್ನೂ ನಾವು consider ಮಾಡುತ್ತೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಮಹದೇವ: ಇದು ಬಹಳ ಗಂಭೀರವಾದ ವಿಚಾರ. ಇದನ್ನು consider ಮಾಡುತ್ತೇವೆ ಎಂದು ಹೇಳುವುದಿಲ್ಲ, ಈ ಬಗ್ಗೆ action ಮಾಡಬೇಕು. ನನ್ನ ಎಲ್ಲ ಅಣ್ಣತಮ್ಮಂದಿರು ಕೇಳಿದರು. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಕಲ್ವರ್ಟ್ಸ್ ಮಾಡಬಹುದು, ರೋಡ್ಸ್ ಮಾಡಬಹುದು, ಡ್ರೈನೇಜ್ ಮಾಡಬಹುದು, ಇವೆಲ್ಲವನ್ನೂ ನಮ್ಮ grantನಲ್ಲೂ ಸಹಾ ಮಾಡಬಹುದು. ಅದರ ಜೊತೆಗೆ, ನೀವು 50 ಲಕ್ಷ ರೂಪಾಯಿಗಳನ್ನು ರೋಡ್ಸ್‌ಗೆ ಕೊಟ್ಟಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ಅದನ್ನು ನಾನು ಮಾನ್ಯ ರಾಮಚಂದ್ರಗೌಡರ ಜೊತೆಯಲ್ಲಿ ಮಾತನಾಡಿ, ಗೈಡ್‌ಲೈನ್ ಚೇಂಜ್ ಮಾಡಲು ಪ್ರಯತ್ನ ಮಾಡುತ್ತೇನೆ. ಮಾನ್ಯ ವಿಶ್ವನಾಥ್‌ರವರು ತಮ್ಮ ಕ್ಷೇತ್ರದ ಬಗ್ಗೆ ಮಾತನಾಡಿದರು. 5 ಕೋಟಿ ರೂ.ಗಳಲ್ಲಿ ಬಹಳಷ್ಟು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ ಎಂದು ಹೇಳಿರುವುದರಿಂದ ಅದರ ಬಗ್ಗೆ ವಿವರಗಳನ್ನು ಕೊಡಿ ಎಂದು ನಾನು ಅವರಲ್ಲಿ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಅದನ್ನು ಕೊಟ್ಟರೆ, ನಾನು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಜೊತೆ ಮಾತನಾಡಿ ಆ ವಿಚಾರದ ಬಗ್ಗೆಯೂ ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವಂಥ ಮಾತನ್ನು ಈ

ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಮಾನ್ಯ ಶಾಸಕರಾದ ಬಿ.ಆರ್.ಪಾಟೀಲ್‌ರವರು ನಗರ ಪ್ರದೇಶಗಳ ಬಗ್ಗೆ ಪ್ರಸ್ತಾಪ ಮಾಡಿದರು. Drought affected area ಎಂದು ನಾವು declare ಮಾಡುವ ತಾಲ್ಲೂಕುಗಳ ಗ್ರಾಮೀಣ ಭಾಗಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆ. ಆದರೆ ನಗರ ಭಾಗಗಳಲ್ಲಿಯೂ ಸಹ ಕೂಲಿಕಾರರಿರುತ್ತಾರೆ, ಅವರಿಗೆ ಏನು ಕೆಲಸ ಕೊಡಬೇಕು ಎನ್ನುವಂಥಾದ್ದು ಇದೆ. ಮಾನ್ಯ ಎಂ.ಪಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿರುವ ಸಬ್ ಕಮಿಟಿಯಲ್ಲಿ ನಾವು ಇದನ್ನು ಚರ್ಚಿಸಿ ಇದರ ಬಗ್ಗೆ ಸರಿಯಾದಂಥ ಒಂದು ನಿರ್ಣಯವನ್ನು ಕೈಗೊಳ್ಳುತ್ತೇವೆ. ನಗರ ಪ್ರದೇಶಗಳಲ್ಲಿ ಇರುವಂಥವರಿಗೆ ಏನು ಮಾಡುತ್ತೀರಿ ಎನ್ನುವ ಬಗ್ಗೆ ಬಹಳಷ್ಟು ಶಾಸಕರು ಮಾತನಾಡಿದರು. ಹುಬ್ಬಳ್ಳಿ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದರೆ, ಹುಬ್ಬಳ್ಳಿ ನಗರದಲ್ಲಿರುವವರಿಗೆ ಏನು ಮಾಡುತ್ತೀರಿ ಎನ್ನುವಂಥ ಪ್ರಶ್ನೆಯಿದೆ. ಹೀಗಾಗಿ, ನಾವು ಇದನ್ನು ಸಬ್ ಕಮಿಟಿಯಲ್ಲಿಟ್ಟು ಸರಿಯಾದ ಒಂದು ನಿರ್ಣಯವನ್ನು ಕೈಗೊಳ್ಳುತ್ತೇವೆ. ಜನಸಂಖ್ಯೆ ಆಧಾರಿತ ಎನ್ನುವಂಥಾದ್ದನ್ನು ಮತ್ತು Action Plan ಎಷ್ಟು ತೆಗೆದುಕೊಳ್ಳಬೇಕು ಎನ್ನುವಂಥಾದ್ದರ ಬಗ್ಗೆಯೂ ಪ್ರಶ್ನೆಯನ್ನು raise ಮಾಡಿದರು. ಈಗ ನಾವೇನು ಮಾಡಿದ್ದೇವೆ ಎಂದರೆ, ಪ್ರತಿಯೊಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದರೆ, ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳು ಎಂದೇನಲ್ಲ. ಏಕೆಂದರೆ, ಒಂದು ತಾಲ್ಲೂಕು ಬಹಳ ಚಿಕ್ಕದಿರುತ್ತದೆ ಅಂದರೆ ಜಾಗದ ದೃಷ್ಟಿಯಿಂದಲೂ ಮತ್ತು ಜನಸಂಖ್ಯೆಯಿಂದಲೂ ಬಹಳ ಚಿಕ್ಕದಿರುತ್ತದೆ. ಮತ್ತೊಂದು ತಾಲ್ಲೂಕು ಜನಸಂಖ್ಯೆಯಲ್ಲಿ ಮತ್ತು ಜಾಗದಿಂದ ಬಹಳ ದೊಡ್ಡದಿರುತ್ತದೆ. ಹೀಗಾಗಿ, ನಾವು average ಆಗಿ ಹಣವನ್ನು ಕಳುಹಿಸಿರುತ್ತೇವೆ. ಪ್ರತಿಯೊಂದು ತಾಲ್ಲೂಕಿಗೂ ಒಂದು ಕೋಟಿ ರೂಪಾಯಿಗಳನ್ನೇ ಕೊಡಬೇಕು ಎನ್ನುವುದೇನೂ ಇಲ್ಲ. ಅಲ್ಲಿಯ District Minister ಮತ್ತು ಜಿಲ್ಲಾಧಿಕಾರಿಗಳು ಸೇರಿ ಸಮಾಲೋಚನೆ ಮಾಡಿ, ಅಲ್ಲಿಯ ಶಾಸಕರ ಜೊತೆಯಲ್ಲೂ ಸಮಾಲೋಚನೆ ಮಾಡಿ, ಎಲ್ಲಿ ಜನಸಂಖ್ಯೆ ಜಾಸ್ತಿ ಇದೆ, ವಿಸ್ತೀರ್ಣ ಜಾಸ್ತಿ ಇದೆ, ಯಾವ ರೀತಿ affected ಇದೆ ಎನ್ನುವುದನ್ನೆಲ್ಲಾ ನೋಡಿಕೊಂಡು re–allocation ಮಾಡುತ್ತಾರೆ. ಮೊನ್ನೆ ನಾನು ಕೋಲಾರ ಜಿಲ್ಲೆಗೆ review meetingಗೆ ಹೋಗಿದ್ದೆ. ಅಲ್ಲಿ ಒಂದು ತಾಲ್ಲೂಕಿಗೆ 98 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಮತ್ತೊಂದು ತಾಲ್ಲೂಕಿಗೆ 78 ಲಕ್ಷ

ರೂಪಾಯಿಗಳನ್ನು, ಮತ್ತೊಂದು ತಾಲ್ಲೂಕಿಗೆ 1 ಕೋಟಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಅವರು re–allocation ಮಾಡಿಕೊಂಡು distribute ಮಾಡಿಕೊಂಡಿದ್ದಾರೆ. ಆದ್ದರಿಂದ, ನಾವು ಯಾವುದೇ ಗೈಡ್‌ಲೈನ್ಸ್‌ನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು specific ಆಗಿ ತಿಳಿಸಿಲ್ಲ.

ಶ್ರೀ ಬಿ.ಆರ್.ಪಾಟೀಲ್: ಆದರೆ ಜಿಲ್ಲಾಧಿಕಾರಿಗಳು ನಮ್ಮನ್ನು ಕೇಳುವುದೇ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆ ಬಗ್ಗೆ ನಾವು ಸರಿಯಾಗಿ instructions ಕೊಡುತ್ತೇವೆ. ಕುಡಿಯುವ ನೀರಿನ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಮತ್ತು ಗೋಶಾಲೆಗಳ ಬಗ್ಗೆಯೂ ಹೇಳಿದ್ದಾರೆ. ಚಿತ್ರದುರ್ಗ, ಕೊಪ್ಪಳ, ತುಮಕೂರು ಜಿಲ್ಲೆಗಳಲ್ಲಿ ನಾವು ಈಗಾಗಲೇ ಗೋಶಾಲೆಗಳನ್ನು ತೆಗೆದಿದ್ದೇವೆ. ಎಲ್ಲ ಕಡೆಗಳಲ್ಲಿಯೂ ಕಾಮಗಾರಿಗಳು ನಡೆಯುತ್ತಿವೆ.

ಶ್ರೀ ಬಿ.ಆರ್.ಪಾಟೀಲ್: ತಿಂಗಳಿಗೆ ಐದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿ ನಾವು ಖಾಸಗಿ ಬಾವಿಗಳಿಂದ ನೀರು ತೆಗೆದುಕೊಂಡು ಬಂದಿದ್ದೇವೆ. ಎರಡು ವರ್ಷಗಳಾದರೂ ಅವರಿಗೆ ದುಡ್ಡು ಕೊಡುವುದಕ್ಕೆ ಆಗಿಲ್ಲ. ಅವರು ತಮ್ಮ ಬೆಳೆಯನ್ನು ಹಾಳು ಮಾಡಿಕೊಂಡು ನಮಗೆ ನೀರು ಕೊಟ್ಟಿದ್ದಾರೆ. ಹೀಗಾದರೆ, ಇನ್ನು ಮುಂದೆ ಯಾರೂ ನೀರು ಕೊಡುವುದಿಲ್ಲ. ಅದನ್ನೂ ತಾವು ನೋಡಿ.

ಶ್ರೀ ಹೆಚ್. ಆಂಜನೇಯ: ನನ್ನ ತಾಲ್ಲೂಕಿನಲ್ಲಿ ಮೂರು ಜನ ಶಾಸಕರಿದ್ದೇವೆ. ಹಾಗಾಗಿ ಒಂದು ಕೋಟಿ ರೂಪಾಯಿಗಳನ್ನು ನಾವು ಮೂರು ಜನರು ಹಂಚಿಕೊಳ್ಳಬೇಕಾಗಿದೆ.

ಶ್ರೀ ಬಿ.ಆರ್.ಪಾಟೀಲ್: ಆಂಜನೇಯ ಅವರೇ, ನಾನು ಪ್ರಸ್ತಾಪಿಸಿರುವಂಥ ಕೆಲವು ಪ್ರಶ್ನೆಗಳಿಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ಕೊಡುತ್ತಿದ್ದಾರೆ. ನಂತರ ತಾವು ಕೇಳಿ. ಏಕೆಂದರೆ ನನಗೂ ಉತ್ತರಸಿಗುವುದಿಲ್ಲ, ತಮಗೂ ಉತ್ತರ ಸಿಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈ ಬಗ್ಗೆ ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು, ಅಲ್ಲಿನ D.C. ಮತ್ತು ಶಾಸಕರು ಸಮಾಲೋಚನೆ ಮಾಡಿ ನಿರ್ಣಯ ಕೈಗೊಳ್ಳಬೇಕು. ಒಂದು ತಾಲ್ಲೂಕಿಗೆ average ಒಂದು ಕೋಟಿ ರೂಪಾಯಿಯ

ಹಾಗೆ ನಾವು ಹಣ ಕಳುಹಿಸಿರುತ್ತೇವೆ. ಆದ್ದರಿಂದ, ನೀವು ಅಲ್ಲಿ re–allocation ಮಾಡಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಇನ್ನೂ ಸ್ಪಷ್ಟವಾದ ಸೂಚನೆಯನ್ನು ನಾವು ಕಳುಹಿಸುತ್ತೇವೆ.

ಶ್ರೀ ಹೆಚ್.ವೈ.ಮೇಟಿ: ನಾನು ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ಈ ಮೂರು ತಾಲ್ಲೂಕುಗಳನ್ನು ಪ್ರತಿನಿಧಿಸುತ್ತೇನೆ. M.L.A.ಗಳಾದ ನಾವು ಅಲ್ಲಿನ ಯಾವುದೇ ಸಮಿತಿಗಳಿಗೆ ಅಧ್ಯಕ್ಷರಾಗುವುದಿಲ್ಲ, ಉಪಾಧ್ಯಕ್ಷರು ಅಥವಾ ಸಹ ಸದಸ್ಯರು ಆಗುತ್ತೇವೆ. ಮೂರೂ ತಾಲ್ಲೂಕುಗಳಲ್ಲಿ ಒಂದೇ ಟೈಂನಲ್ಲಿ ಮೀಟಿಂಗ್ ಕರೆದರೆ ನಾವು ಎಲ್ಲ ಕಡೆಗಳಲ್ಲಿಯೂ ಅಟೆಂಡ್ ಆಗುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ನಾನು ಏನು ಹೇಳುತ್ತೇನೆ ಎಂದರೆ, ನೀವು ಹಣವನ್ನು constituency wise ಕೊಡಿ. ಏಕೆಂದರೆ, ನಮ್ಮಲ್ಲಿ ಬಹಳ ಸಮಸ್ಯೆಯಾಗಿದೆ. ನಮ್ಮಂಥ ಕೆಲವು ಶಾಸಕರು ಸಹಕಾರ ಮಾಡುತ್ತಿದ್ದೇವೆ, ಹಾಗಾಗಿ ಪರವಾಗಿಲ್ಲ. ಇಲ್ಲದಿದ್ದರೆ ಎಷ್ಟು ಸಮಸ್ಯೆಯಾಗುತ್ತದೆ? ಹಾಗಾಗಿ, ನೀವು ಏನೇ ಕೊಟ್ಟರೂ ಮತಕ್ಷೇತ್ರವಾರು ಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್.ಕಿರಣ್‌ಕುಮಾರ್: ಕ್ಷೇತ್ರವಾರು ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು: Governor speech ಮೇಲೆ ಮಾತನಾಡುವುದು ಬೇಕಾದಷ್ಟು ಇದೆ. ಆಗ ಈ subject ಅನ್ನೂ ಅದರಲ್ಲಿ involve ಮಾಡಿಕೊಂಡು ಮಾತನಾಡಿ. ಈಗೇಕೆ ಸುಮ್ಮನೆ unnecessary ಯಾಗಿ ಎಲ್ಲವನ್ನೂ. ಮಾತನಾಡುತ್ತಿದ್ದೀರಿ. ಕೆಲವು points ಕೇಳಿದ್ದಾರೆ. ಅವುಗಳಿಗೆ ಉತ್ತರ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಅದನ್ನು ತೆಗೆದುಕೊಳ್ಳೋಣ. Individual ಆಗಿ ಯಾರ ತಾಲ್ಲೂಕುಗಳಲ್ಲಿ ಸಮಸ್ಯೆಗಳಿವೆ, ಅವರನ್ನು ನೀವು ಕರೆಸಿ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ಬರಗಾಲ ಕಾಮಗಾರಿಗಳ ಬಗ್ಗೆ, ಗೈಡ್‌ಲೈನ್ಸ್ ಬಗ್ಗೆ ಮತ್ತು ತಮ್ಮ ತಾಲ್ಲೂಕುಗಳ ಬಗ್ಗೆ ಶಾಸಕರಿಗೆ ಏನಾದರೂ ಸಮಸ್ಯೆಗಳಿದ್ದರೆ, ಅವುಗಳ ಬಗ್ಗೆ ವೈಯಕ್ತಿಕವಾಗಿ ಚರ್ಚೆ ಮಾಡೋಣ. ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅದನ್ನು ಬಗೆಹರಿಸೋಣ. ಇಲ್ಲಿಯವರೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಉಪಾಧ್ಯಕ್ಷರು: ಎಲ್ಲರ ಸಮಸ್ಯೆಯನ್ನೂ ಬಗೆಹರಿಸುತ್ತೇವೆ ಎಂದು ಹೇಳಿದ್ದಾರೆ. ಈಗ ಸದನವನ್ನು ಸೋಮವಾರ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 12ನೇ ಫೆಬ್ರವರಿ 2007ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

* * * * *

ಅನುಬಂಧ – I

662 (1136) : ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಡಿತರ ಚೀಟಿಯನ್ನು ಹೊಂದಿದವರೆಷ್ಟು ;

ಆ) ಫಲಾನುಭವಿಗಳಿಗೆ ಪರಿಷ್ಕರಿಸಿದ ಪಡಿತರ ಚೀಟಿಯನ್ನು ಹಂಚಲಾಗಿದೆಯೇ ;

ಇ) ಪಡಿತರ ಚೀಟಿ ಹಂಚಿಕೆಯಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) –

ಅ) ದಿನಾಂಕ: 5.2.2007 ರವರೆಗೆ ರಾಜ್ಯದಲ್ಲಿ ಪ್ರಸ್ತುತ ಪಡಿತರ ಚೀಟಿ ಕಾರ್ಡು ಹೊಂದಿರುವವರ ವಿವರ ಕೆಳಕಂಡಂತಿದೆ.

ಅನ್ನಪೂರ್ಣ	–	25,452
ಎಎವೈ	–	11,75,912
ಬಿಪಿಎಲ್	–	53,87,103
ಎಪಿಎಲ್	–	52,93,443
ಒಟ್ಟು	–	1,18,81,910